ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 5 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ ಭಾನುವಾರ ೨೦ ಏಪ್ರಿಲ್ ೨೦೨೫

ಸಿಇಟಿ ವೇಳೆ ಜನಿವಾರ ತೆಗೆಸಿದ ಘಟನೆ ಖಂಡಿಸಿ

ಮೈಸೂರಲ್ಲಿ ಬ್ರಾಹ್ಮಣ ಯುವ ವೇದಿಕೆ ಪ್ರತಿಭಟನೆ



ಸಿಇಟಿ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ಖಂಡಿಸಿ ಮೈಸೂರು ಬ್ರಾಹ್ಮಣ ಯುವ ವೇದಿಕೆಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.19(ಜಿಎ)–ಸಿಇಟಿ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿರುವ ಘಟನೆ ಖಂಡಿಸಿ ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.


ನಗರದ ಅಗ್ರಹಾರ ವೃತ್ತದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ಜಮಾವಣೆಗೊಂಡು ಬ್ರಾಹ್ಮಣ ಸಮುದಾಯದ ಮುಖಂಡರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ವಾಣಿವಿಲಾಸ ರಸ್ತೆ ಮಾರ್ಗವಾಗಿ ಕಾಲ್ನಡಿಗೆ ಮೂಲಕ ಕೃಷ್ಣರಾಜ ಪೊಲೀಸ್ ಠಾಣೆಗೆ ತೆರಳಿ ಅಧಿಕಾರಿಗಳಿಗೆ ದೂರು ನೀಡಿದರು.

ಶಿವಮೊಗ್ಗ ನಗರದಲ್ಲಿ ಸಿಇಟಿ ಪರೀಕ್ಷೆ ಪ್ರವೇಶ ಸಂಧರ್ಭದಲ್ಲಿ ವಿದ್ಯಾರ್ಥಿಗೆ ಜನಿವಾರ ತುಂಡರಿಸುವ ಮೂಲಕ ಬ್ರಾಹ್ಮಣ ಸಮುದಾಯದ ಧಾರ್ಮಿಕ ಆಚರಣೆಗಳಿಗೆ ಧಕ್ಕೆ ಬಂದಿದೆ. ರಾಜ್ಯ ಸರ್ಕಾರದ ಅಧಿಕಾರಿಗಳ ನಡೆ ಖಂಡಿಸಿ, ಅವರನ್ನು ಕೆಲಸದಿಂದ ವಜಾಗೊಳಿಸುವಂತೆ ಆಗ್ರಹಿಸಿ ವಿಪ್ರ ಸಮುದಾಯದವರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜನಿವಾರ ಎನ್ನುವುದು ಬ್ರಾಹ್ಮಣರ ಅಸ್ಮಿತೆ, ವಿಪ್ರ ಕುಟುಂಬದ ಪ್ರತಿಯೊಬ್ಬ ಗಂಡು ಮಗುವಿಗೆ 8 ವರ್ಷದಲ್ಲೆ ಬ್ರಹ್ಮೋಪದೇಶ ಮಾಡಿ ಗುರು ಹಿರಿಯರು ಸಮಾಜವನ್ನು ರಕ್ಷಿಸಿ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗುವಂತೆ ಗಾಯತ್ರಿ ಮಂತ್ರದ ಮೂಲಕ ಉಪದೇಶ ಮಾಡಲಾಗಿದ್ದು, ಇಂತಹ ಸಂಪ್ರದಾಯಕ್ಕೆ ಧಕ್ಕೆ ತರಲಾಗಿದೆ ಎಂದು ಕಿಡಿಕಾರಿದರು.

ಭಾರತದ ಪ್ರತಿಯೊಂದು ಜಾತಿ ಜನಾಂಗದ ಆಚರಣೆಗೆ ಸಮಾನ ಹಕ್ಕಿದೆ. ಆದರೆ ಬೀದರ್ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಜನಿವಾರ ಧರಿಸಿ ಬಂದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಕಿರುಕುಳ ನೀಡಿ, ಜನಿವಾರ ಕಸಿದಿರುವ ವಿಚಾರ ಇಡೀ ಬ್ರಾಹ್ಮಣ ಜನಾಂಗದ ಆಚರಣೆ, ನಂಬಿಕೆ, ಘನತೆಗೆ ಧಕ್ಕೆ ತಂದಿದೆ. ಸಮಾಜದಲ್ಲಿ ಅರ್ಚಕ, ಪೌರೋಹಿತ್ಯ, ಅಡುಗೆ ವೃತ್ತಿ ಮೇಲೆ ಅವಲಂಬಿತವಾಗಿರುವ ಬ್ರಾಹ್ಮಣರಿಗೆ ಮನೆಯಿಂದ ಹೊರಬಂದರೆ ಇನ್ನೇನಾದರೂ ತೊಂದರೆ ಕಾದಿದೆಯೋ ಎನ್ನುವ ಭಯ ಕಾಡುತ್ತಿದೆ. ಹಾಗಾಗಿ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಈ ಕೃತ್ಯವೆಸಗಿರುವ ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿ, ಕೆಲಸದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿಗಳಾದ ಡಿ.ಟಿ.ಪ್ರಕಾಶ್, ಡಾ.ಲಕ್ಷ್ಮೀ, ಮೇಲುಕೋಟೆ ವಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಸಂಸ್ಕೃತಿ ಚಿಂತಕ ಕೆ.ರಘುರಾಂ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಹೆಚ್.ಜಿ.ಗಿರಿಧರ್, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಅರ್ಚಕ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್.ಶ್ರೀಧರ್ ಮೂರ್ತಿ, ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ರವಿಶಾಸ್ತ್ರಿ, ಯೋಗ ನರಸಿಂಹ (ಮುರುಳಿ), ಕಡಕೋಳ ಜಗದೀಶ್, ಜಯಸಿಂಹ, ಶ್ರೀಧರ್, ಕೆ.ಎಂ.ನಿಶಾಂತ್, ವಿಜಯಕುಮಾರ್, ಶ್ರೀನಿವಾಸ್ ಬಾಶ್ಯಮ್, ಸುಧೀಂದ್ರ ಪ್ರಶಾಂತ್ ಮತ್ತಿತರರು ಪಾಲ್ಗೊಂಡಿದರು.

ಸೋಸಲೆ ಶ್ರೀ ವ್ಯಾಸರಾಜರ ಮಹಾ ಸಂಸ್ಥಾನದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಖಂಡನೆ



ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ

ಮೈಸೂರು,ಏ.19(ಜಿಎ)–ಶಿವಮೊಗ್ಗ ಹಾಗೂ ಬೀದರ್ ಜಿಲ್ಲೆಯ ಸಿ.ಇ.ಟಿ. ಸಂದರ್ಭದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ವಿಚಾರ ಅಸಂಖ್ಯ ಬ್ರಾಹ್ಮಣರ ಭಾವನೆಗೆ ಧಕ್ಕೆ ತಂದಿದೆ ಎಂದು ಸೋಸಲೆ ಶ್ರೀ ವ್ಯಾಸರಾಜರ ಮಹಾ ಸಂಸ್ಥಾನದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಖಂಡಿಸಿದ್ದಾರೆ. ಜನಿವಾರ ಎಂದರೆ ಅದು ಕೇವಲ ಮೂರು ಎಳೆಗಳ ಹತ್ತಿಯ ದಾರ ಮಾತ್ರ ಅಲ್ಲ. ಅದು ವಿಪ್ರರೂ ಸೇರಿದಂತೆ ಆರ್ಯ ವೈಶ್ಯರು, ಕ್ಷತ್ರಿಯ ಸಮುದಾಯದವರ ಆಚಾರ, ವಿಚಾರ, ಅನುಷ್ಠಾನದ ಸಂಕೇತವಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಪ್ರಕರಣ ಈಗಾಗಲೇ ರಾಜ್ಯಾದ್ಯಂತ ಸದ್ದು ಮಾಡಿದೆ. ನಾವೂ ಪ್ರಕರಣವನ್ನು ಖಂಡಿಸುತ್ತೇವೆ ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ಕಠಿಣ ಕ್ರಮ ವಹಿಸಿರುವುದನ್ನು ಸ್ವಾಗತಿಸಿದ್ದೇವೆ ಎಂದಿದ್ದಾರೆ. ಇನ್ನು ಮುಂದೆ ಈ ರೀತಿ ಪ್ರಸಂಗಗಳು ಯಾವುದೇ ಧರ್ಮದಲ್ಲಿ ನಡೆಯಬಾರದು ಎಂದು ಸಂದೇಶ ನೀಡುತ್ತಿದ್ದೇವೆ. ಪ್ರಕರಣದಲ್ಲಿ ನೊಂದವರ ಪರವಾಗಿ ಶ್ರೀ ಮಠ ಇದೆ. ಆ ವಿದ್ಯಾರ್ಥಿಯ ಶೈಕ್ಷಣಿಕ ಬದುಕಿಗೆ ಸದರಿ ಪ್ರಸಂಗದಿಂದ ಅನ್ಯಾಯವಾಗಬಾರದು. ಈ ದಿಸೆಯಲ್ಲಿ ಸರ್ಕಾರ ಕ್ರಮ ವಹಿಸಬೇಕು ಎಂದು ಆಗ್ರಹಿಸುತ್ತೇವೆ ಎಂದು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 20 ಭಾನುವಾರ 2025

ಸಂಪುಟ: 46 | ಸಂಚಿಕೆ: 5 | ಪುಟಗಳು: 12 ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುತ್ತಪ್ಪ ರೈ ಕಿರಿಯ ಮಗ ರಿಕ್ಕಿ ರೈ ಕೊಲೆ ಯತ್ನ

■ಕಾರು ಚಾಲಕ ಬಸವರಾಜ್ ದೂರು ಆಧರಿಸಿ ಮುತ್ತಪ್ಪ ರೈ ಎರಡನೇ ಪತ್ನಿ ಅನುರಾಧ, ರೈ ಆಪ್ತರಾದ ರಾಕೇಶ್ ಮಲ್ಲಿ, ನಿತೇಶ್ ಶೆಟ್ಟಿ, ವೈದ್ಯನಾಥನ್ ವಿರುದ್ಧ ಪ್ರಕರಣ ದಾಖಲು ■ಶುಕ್ರವಾರ ಸರಿರಾತ್ರಿ ಬಿಡದಿ ಸಮೀಪದ ತೋಟದಿಂದ ಬೆಂಗಳೂರಿಗೆ ಬರುತ್ತಿದ್ದಾಗ ಕಾರಿನ ಮೇಲೆ ಗುಂಡಿನ ದಾಳಿ


ರಿಕ್ಕಿ ರೈ


ಗುಂಡಿನ ದಾಳಿಗೊಳಗಾದ ಕಾರು


ಆಸ್ಪತ್ರೆಯಲ್ಲಿ ರಿಕ್ಕಿ ರೈ

ಬೆಂಗಳೂರು: ರಾಮನಗರ ಜಿಲ್ಲೆಯ ಬಿಡದಿ ಬಳಿ ಮಾಜಿ ಡಾನ್ ದಿವಂಗತ ಮುತ್ತಪ್ಪ ರೈ ಕಿರಿಯ ಪುತ್ರ ರಿಕ್ಕಿ ರೈ ಮೇಲೆ ಗುಂಡಿನ ದಾಳಿ ಮಾಡಿ, ಹತ್ಯೆಗೆ ಯತ್ನಿಸಲಾಗಿದ್ದು, ಮುತ್ತಪ್ಪ ರೈನ ಎರಡನೇ ಪತ್ನಿ ಅನುರಾಧಾ ಸೇರಿದಂತೆ ನಾಲ್ವರ ವಿರುದ್ಧ ಬಿಡದಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮುತ್ತಪ್ಪ ರೈ ಅವರ ಕಿರಿಯ ಪುತ್ರ 35 ವರ್ಷದ ರಿಕ್ಕಿ ರೈ ಮೇಲೆ ರಾಮನಗರ ತಾಲೂಕಿನ ಬಿಡದಿ ಹೋಬಳಿಯ ಕರಿಯಪ್ಪನ ದೊಡ್ಡಿಯಲ್ಲಿ ಶುಕ್ರವಾರ ಸರಿರಾತ್ರಿ ಗುಂಡಿನ ದಾಳಿ ನಡೆದಿದ್ದು, ಈ ಸಂಬಂಧ ಬಿಡದಿ ಪೊಲೀಸ್ ಠಾಣೆಯಲ್ಲಿ ಶನಿವಾರ ರಿಕ್ಕಿ ಅವರ ಕಾರು ಚಾಲಕ ಜಿ.ಬಸವರಾಜು ನೀಡಿದ ದೂರಿನ ಮೇರೆಗೆ ಮುತ್ತಪ್ಪ ರೈಗೆ ಆಪ್ತವಾಗಿದ್ದ ರಾಕೇಶ್ ಮಲ್ಲಿ, ರೈ ಅವರ 2ನೇ ಪತ್ನಿ ಅನುರಾಧ, ನಿತೇಶ್ ಎಸ್ಟೇಟ್ ಮಾಲೀಕರಾದ ನಿತೇಶ್ ಶೆಟ್ಟಿ ಹಾಗೂ ನಿತೇಶ್ ಎಸ್ಟೇಟ್ ಕಾರ್ಯನಿರ್ವಾಹಕ ನಿರ್ದೇಶಕ ವೈದ್ಯನಾಥನ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿವರ: ಪತ್ನಿ ಮತ್ತು ಮಗುವಿನೊಂದಿಗೆ ರಷ್ಯಾದಲ್ಲಿ ನೆಲೆಸಿರುವ ರಿಕ್ಕಿ, ವ್ಯವಹಾರ ಸಂಬಂಧ ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿರುತ್ತಾರೆ. ಇವರು ಹೆಚ್ಚಿನ ಸಮಯ ಸದಾಶಿವನಗರದ ಮನೆಯಲ್ಲಿ ಕಳೆಯುತ್ತಾರೆ. ಆಗಾಗ ಬಿಡದಿ ಬಳಿಯ ಕರಿಯಪ್ಪನ ದೊಡ್ಡಿಯಲ್ಲಿರುವ ಮನೆಗೂ ತೆರಳುತ್ತಾರೆ. ಪ್ರಾಣ ಬೆದರಿಕೆ ಇರುವ ರಿಕ್ಕಿ ಖಾಸಗಿ ಅಂಗರಕ್ಷಕರನ್ನೂ ಜೊತೆಯಲ್ಲಿರಿಸಿಕೊಂಡಿದ್ದಾರೆ. ಕಳೆದ 2 ದಿನಗಳ ಹಿಂದೆಯಷ್ಟೇ ರಷ್ಯಾದಿಂದ ಬೆಂಗಳೂರಿಗೆ ■6ನೇ ಪುಟಕ್ಕೆ

ಆಸ್ತಿ ವಿವಾದವೇ ಹತ್ಯೆ ಯತ್ನಕ್ಕೆ ಕಾರಣವೇ?

ಮುತ್ತಪ್ಪ ರೈ ಬೆಂಗಳೂರು, ಬಿಡದಿ, ಕರಾವಳಿ ಪ್ರದೇಶ, ದುಬೈ, ರಷ್ಯಾ ಸೇರಿದಂತೆ ಹಲವು ಕಡೆಗಳಲ್ಲಿ ಸುಮಾರು 2,000 ಕೋಟಿಗೂ ಹೆಚ್ಚು ಆಸ್ತಿ ಮಾಡಿದ್ದಾರೆ ಎಂದು ಕೆಲ ಆಪ್ತ ಮೂಲಗಳು ತಿಳಿಸಿವೆ. ಮುತ್ತಪ್ಪ ರೈ ಸಾಯುವ ಮುನ್ನವೇ ತನ್ನ ಆಸ್ತಿಯ ಬಗ್ಗೆ 41 ಪುಟಗಳ ವಿಲ್ ಬರೆದಿಟ್ಟಿದ್ದರು. ಇದರಲ್ಲಿ ಅವರ ಯಾವ್ಯಾಯ ಆಸ್ತಿ ಯಾರಿಗೆ ಸೇರಬೇಕು ಮತ್ತು ಎಷ್ಟು ಸೇರಬೇಕು ಎಂದು ತಿಳಿಸಿದ್ದರು. ಹೀಗಿದ್ದರೂ ಅವರ ಸಾವಿನ ಬಳಿಕ ಅವರ 2ನೇ ಪತ್ನಿ ಅನುರಾಧಾ ತನಗೆ ಕಾನೂನು ಪ್ರಕಾರ ಪಾಲು ಬಂದಿಲ್ಲ ಎಂದು ಕೋರ್ಟ್ ಮೆಟ್ಟಿಲೇರಿದ್ದು, ಅದರ ವಿಚಾರಣೆ ನಡೆಯುತ್ತಿರುವಾಗಲೇ ಮುತ್ತಪ್ಪ ರೈ ಮಕ್ಕಳು ಕೆಲ ಆಸ್ತಿಗಳನ್ನು ಮಾರಾಟ ಮಾಡಲು ಮುಂದಾಗಿದ್ದೇ ಮತ್ತಷ್ಟು ದ್ವೇಷಕ್ಕೆ ಕಾರಣವಾಯಿತು ಎನ್ನಲಾಗಿದೆ. ಅದೇ ವೇಳೆ ಮುತ್ತಪ್ಪ ರೈ ಅವರ ಮಾಜಿ ಬಂಟ ರಾಕೇಶ್ ಮಲ್ಲಿ, ರಿಕ್ಕಿಯೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, ನಂತರ ದುಷ್ಮನ್ ಆದ ನಿತೇಶ್ ಮತ್ತು ವೈದ್ಯನಾಥನ್ ಸಂಚಿನಲ್ಲಿ ಭಾಗಿಯಾಗಿರಬಹುದು ಎಂದು ಶಂಕಿಸಲಾಗಿದೆ. ರಿಕ್ಕಿ ಕಾರು ಚಾಲಕ ನೀಡಿದ ದೂರಿನಲ್ಲಿ ಈ ನಾಲ್ವರ ಹೆಸರಿದ್ದರೂ, ಪೊಲೀಸರು ಅವರನ್ನು ಶಂಕಿತರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಮರಗಳ ಹನನ ಪ್ರಕರಣ: ನಾವು ಮಾಡಿದ್ದು ಸರಿ

ನಮ್ಮ ವಿರುದ್ಧ ದೂರು ನೀಡಲಿ: ಡಿಸಿಎಫ್

ಅಭಿವೃದ್ಧಿಯಲ್ಲಿ ಇವೆಲ್ಲಾ ಮಾಮೂಲು; ಮೈಸೂರು ನಗರಪಾಲಿಕೆ ಆಯುಕ್ತ



ಮೈಸೂರು, ಏ.19(ಬಿಎಲ್‌ಯು)–ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಮರಗಳನ್ನು ಕಡಿದಿರುವುದರಲ್ಲಿ ಕಾನೂನು ಚೌಕಟ್ಟು ಮೀರಿದ್ದರೆ ಸರ್ಕಾರಕ್ಕೆ ನಮ್ಮ ವಿರುದ್ಧ ದೂರು ನೀಡಲಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸವಾಲು ಹಾಕಿದರೆ, ರಸ್ತೆ ಅಗಲೀಕರಣ ಸೇರಿದಂತೆ ಯಾವುದಾದರೂ ಅಭಿವೃದ್ಧಿ ಕಾರ್ಯ ಮಾಡುವಾಗ ಸಾರ್ವಜನಿಕರಿಂದ ಇಂತಹ ವಿರೋಧ ಸರ್ವೆ ಸಾಮಾನ್ಯ ಎಂದು ಪಾಲಿಕೆ ಅಧಿಕಾರಿಗಳು ತಮ್ಮ ನಿರ್ಧಾರ ಸಮರ್ಥಿಸಿಕೊಂಡಿದ್ದಾರೆ.

ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಮರಗಳ ಮಾರಣ ಹೋಮದ ವಿರುದ್ಧ ಪರಿಸರವಾದಿಗಳು ಆಕ್ರೋಶಗೊಂಡು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ ಹಲವು ದಶಕಗಳ ಮರಗಳಿಗೆ ಕೊಡಲಿ ಪೆಟ್ಟು ನೀಡಿರುವ ಪಾಲಿಕೆ ಹಾಗೂ ಅರಣ್ಯ ಇಲಾಖೆ ಈ ಬಗ್ಗೆ ಸ್ವಲ್ಪವೂ ಅಳುಕಿಲ್ಲದೆ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಮರಗಳ ಹನನದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಡಿಸಿಎಫ್ ಡಾ.ಬಸವರಾಜ್, ರಸ್ತೆ ಅಗಲೀಕರಣ ಮಾಡಲು ಮರಗಳನ್ನು ಕತ್ತರಿಸಿ ಅವುಗಳನ್ನು ತೆರವು ಮಾಡಿ ಎಂದು ಪಾಲಿಕೆ ಆಯುಕ್ತರು ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಕಾನೂನು ಚೌಕಟ್ಟು ವ್ಯಾಪ್ತಿಯಲ್ಲಿ ಮರಗಳನ್ನು ಕತ್ತರಿಸಿ ತೆರವು ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು.


ಡಾ.ಬಸವರಾಜ್


ಶೇಖ್ ಆಸೀಫ್

ಒಂದು ವೇಳೆ ನಾವು ಕಾನೂನು ಚೌಕಟ್ಟು ಮೀರಿ ಮರಗಳನ್ನು ಕತ್ತರಿಸಿದ್ದೇವೆ ಎನ್ನುವುದಾದರೆ ಸರ್ಕಾರಕ್ಕೆ ನಮ್ಮ ವಿರುದ್ಧ ದೂರು ನೀಡಲಿ. ಇದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ರಸ್ತೆ ಅಗಲೀಕರಣಕ್ಕೆ ಮರ ಕತ್ತರಿಸಲು ಪ್ರಸ್ತಾವನೆ ನೀಡಿದ ಪಾಲಿಕೆ ಇದಕ್ಕೆ ಜವಾಬ್ದಾರಿಯೇ ಹೊರತು ನಾವಲ್ಲ ಎಂದು ಡಾ.ಬಸವರಾಜು ಸ್ಪಷ್ಟನೆ ನೀಡಿದರು.

ಪಾಲಿಕೆ ಆಯುಕ್ತ ಸಮರ್ಥನೆ: ರಸ್ತೆ ಅಗಲೀಕರಣಕ್ಕೆ ಮರ ಕತ್ತರಿಸಿದ ನಿರ್ಧಾರವನ್ನು ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಕೂಡ ಸಮರ್ಥನೆ ಮಾಡಿಕೊಂಡಿದ್ದಾರೆ. ನರಸಿಂಹರಾಜ ಕ್ಷೇತ್ರದ ಶಾಸಕರ ವಿಶೇಷ ರಾಜ್ಯ ಹಣಕಾಸು ಅನುದಾನದಿಂದ ■6ನೇ ಪುಟಕ್ಕೆ

ರಾಜ್ಯದಲ್ಲಿ ಮತ್ತೆ ದಲಿತ ಸಿಎಂ ಕೂಗು

ಜಾತಿಗಣತಿ ಟೆನ್ಷನ್ ಮಧ್ಯೆಯೇ ಕಾಂಗ್ರೆಸ್‌ಗೆ ಮತ್ತೊಂದು ತಲೆಬಿಸಿ



ದೇವನಹಳ್ಳಿ: ರಾಜ್ಯದಲ್ಲಿ ಆಗಾಗ ದಲಿತ ಸಿಎಂ ಮಾಡಬೇಕೆಂಬ ಕೂಗು ಮುನ್ನೆಲೆಗೆ ಬರುತ್ತಾ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದೇವನಹಳ್ಳಿಯಲ್ಲಿ ಸಚಿವ ಕೆ.ಹೆಚ್. ಮುನಿಯಪ್ಪ ಪ್ರತಿಕ್ರಿಯೆ ನೀಡಿದ್ದು, ಮುಂದಿನ ದಿನಗಳಲ್ಲಿ ದಲಿತರಿಗೆ ಸಿಎಂ ಸ್ಥಾನ ಕೊಡುವಂತೆ ಪರೋಕ್ಷವಾಗಿ ಒತ್ತಾಯಿಸಿದರು. ಬೆಂಗಳೂರಿನ ದೇವನಹಳ್ಳಿಯಲ್ಲಿ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಎಲ್ಲಾ ಸಮುದಾಯಗಳಿಗೂ ಸಮಾನ ಪ್ರಾತಿನಿಧ್ಯ ಕೊಡುವುದು ಕಾಂಗ್ರೆಸ್ ಸರ್ಕಾರ ಮಾತ್ರ ನಾನೇ ಹೈಕಮಾಂಡ್‌ಗೆ ಹೇಳಿದ್ದೀನಿ. ಧರ್ಮಸಿಂಗ್ ಆದ ನಂತರ ಸಾಕಷ್ಟು ಜನ ಹಿರಿಯರು ಪಕ್ಷದಲ್ಲಿ ಇದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅಂತವರನ್ನು ಸಿಎಂ ಮಾಡಬೇಕು ಎಂದು ಹೇಳಿದ್ದೆ ಎನ್ನುವ ಮೂಲಕ ಪರೋಕ್ಷವಾಗಿ ದಲಿತರಿಗೆ ಸಿಎಂ ಸ್ಥಾನ ನೀಡುವಂತೆ ಆಗ್ರಹಿಸಿದರು. ■6ನೇ ಪುಟಕ್ಕೆ

ಜನಿವಾರ ಕತ್ತರಿಸಿದ್ದು ಬಹಳ ದೊಡ್ಡ ತಪ್ಪು



ಬೆಂಗಳೂರು: ಜನಿವಾರ ತೆಗೆಸಿ ಪರೀಕ್ಷೆ ಬರೆಸಿರುವುದು ಬಹಳ ದೊಡ್ಡ ತಪ್ಪು. ನಾನು ಕೂಡ ಇದನ್ನು ಖಂಡಿಸುತ್ತೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ನಾವು ಪರೀಕ್ಷೆ ಮಾಡುವಾಗ ನಿಯಮ ಪಾಲನೆ ಮಾಡಲು ಹೇಳುತ್ತೇವೆ. ಈ ತರಹ ಪಾಲನೆ ಮಾಡಲು ಹೇಳಿರಲ್ಲ. ಅಧಿಕಾರಿಗಳು ಎಲ್ಲವನ್ನೂ ಸರಿಪಡಿಸುತ್ತಾರೆ ಎಂದು ಭರವಸೆಯ ಮಾತುಗಳನ್ನಾಡಿದರು.

ರಿಕ್ಕಿ ರೈ ಮೇಲೆ ಗುಂಡಿನ ದಾಳಿ ವಿಚಾರವಾಗಿ ಪ್ರತಿಕ್ರಿಯಿಸಿ, ನನಗೆ ವಿಷಯ ಗೊತ್ತಾಗಿದೆ. ನಾನು ಮಾಹಿತಿ ಕೇಳಿದ್ದೇನೆ. ರಾತ್ರಿ 1 ಗಂಟೆಗೆ ಘಟನೆ ನಡೆದಿದೆ. ಹೆಚ್ಚಿನ ಮಾಹಿತಿ ಕೇಳಿದ್ದೇನೆ. ಔಟ್ ಆಫ್ ಡೇಂಜರ್ ಅಂತ ಹೇಳಿದ್ದಾರೆ. ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ದೇವರು : ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ಎರಡು ವರವ ಕೇಳಿಕೋ
ಗುಂಡ : ಒಂದನೇ ವರ ನನಗೆ ನಿದ್ರೆಯಲ್ಲಿ ಸಾವು ಬರಬೇಕು.
ದೇವರು : ಆಯ್ತು, ಇನ್ನೊಂದು ವರ ಕೇಳು.
ಗುಂಡ : ನನಗೆ ನಿದ್ರೆಯೇ ಬರಬಾರದು!

ಮೈಸೂರು ಮಿತ್ರ

ಭಾನುವಾರ, 20 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೆಳಕಿನಲ್ಲಿರುವಾಗ ಒಬ್ಬರಿಂದೊಬ್ಬರು ಸಿಗ್ತಾನೇ ಇರುತ್ತಾರೆ. ನೀನು ಹುಡುಕಬೇಕಾಗಿರುವುದು ಕತ್ತಲೆಯಲ್ಲಿ ಜೊತೆಯಾಗಿದ್ದವರನ್ನು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಕುದುರೆ ಅಂಗಳ ಹಾರಿತು.

ನಿಮ್ಮ ಪತ್ರಗಳು

ಮರಗಳ ಮಾರಣಹೋಮ ಅಮಾನವೀಯ

ಮಾನ್ಯರೆ,

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು 'ಸಾಲು ಮರಗಳ ನಿರ್ದಯ ಹನನ' ಶೀರ್ಷಿಕೆಯಡಿ ಬರೆದಿರುವ ಲೇಖನ ಓದಿ ನಿಜಕ್ಕೂ ಅತ್ಯಂತ ಬೇಸರ ತರಿಸಿತು.

ನಾವೆಲ್ಲ 'ಹಸಿರು ಕ್ರಾಂತಿ' ಕೇಳಿದ್ದೇವೆ. ಆದರೆ 'ಹಸಿರು ಹತ್ಯಾಕಾಂಡ' ಎಂಬುದನ್ನು ಕೇಳಿಲ್ಲ. ಮಾ. 13 ರಂದು ಮೈಸೂರು ನಗರಪಾಲಿಕೆ ಮತ್ತು ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ, ಹಸಿರಾಗಿ ಕಂಗೊಳಿಸುತ್ತಿದ್ದ 45 ಮರಗಳ ಮಾರಣಹೋಮ ಮಾಡಿರುವುದು ಅಮಾನವೀಯ.

ರಸ್ತೆ ಅಗಲೀಕರಣದ ಹೆಸರಿನಲ್ಲಿ ನಡೆದಿರುವ ಕೃತ್ಯ ನಿಜಕ್ಕೂ ಖಂಡನೀಯ. ಅಷ್ಟಕ್ಕೂ ಪೊಲೀಸ್ ಅಕಾಡೆಮಿಯ ಕಾಂಪೌಂಡ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗಳ ಮಧ್ಯೆ ಹಾದು ಹೋಗುವ ರಸ್ತೆಯನ್ನು ಇಷ್ಟೊಂದು ಮರಗಳನ್ನು ನೆಲಕ್ಕುರುಳಿಸಿ ಅಗಲೀಕರಣ ಮಾಡುವ ಅವಶ್ಯಕತೆ ಇತ್ತೇ. ಇದಕ್ಕೆ ಸಮರ್ಪಕ ಕಾರಣಗಳನ್ನು ಸಂಬಂಧಪಟ್ಟವರು ಕೊಡಲು ಶಕ್ತರೆ? ವಾಣಿಜ್ಯ ದಟ್ಟಣೆಯಾಗಲೀ, ವಾಹನ ದಟ್ಟಣೆಯಾಗಲೀ ಇರದ ಇಂತಹ ಸುರಕ್ಷಿತ ಸ್ಥಳದಲ್ಲಿ ಸುಂದರವಾಗಿ ಬೆಳೆದು ನಿಂತ ಮರಗಳಿಗೂ ಕೊಡಲಿ ಏಟು ಕೊಟ್ಟಿರುವುದನ್ನು ಯಾರಾದರೂ ಸಹಿಸಿಯಾರೆ? 'ಮೈಸೂರು ಮಿತ್ರ' ಈ ನಿಟ್ಟಿನಲ್ಲಿ ಸಂಬಂಧ ಪಟ್ಟವರನ್ನು ಎಚ್ಚರಿಸಲು ಪ್ರಯತ್ನಿಸಿದ್ದಾಗಲೂ,ಹಾರಿಕೆಯ ಉತ್ತರ ಬಂದಿರುವುದು ವ್ಯವಸ್ಥೆಯ ಅವ್ಯವಸ್ಥೆಗಳನ್ನು ಸಾರಿ ಹೇಳುವಂತಿದೆ.

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು.

ಪೊಲೀಸ್ ತನಿಖೆಗಳ ವಿಶ್ವಾಸಾರ್ಹತೆಗೆ ಕುಂದು

ಮಾನ್ಯರೆ,

ಕೊಡಗು ಜಿಲ್ಲೆ ಕುಶಾಲನಗರದ ಬಸವನಹಳ್ಳಿಯ ಸುರೇಶ್ ಎಂಬ ಅಮಾಯಕನನ್ನು ಪತ್ನಿ ಕೊಲೆಯ ಸುಳ್ಳು ಆರೋಪ ಹೊರೆಸಿ ಜೈಲಿನಲ್ಲಿ ಕೊಳೆಯುವಂತೆ ಮಾಡಿ ಎರಡು ವರ್ಷಗಳಷ್ಟು ದೀರ್ಘ ಕಾಲ ಸೆರೆಮನೆ ವಾಸ ಅನುಭವಿಸುವಂತೆ ಮಾಡಿದ ಪೊಲೀಸರ ವಿರುದ್ಧ ಸಾರ್ವಜನಿಕ ಆಕ್ರೋಶ ಭುಗಿಲೆದ್ದಿದೆ. ಮಾಧ್ಯಮಗಳಲ್ಲಿ ಕೂಡ ಈ ಪ್ರಕರಣದ ಬಗ್ಗೆ ವಿಶೇಷ ಲೇಖನಗಳು ಪ್ರಕಟವಾಗುತ್ತಿವೆ. ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ಮೈಸೂರಿನ ನ್ಯಾಯಾಲಯ, ಪೊಲೀಸರ ಬೇಜವಾಬ್ದಾರಿ ವರ್ತನೆಯ ಬಗ್ಗೆ ತೀವ್ರ ಬೇಸರ ಪಡಿಸಿದೆ.

ಪೊಲೀಸರ ಈ ರೀತಿಯ ಯಡವಟ್ಟುಗಳಿಂದ ಅಮಾಯಕರು ಅನ್ಯಾಯವಾಗಿ ಶಿಕ್ಷೆ ಅನುಭವಿಸಬೇಕಾಗುತ್ತದೆ. ಇದರ ಜೊತೆಗೆ ಸಮಾಜ ಕೂಡ ಅವರನ್ನು ಕೆಟ್ಟ ದೃಷ್ಟಿಯಿಂದ ನೋಡುವಂತಾಗುತ್ತದೆ. ಇದು ಪೊಲೀಸರು ನಡೆಸುವ ತನಿಖೆಗಳ ವಿಶ್ವಾಸಾರ್ಹತೆಯನ್ನು ಸಹಾ ಕುಂದಿಸುತ್ತದೆ. ಬೆಳಕಿಗೆ ಬಾರದ ಈ ರೀತಿಯ ಪ್ರಕರಣಗಳು ಇನ್ನೂ ಸಾಕಷ್ಟು ಇರಲಿಕ್ಕೆ ಸಾಧ್ಯ. ಜನರಿಗೆ ರಕ್ಷಣೆ ಒದಗಿಸಬೇಕಾದ ಪೊಲೀಸರೇ ಈ ರೀತಿ ಮಾಡಿದರೆ, ಜನರ ದುಃಖ ದುಮ್ಮಾನಗಳನ್ನು ಕೇಳುವವರ್‍ಯಾರು? ಇನ್ನು ಮುಂದಾದರು ಪೊಲೀಸರು ಇಂತಹ ಪ್ರಮಾದಗಳು ಸಂಭವಿಸದಂತೆ ಎಚ್ಚರ ವಹಿಸಬೇಕಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯ ನೀಡಬಹುದಾದ ತೀರ್ಪು ಕೂಡ ಅಷ್ಟೇ ಮಹತ್ವಪೂರ್ಣವಾಗಿರುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಸರ್ಕಾರವೇ ಪ್ಲಾಸ್ಟಿಕ್ ಉತ್ಪಾದನೆ ನಿಷೇಧಿಸಲಿ

ಮಾನ್ಯರೆ,


ಸರ್ಕಾರವೇ ಪ್ಲಾಸ್ಟಿಕ್ ನಿಷೇಧಿಸಿದರೆ ಪ್ಲಾಸ್ಟಿಕ್ ಸಮಸ್ಯೆಯೇ ಇರುವುದಿಲ್ಲ. ಪ್ಲಾಸ್ಟಿಕ್ ಫ್ಯಾಕ್ಟರಿ ತೆರೆಯಲು ಸರ್ಕಾರವೇ ಅನುಮತಿ ನೀಡಿ ಪ್ಲಾಸ್ಟಿಕ್ ಬಳಸಬೇಡಿ ಎನ್ನುವುದು ಹಾಸ್ಯಾಸ್ಪದ. ಸಿಗರೇಟ್ ತಯಾರಿಸಲು ಅನುಮತಿ ನೀಡಿ ಧೂಮಪಾನ ಆರೋಗ್ಯಕ್ಕೆ ಹಾನಿಕರ ಎಂದು ಹೇಳುವಂತಿದೆ. ಸರ್ಕಾರ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಿ, ಪ್ಲಾಸ್ಟಿಕ್ ಫ್ಯಾಕ್ಟರಿಗಳನ್ನು ಮುಚ್ಚಿಸಲಿ. ಅಂಗಡಿಗಳಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಮಾರಾಟ ಮಾಡುವುದನ್ನು ನಿಲ್ಲಿಸಲಿ. ಆಗ ಸಾರ್ವಜನಿಕರು ಬಟ್ಟೆ ಬ್ಯಾಗ್‌ಗಳನ್ನು ಬಳಸುತ್ತಾರೆ.

ಪ್ಲಾಸ್ಟಿಕ್ ಕರಗುವುದಿಲ್ಲ ಇದರಿಂದ ಪರಿಸರಕ್ಕೆ ಹಾನಿ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಪ್ಲಾಸ್ಟಿಕ್ ಕ್ಯಾನ್ಸರ್‌ಕಾರಕ ಪ್ಲಾಸ್ಟಿಕ್ ತಿಂದು ದನಕರುಗಳು ಸಾಯುತ್ತಿವೆ. ಇಷ್ಟೆಲ್ಲಾ ದುಷ್ಪರಿಣಾಮಗಳಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿರುವುದೇಕೆ? ಈ ಹಿನ್ನೆಲೆಯಲ್ಲಿ ಸರ್ಕಾರ ಪ್ಲಾಸ್ಟಿಕ್ ನಿಷೇಧಿಸಿ, ಪ್ಲಾಸ್ಟಿಕ್ ತಯಾರಿಸುವವರ ಮೇಲೆ, ಮಾರಾಟ ಮಾಡುವವರ ಮೇಲೆ, ಬಳಸುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಿ ಎಂಬುದೇ ಎಲ್ಲಾ ಸಾರ್ವಜನಿಕರ ಅಭಿಪ್ರಾಯ. ಅದರಂತೆ ಸರ್ಕಾರ ಪ್ಲಾಸ್ಟಿಕ್ ನಿಷೇಧ ಆದೇಶವನ್ನು ಶೀಘ್ರವಾಗಿ ಹೊರಡಿಸಲಿ ಎಂದುದೇ ನಮ್ಮ ಆಶಯ.

–ಬಿ.ಜಿ. ರಂಗೇಗೌಡ, ಮೈಸೂರು.

ರಸ್ತೆ ವಿಸ್ತರಣೆ ಹೆಸರಿನಲ್ಲಿ ನಡೆದ ಮರಗಳ ಹನನ? ಸಾರ್ವಜನಿಕ ತಾಳ್ಮೆಗೆ ಧಕ್ಕೆಯಾಗುತ್ತಿದೆ

ಮಾನ್ಯರೆ,



ಮೈಸೂರಿನಲ್ಲಿ ಮಾರ್ಚ್ 13 ರಂದು ರಸ್ತೆ ವಿಸ್ತರಣೆ ಯೋಜನೆಯ ಅಡಿಯಲ್ಲಿ ಸುಮಾರು 40 ಹಳೆಯದಾದ ಪೂರ್ಣ ಬೆಳೆಯದ ಮರಗಳನ್ನು ಹನನ ಈ ಕಟಾವು ಮೈಸೂರು ಮಹಾನಗರ ಪಾಲಿಕೆ ಮತ್ತು ಅರಣ್ಯ ಇಲಾಖೆಯ ಅನುಮತಿಯಿಂದ ನಡೆದದ್ದು ನಿಜ. ಆದರೆ ಈ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ನಗರಾಭಿವೃದ್ಧಿಯ ಹೆಸರಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಈ ರೀತಿಯ ಅರಣ್ಯ ನಾಶವು ಪರಿಸರ ಸಮತೋಲನಕ್ಕೆ ಅಪಾಯ ತಂದಿಡುತ್ತಿದೆ. ಈ ಪ್ರವೃತ್ತಿ ಮುಂದುವರಿದರೆ, ಸಾಂಸ್ಕೃತಿಕ ನಗರಿ ಎಂದೇ ಹೆಸರಾದ ನಮ್ಮ ಮೈಸೂರು ಕಾಂಕ್ರೀಟ್ ಕಾಡಾಗಿ ಪರಿವರ್ತನೆಯಾಗುವುದು ಅನಿವಾರ್ಯ. ಸಂಬಂಧಿತ ಅಧಿಕಾರಿಗಳು ಕೂಡಲೇ ಮರಗಳ ಪುನರ್ ಪೋಷಣೆಗೆ ಕ್ರಮ ಕೈಗೊಳ್ಳಬೇಕು ಮತ್ತು ಭವಿಷ್ಯದಲ್ಲಿ ಈ ರೀತಿಯ ಕ್ರಮಗಳು ಪುನರಾವೃತ್ತಿಯಾಗದಂತೆ ನೋಡಿಕೊಳ್ಳಬೇಕು. ನಗರದ ಭವಿಷ್ಯವನ್ನು ಹಸಿರು ಸಹವಾಸದೊಂದಿಗೆ ನಿರ್ವಹಿಸುವ ಹೊಣೆ ನಮ್ಮೆಲ್ಲರ ಮೇಲಿದೆ.

–ಶಶಾಂಕ್ ಹೊಳ್ಳ, ಕಾನೂನು ವಿದ್ಯಾರ್ಥಿ




ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ಅರ್ಧ ಶತಮಾನದ ಅದ್ಭುತಗಳು!





ದೇವರಾಜ ಅರಸು ಹೆಚ್.ವಿಶ್ವನಾಥ್

> ನಾವು ಎಷ್ಟು ಪುಣ್ಯವಂತರು ಎನ್ನಿಸುತ್ತದೆ. ಐವತ್ತು ವರ್ಷ ಕಾಲ ನಮ್ಮನ್ನು ಹೆತ್ತವರಿಗೆ, ಸಾಕಿದವರಿಗೆ, ಸಾರ್ವಜನಿಕ ಜೀವನದಲ್ಲಿ ಅವಕಾಶ ಕೊಟ್ಟ ಜನರಿಗೆ, ನಮ್ಮ ದಿ॥ ಡಿ.ದೇವರಾಜ ಅರಸರಿಗೆ, ಎಚ್.ಡಿ. ದೇವೇಗೌಡರಿಗೆ, ದಿ॥ ಎಸ್.ಎಂ. ಕೃಷ್ಣರಿಗೆ, ಎಂ.ವೀರಪ್ಪ ಮೊಯ್ಲಿಯವರು ಮುಂತಾಗಿ ಕೈಹಿಡಿದು ಬೆಳೆಸಿದವರಿಗೆ, ನಮ್ಮ ಇಡೀ ಕುಟುಂಬಕ್ಕೆ ಶತಕೋಟಿ ನಮನಗಳನ್ನು ಸಮರ್ಪಿಸುತ್ತೇನೆ. ನನಗೀಗ 78 ವರ್ಷ. ಅದರ ಸವಿ ನೆನಪಿಗಾಗಿ ಸ್ನೇಹಬಳಗ ಎಲ್ಲರನ್ನೂ ಕರೆದು ನಮ್ಮೂರಿನ ದೇವಸ್ಥಾನದಲ್ಲಿ ಕಾರ್ಯಕ್ರಮ ಮಾಡಿ ಹರಸುತ್ತಿರುವುದು ನಮ್ಮ ಇಡೀ ಕುಟುಂಬದ ಪುಣ್ಯ.

ಕೃಷ್ಣರಾಜನಗರ ತಾಲೂಕಿನ ಪುಟ್ಟ ಹಳ್ಳಿ ಅಡಗೂರಿನಲ್ಲಿ ನಿರಕ್ಷರ ಕುಕ್ಷಿಗಳ ಕುಟುಂಬದಲ್ಲಿ ಜನಿಸಿದ ನಾನು ಸಮಾಜದ, ಸರ್ಕಾರದ ಸಹಕಾರದಿಂದ ಅಕ್ಷರ–ಅರೋಗ್ಯ ಪಡೆದು ವಕೀಲನಾಗಿ, ರಾಜಕಾರಣಿಯಾಗಿ, ಸರಕಾರಗಳ ಒಂದು ಭಾಗವಾಗಿ ಕಾರ್ಯ ನಿರ್ವಹಿಸುವ ಅವಕಾಶ ಪಡೆದು ಧನ್ಯನಾಗಿದ್ದೇನೆ.

ಇವತ್ತಿಗೆ ಸರಿಯಾಗಿ ಐವತ್ತು ವರ್ಷಗಳ ಹಿಂದೆ ನನ್ನೂರು ಅಡಗೂರಿಗೆ ಕೂಗಳತೆಯಲ್ಲಿರುವ ಕೃಷ್ಣರಾಜಪೇಟೆ ತಾಲೂಕಿನ ಆಲಂಬಾಡಿ ಕಾವಲಿನ ತುಂಬು ಕುಟುಂಬದಿಂದ ಬಂದಂತಹ ಶಾಂತಾಳನ್ನು (20.04.1975) ಗುರುಹಿರಿಯರ, ಬಂಧು–ಬಳಗದವರ, ಸ್ನೇಹ ಬಳಗದ ಸಮಕ್ಷಮದಲ್ಲಿ ಅಗ್ನಿ ಸಾಕ್ಷಿಯಾಗಿ ಕೈಹಿಡಿದೆ. ಇಂದು ನಮ್ಮ ವಿವಾಹದ 50ನೇ ವಾರ್ಷಿಕೋತ್ಸವ.

ನಾನು ವೃತ್ತಿಯಲ್ಲಿ ವಕೀಲನಾಗಿ ಮತ್ತು ಪ್ರವೃತ್ತಿಯಲ್ಲಿ ರಾಜಕಾರಣಿಯಾಗಿ ಕೃಷ್ಣರಾಜನಗರಕ್ಕೆ ಬಂದು ನೆಲೆಯೂರಿದ್ದು ಸಹ 1975ರಲ್ಲಿ. ಹೆತ್ತವರು ನನ್ನ ತಂದೆ ತಾಯಿಗಳಾದರೂ, ನನ್ನ ಕೃಷ್ಣರಾಜನಗರ ತಾಲೂಕಿನ ಜನರು ಅವರ ಮಡಿಲಲ್ಲಿಟ್ಟು ನನ್ನನ್ನು ಪೋಷಿಸಿದರು. ಮತ್ತು ಇಷ್ಟೆತ್ತರಕ್ಕೆ ನನ್ನನ್ನು ಬೆಳೆಸಿದವರು ನನ್ನ ಕೃಷ್ಣರಾಜನಗರ ತಾಲೂಕಿನ ಎಲ್ಲಾ ಜಾತಿ–ಜನಾಂಗ–ಧರ್ಮ–ಭಾಷಿಕರು.

ನನ್ನ ಲಾ ಕಾಲೇಜಿನ ಸಹಪಾಠಿ ಮತ್ತು ಮೈಸೂರು ಲಾ ಕೋರ್ಟಿನಲ್ಲಿ ನನ್ನ ಜೊತೆಗಾರ; ಹಿರಿಯ ವಕೀಲರಾಗಿದ್ದ ಡಾ॥ ಅಬ್ದುಲ್ ಘನಿ ಸಾಹೇಬರ ಮಾರ್ಗದರ್ಶನದಲ್ಲಿ ನನ್ನೊಟ್ಟಿಗೇ ಬೆಳೆದವರು ಗಂಧನಹಳ್ಳಿಯ ಲಾಯರ್ ಜಿ.ಆರ್.ರಾಮೇಗೌಡರು. ನಮ್ಮಿಬ್ಬರಿಗಿಂತ ಸೀನಿಯರ್ ಆಗಿದ್ದವರು ಇಂದು ಮುಖ್ಯಮಂತ್ರಿಗಳಾಗಿರುವ ಸಿದ್ದರಾಮಯ್ಯನವರು. ಜಿ.ಆರ್. ರಾಮೇಗೌಡರು ಮತ್ತು ನಾನು ಒಟ್ಟಿಗೇ ಲಾಯರ್‌ಗಳಾಗಿ ಕೃಷ್ಣರಾಜನಗರದ ಲಾ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡಿದವರು.

ನಮ್ಮ ಕೋರ್ಟಿನಲ್ಲಿ ಬಹಳ ಸನಿಹದಲ್ಲಿದ್ದ ಚಂದಗಾಲು ಲಕ್ಷ್ಮಿನಾರಾಯಣಗೌಡರ ಮನೆಯಲ್ಲಿ ಬಾಡಿಗೆಗೆ ಬಂದೆವು. ಮಹಡಿಯ ಮೇಲೆ ನಮ್ಮ ಆಫೀಸ್. ನಾನು ಕೆಳಗಡೆ ಇದ್ದ ಒಂದು ಕೊಠಡಿಯ ಮನೆಗೆ ಸಂಸಾರ ಸಮೇತವಾಗಿ ಬಂದು ನೆಲೆಸಿದೆ. ಬಹಳ ಪುಟ್ಟಮನೆ. ಪತ್ನಿ ಶಾಂತಾಳಿಗೆ ಆ ಮನೆ ನೋಡಿ ಬಹಳ ಕಸಿವಿಸಿಯಾಯಿತು. ಕಾರಣ, ಅವಳು ಬೆಳೆದ ಮನೆ, ಬಂದ ಮನೆ ದೊಡ್ಡ ದೊಡ್ಡ ಮಹಡಿ ಮನೆಗಳು. ಆದರೂ ನಗುನಗುತ್ತಲೇ ಬಂದು ಬಾಡಿಗೆಯ ಮನೆಯಲ್ಲಿ ಹಾಲುಕ್ಕಿಸಿ ಸಂಸಾರ ಶುರು ಮಾಡಿದಳು.

ನನ್ನ ವೃತ್ತಿ–ಪ್ರವೃತ್ತಿಗಳು ಮುಂದುವರೆಯುತ್ತಿರುವಾಗಲೇ ಹಾಗೆಯೇ ನನಗೆ ರಾಜಕೀಯ ಅದೃಷ್ಟದ ಬಾಗಿಲು ತೆರೆಯಿತು. ಅದೇನೆಂದರೆ ಒಂದು ದಿನ ನಮ್ಮ ಕೋರ್ಟಿನ ಎದುರು ಮನೆಯಲ್ಲಿ ವಾಸವಾಗಿದ್ದ ಹಿರಿಯ ಕಾಂಗ್ರೆಸ್ ಮುಖಂಡರು ಮತ್ತು 'ಪ್ರಜಾವಾಣಿ' ಪತ್ರಿಕೆಯ ವಿತರಕರು, ವೀರಶೈವ ಮುಖಂಡರೂ ಆಗಿದ್ದ ಡಾ॥ ಬಿ.ಎಸ್.ಶಿವಪ್ಪಶೆಟ್ಟರು ನನ್ನನ್ನು ಅವರ ಮನೆಗೆ ಮಧ್ಯಾಹ್ನದ ಊಟಕ್ಕೆ ಕರೆದರು. ಮಧ್ಯಾಹ್ನ ಕೋರ್ಟಿನಲ್ಲಿಯೂ ನಮಗೆ ಅಂತಹ ಕೆಲಸವೇನೂ ಇರಲಿಲ್ಲ. ನಾನು ಮತ್ತು ಜಿ.ಆರ್.ರಾಮೇಗೌಡರು ಶಿವಪ್ಪಶೆಟ್ಟರ ಮನೆಗೆ ಊಟಕ್ಕೆ ಹೋದೆವು.

ಶಿವಪ್ಪ ಶೆಟ್ಟರ ಮನೆಯಲ್ಲಿ ತಾಲೂಕು ಕಾಂಗ್ರೆಸ್ ಪಕ್ಷದ ಘಟಾನುಘಟಿಗಳೆಲ್ಲಾ ಸೇರಿದ್ದರು. ಶಿವಪ್ಪ ಶೆಟ್ಟರು ಎಲ್ಲರನ್ನು ನಮಗೆ ಪರಿಚಯಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ದಿ॥ ಕಗ್ಗೆರೆ ರಾಮಸ್ವಾಮಿಗೌಡರು, ದಿ॥ ಹೆಬ್ಬಾಳು ಸಣ್ಣ ರಾಮೇಗೌಡರು, ದಿ॥ ಮಂಚನಹಳ್ಳಿ ಭದ್ರೇಗೌಡರು, ದಿ॥ ಹೊಸೂರು ಹೆಚ್.ಡಿ.ದೇವೇಗೌಡರು, ದಿ॥ ಸಿದ್ದಾಪುರ ದೊಡ್ಡೇಗೌಡರು, ದಿ॥ ದೂಲಿ ಸತ್ಯನಾರಾಯಣಶೆಟ್ಟರು, ಹೊಗೆಸೊಪ್ಪಿನ ವ್ಯಾಪಾರಿಗಳಾದ ದಿ॥ ಸಾಹುಕಾರ್ ಅಹಮ್ಮದ್ ಪಾಷಾರವರು, ದಿ॥ ಅಡಗೂರು ಪಾಪೇಗೌಡರು, ದಿ॥ ಗಳಿಗೆಕೆರೆ ಗಂಗಯ್ಯನವರು, ಜಿ.ಎಸ್.ಕೆಂಪೂವಯ್ಯನವರು, ದಿ॥ ಮೇಲೂರು ಅಪ್ಪಾಜಯ್ಯನವರು, ದಿ॥ ಗೊರಗುಂಡಿ ಶಿವಣ್ಣನವರು ಮುಂತಾಗಿ ಬಹಳ ಜನ ಮುಖಂಡರನ್ನು ಪರಿಚಯಿಸುತ್ತಾ ಕಗ್ಗೆರೆ ರಾಮಸ್ವಾಮಿಗೌಡರನ್ನು ಮಾತನಾಡಲು ತಿಳಿಸಿದರು.

ಆಗ ರಾಮಸ್ವಾಮಿಗೌಡರು, 'ನೋಡಿ ಲಾಯರ್ ಸಾಹೇಬರೇ; ಈಗಿರುವ ಕಾಂಗ್ರೆಸ್ ಶಾಸಕರಾದ ಎಚ್.ಬಿ.ಕೆಂಚೇಗೌಡರಿಗೂ ಮತ್ತು ಮುಖ್ಯಮಂತ್ರಿ ಡಿ.ದೇವರಾಜ್ ಅರಸ್‌ರಿಗೂ ಮನಸ್ತಾಪವಾಗಿದ್ದು, ಮುಂದೆ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣರಾಜನಗರ ವಿಧಾನಸಭೆಗೆ ಬೇರೆ ಅಭ್ಯರ್ಥಿಯನ್ನು ಗಮನಿಸಲು ನಮ್ಮಗಳಿಗೆ ತಿಳಿಸಿದ್ದಾರೆ. ಹಾಗಾಗಿ ನಮ್ಮೆಲ್ಲರ ಆಯ್ಕೆ ನೀವೇ ಎಂದು ನಮ್ಮೆಲ್ಲರಿಗೂ ಅನಿಸಿದೆ ಹಾಗಾಗಿ ನಾಳೆಯೇ ಅರಸರನ್ನು ನೋಡಲು ನೀವು ಸಜ್ಜಾಗಿ ಬರಬೇಕು' ಎಂದು ತಿಳಿಸಿದರು.

ಅದರಂತೆ ನಾನು ಮುಖಂಡರೊಡಗೂಡಿ ಬೆಂಗಳೂರಿಗೆ ತಲುಪಿ ಅರಸರನ್ನು ಕಂಡೆವು. ಅರಸರು ನಮ್ಮನ್ನು ಬಹಳ ಆತ್ಮೀಯತೆಯಿಂದ ಕಂಡು ಮಾತನಾಡಿಸಿದರು. 'ವಿಶ್ವನಾಥ್, ಮುಂದೆ ನಿಮಗೆ ಒಳ್ಳೆ ಭವಿಷ್ಯ ಕಾದಿದೆ. ಮುಖಂಡರೊಡಗೂಡಿ ಮುಂದಿನ ಚುನಾವಣೆಗೆ ತಯಾರಾಗಿ ಎಂದು ಹೇಳುತ್ತಾ ಅವರ ಆಪ್ತ ಸಹಾಯಕರಾದ ಗೋಪಾಲ ಶಾಸ್ತ್ರಿಗೆ ವಿಶ್ವನಾಥರ ಸಂಪೂರ್ಣ ವಿವರ ಪಡೆದುಕೊಳ್ಳಿ ಎಂದರು.

ಇದಾದ, ಕೇವಲ ಹದಿನೈದು ದಿನಗಳಲ್ಲಿ ನನ್ನನ್ನು ಜಿಲ್ಲಾ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿಯೂ ಮತ್ತು ಭೂ ಸುಧಾರಣಾ ಕಾನೂನಿನ ಟ್ರಿಬ್ಯೂನಲ್ ಮೆಂಬರ್ ಆಗಿ ಆದೇಶ ಮಾಡಿ ಕಳಿಸಿದರು. ಇದರಿಂದ ನನಗೆ ಹೆಚ್ಚು ಜನ ಸಂಪರ್ಕ ಮಾಡಲು ಅವಕಾಶವಾಯಿತು. ತಾಲೂಕಿನ ಹಿರಿಯರ ಮಾರ್ಗದರ್ಶನದಿಂದ ಸರ್ಕಾರದ ಕೆಲಸ, ಕಾಂಗ್ರೆಸ್ ಪಕ್ಷದ ಕೆಲಸ, ವಕೀಲಿ ಕೆಲಸ ಎಲ್ಲವನ್ನು ನಿಷ್ಠೆಯಿಂದ ಮಾಡಿದೆ. ವಕೀಲಿ ಸಹವರ್ತಿ ಜಿ.ಆರ್.ರಾಮೇಗೌಡರು ಮತ್ತು ನನ್ನ ವಕೀಲಿ ಕಚೇರಿಯ ಆಪ್ತ ಸಹಾಯಕ ಆರ್. ನಟರಾಜ್ ನನಗಾಗಿ ಹೆಚ್ಚು ಶ್ರಮಿಸಿದರು.

ಇಷ್ಟೆಲ್ಲಾ ಆದರೂ ನಾನು ಆ ಪುಟ್ಟ ಮನೆಯಲ್ಲಿಯೇ ನನ್ನ ಶಾಂತ ಮತ್ತು ನನ್ನ ಪುಟ್ಟ ಮಕ್ಕಳಾದ ಇಂದಿರಾ, ಅಮಿತ್, ಸಂತೋಷ್ ಜೊತೆ ಹಾಯಾಗಿದ್ದೆ. ಶಾಂತಾ ಮನೆಗೆ ಯಾರೇ ಬಂದರೂ ಉಪಚರಿಸುವುದು, ಒಳ್ಳೆಯ ಮಾತನಾಡುವುದರ ಜೊತೆಗೆ ಅಡಗೂರಿನಲ್ಲಿಯೂ ನನ್ನ ತಾಯಿಯ ಜೊತೆಗೆ ಕೃಷಿಯಲ್ಲೂ ಸಹಕರಿಸುತ್ತಿದ್ದಳು.

ನಮ್ಮ ಜನರು ನನ್ನನ್ನು ಎಷ್ಟೆತ್ತರಕ್ಕೆ ಬೆಳೆಸಿದರೂ, ನಾನು ಕಾಂಗ್ರೆಸ್ ಪಕ್ಷದಲ್ಲಿ ಮತ್ತು ಸರಕಾರದಲ್ಲಿ ಎಷ್ಟೇ ದೊಡ್ಡ ಹುದ್ದೆಗೇರಿದರೂ ಅವಳು ಶಾಂತವಾಗಿಯೇ ಮನೆಯನ್ನು ನಿರ್ವಹಿಸುತ್ತಿದ್ದಳು. ನಾನು ಮಂತ್ರಿಯಾಗಿ ಸರಕಾರೀ ಬಂಗಲೆಯಲ್ಲಿದ್ದಾಗಲೀ ಅವಳು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಲು ಒಪ್ಪಲಿಲ್ಲ. 'ನಿಮ್ಮ ಮಂತ್ರಿಗಿರಿ ಹೋದ ಮೇಲೆ ನಾವೂ ಸಹ ಊರಿಗೆ ವಾಪಸ್ ಹೋಗಲೇಬೇಕು. ಆಗ ನಮ್ಮ ಜನ, ಸರೀಕರು ಏನಂದಾರೂ, ಬೇಡಿ ಬೇಡಿ ನಾನು ಅತ್ತೆ, ಮಾವ, ಮಕ್ಕಳು ಇಲ್ಲೇ ಇರುತ್ತೇವೆ. ಯಾವಾಗಲಾದರೂ ಬಂದು ಹೋಗುತ್ತೇವೆ' ಎಂದು ಸ್ವಾಭಿಮಾನದ ಮಾತನಾಡಿದ್ದಳು. ನಿಜಕ್ಕೂ ಅವಳು ನನ್ನೆಲ್ಲಾ ಬೆಳವಣಿಗೆಗಳಿಗೆ ಸಹಕಾರಿಯಾಗಿ ನಿಂತವಳು; ಏನನ್ನೂ ಆಶಿಸದೆ.

ನಾವು ಎಷ್ಟು ಪುಣ್ಯವಂತರು ಎನ್ನಿಸುತ್ತದೆ. ಐವತ್ತು ವರ್ಷ ಕಾಲ ನಮ್ಮನ್ನು ಹೆತ್ತವರಿಗೆ, ಸಾಕಿದವರಿಗೆ, ಸಾರ್ವಜನಿಕ ಜೀವನದಲ್ಲಿ ಅವಕಾಶ ಕೊಟ್ಟ ಜನರಿಗೆ, ನಮ್ಮ ದಿ॥ ಡಿ.ದೇವರಾಜ ಅರಸರಿಗೆ, ಎಚ್.ಡಿ. ದೇವೇಗೌಡರಿಗೆ, ದಿ॥ ಎಸ್.ಎಂ. ಕೃಷ್ಣರಿಗೆ, ಎಂ.ವೀರಪ್ಪ ಮೊಯ್ಲಿಯವರು ಮುಂತಾಗಿ ಕೈಹಿಡಿದು ಬೆಳೆಸಿದವರಿಗೆ, ನಮ್ಮ ಇಡೀ ಕುಟುಂಬಕ್ಕೆ ಶತಕೋಟಿ ನಮನಗಳನ್ನು ಸಮರ್ಪಿಸುತ್ತೇನೆ. ನನಗೀಗ 78 ವರ್ಷ. ಅದರ ಸವಿ ನೆನಪಿಗಾಗಿ ಸ್ನೇಹಬಳಗ ಎಲ್ಲರನ್ನೂ ಕರೆದು ನಮ್ಮೂರಿನ ದೇವಸ್ಥಾನದಲ್ಲಿ ಕಾರ್ಯಕ್ರಮ ಮಾಡಿ ಹರಸುತ್ತಿರುವುದು ನಮ್ಮ ಇಡೀ ಕುಟುಂಬದ ಪುಣ್ಯ. ಸರ್ವರನ್ನು ತನ್ನೊಡಲಿನಲ್ಲಿ ತಣ್ಣಗೆ ಇಟ್ಟು ಆಶೀರ್ವದಿಸುತ್ತಿರುವ ಭೂಮಿ ತಾಯಿಗೆ ಹಣೆ ಒಡ್ಡಿ ನಮಸ್ಕರಿಸುತ್ತೇನೆ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಜರ್ಮನಿಯ ಕ್ರಿಕೆಟಿನಲ್ಲಿ ಕನ್ನಡದ ಕಂಪು

ಜಗತ್ತಿನ ತುಂಬಾ ತುಂಬಿರುವ ಕ್ರಿಕೆಟ್ ಪ್ರೇಮಿಗಳಿಗೆ ವಿವಿಧ ದೇಶಗಳ ಕ್ರಿಕೆಟ್ ಆಟಗಾರರ ಹೆಸರು, ಅವರ ಸಾಧನೆ, ಯಾರ ವಿರುದ್ಧ ಆಡಿದ್ದಾರೆ ಇತ್ಯಾದಿ ವಿಷಯಗಳೆಲ್ಲವೂ ಕರತಲಾಮಲಕ. ಕ್ರಿಕೆಟಿನ ಹುಚ್ಚೇ ಅಂತಹುದು. ಮಹಿಳೆಯರೂ ಈ ಆಟವನ್ನು ಮೆಚ್ಚುವುದಷ್ಟೇ ಅಲ್ಲದೆ, ಆಡುತ್ತಿರುವುದನ್ನೂ ನೋಡುತ್ತಿದ್ದೇವೆ. ಮಹಿಳಾ ಕ್ರಿಕೆಟ್ ತಮ್ಮ ಉತ್ತಮವಾದ ಆಟದಿಂದ ಇಂದು ಎಲ್ಲರ ಗಮನ ಸೆಳೆಯುತ್ತಿದೆ. ಕ್ರಿಕೆಟಿನಂತಹ ಜನಪ್ರಿಯ ಆಟಕ್ಕೆ ಅಷ್ಟಾಗಿ ಪ್ರಾಮುಖ್ಯತೆ ಕೊಡದ ದೇಶವೆಂದರೆ ಜರ್ಮನಿ. ಅಚ್ಚರಿಯಾದರೂ ಇದು ವಾಸ್ತವ. ಅಂತಹ ದೇಶದಲ್ಲಿ ಕ್ರಿಕೆಟ್, ಅದರಲ್ಲೂ ಮಹಿಳಾ ಕ್ರಿಕೆಟನ್ನು ಆಡುವುದಲ್ಲದೆ, ಜಗತ್ತಿನ ಹಲವು ರೆಕಾರ್ಡ್‌ಗಳನ್ನು ಮಾಡಿ, ಅತೀ ಉತ್ತಮ ಕೋಚ್ ಎಂದು ಪ್ರಶಂಸೆ ಪಡೆದಾಕೆ ಒಬ್ಬ ಅಪ್ಪಟ ಕನ್ನಡತಿ ಎಂಬುದನ್ನು ನೆನೆದರೆ ಹೆಮ್ಮೆ ಅನ್ನಿಸುತ್ತದೆ. ಬನ್ನಿ, ಜರ್ಮನಿಯ ಕ್ರಿಕೆಟ್ ಕೋಚ್ ಮತ್ತು ಆಟಗಾರ್ತಿ ಅನುರಾಧ ದೊಡ್ಡಬಳ್ಳಾಪುರ ಅವರ ಪರಿಚಯ ಮಾಡಿಕೊಳ್ಳೋಣ.

ಬೆಂಗಳೂರಿನವರೇ ಆದ ಅನುರಾಧ ಅವರಿಗೆ ಬಾಲ್ಯದಿಂದಲೂ ಅದು ಹೇಗೋ ಕ್ರಿಕೆಟ್ ಆಡಬೇಕೆಂಬ ಬಯಕೆ ಇತ್ತು. ಸಂಪ್ರದಾಯಸ್ಥರಾಗಿದ್ದರೂ ಅವರ ಪೋಷಕರು ಅದಕ್ಕೆ ಅಡ್ಡಿಪಡಿಸದೇ ಇದ್ದುದರಿಂದ ತಮ್ಮ ಮನದಾಸೆಗೆ ನೀರೆರೆದು ಪೋಷಿಸಲು ಅನುರಾಧ ಅವರಿಗೆ ಸಾಧ್ಯವಾಯಿತು. ಹದಿನಾರು ಮತ್ತು ಹತ್ತೊಂಬತ್ತು ವಯಸ್ಸಿನ ಕೆಳಗಿನವರ ಕ್ರಿಕೆಟ್ ಟೀಮಿನಲ್ಲಿ ಆಡುವಷ್ಟು ತಯಾರಾದ ಅವರು ಸುಮಾರು ದಶಕದ ಕಾಲ ಕರ್ನಾಟಕವನ್ನು ಪ್ರತಿನಿಧಿಸುವ ಅವಕಾಶವನ್ನು ಪಡೆದ ಅದೃಷ್ಟವಂತರಾದರು. ಓದಿನ ಜೊತೆಗೇ ಸಾಗುತ್ತಿದ್ದ ಇವರ ಕ್ರಿಕೆಟ್ ಅಭ್ಯಾಸವು ಯಾವುದೇ ರೀತಿಯಲ್ಲೂ ಅವರ ಓದಿಗೆ ಅಡ್ಡಿ ಬಾರದಿದ್ದುದು ವಿಶೇಷವೇ ಸರಿ.

> ಹದಿನಾರು ಮತ್ತು ಹತ್ತೊಂಬತ್ತು ವಯಸ್ಸಿನ ಕೆಳಗಿನವರ ಕ್ರಿಕೆಟ್ ಟೀಮಿನಲ್ಲಿ ಆಡುವಷ್ಟು ತಯಾರಾದ ಅನುರಾಧ ಸುಮಾರು ದಶಕದ ಕಾಲ ಕರ್ನಾಟಕವನ್ನು ಪ್ರತಿನಿಧಿಸುವ ಅವಕಾಶವನ್ನು ಪಡೆದ ಅದೃಷ್ಟವಂತರಾದರು. ಓದಿನ ಜೊತೆಗೇ ಸಾಗುತ್ತಿದ್ದ ಇವರ ಕ್ರಿಕೆಟ್ ಅಭ್ಯಾಸವು ಯಾವುದೇ ರೀತಿಯಲ್ಲೂ ಅವರ ಓದಿಗೆ ಅಡ್ಡಿ ಬಾರದಿದ್ದುದು ವಿಶೇಷವೇ ಸರಿ.

ಜೀವಶಾಸ್ತ್ರ (ಬಯಾಲಜಿ)ದಲ್ಲಿ ಅತೀವ ಆಸಕ್ತಿ ಇದ್ದ ಅನುರಾಧ ಅವರು ಅದರಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ಹೋದರು. ನ್ಯೂ ಕ್ಯಾಸಲ್ ವಿಶ್ವವಿದ್ಯಾಲಯದಿಂದ ಮೆಡಿಕಲ್ ಜೆನಿಟಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದದ್ದಷ್ಟೇ ಅಲ್ಲದೆ ನಾರ್ತಂಬರ್‌ಲ್ಯಾಂಡ್‌ನ ಕೌಂಟಿ ಕ್ರಿಕೆಟ್ಟಿನಲ್ಲಿ ಆಡುವ ಅದೃಷ್ಟವನ್ನೂ ಪಡೆದರು. ನಂತರ 2011ರಲ್ಲಿ ಕಾರ್ಡಿಯೊವಾಸ್ಕುಲರ್ ಬಯಾಲಜಿಯಲ್ಲಿ ಸಂಶೋಧನೆ ಮಾಡಲೆಂದು ಜರ್ಮನಿಗೆ ತೆರಳಿದರು. ಅಲ್ಲಿ ಗೊಯಥೆ ವಿಶ್ವವಿದ್ಯಾಲಯ, ಕ್ಲಿನಿಕ್, ಫ್ರಾಂಕ್‌ಫರ್ಟ್‌ನಿಂದ ಕಾರ್ಡಿಯೊವಾಸ್ಕುಲಾರ್ ಬಯಾಲಜಿಯಲ್ಲಿ ಪಿಎಚ್.ಡಿಯನ್ನೂ ಪಡೆದರು. ಮತ್ತು ಪ್ರತಿಷ್ಠಿತ ಮ್ಯಾಕ್ಸ್ ಪ್ಲಾಕ್ ಹಾರ್ಟ್ ಅಂಡ್ ಲಂಗ್ ಸಂಸ್ಥೆಯಲ್ಲಿ ಹಲವು ವರ್ಷಗಳ ಕಾಲ ರಿಸರ್ಚ್ ವಿಜ್ಞಾನಿಯಾಗಿ ಕೆಲಸ ಮಾಡಿದರು. ವಾಸ್ಕುಲರ್ ಡೆವಲಪ್‌ಮೆಂಟ್, ಆಂಜಿಯೊ ಜೆನೆಸಿಸ್, ಕಾರ್ಡಿಯೊವಾಸ್ಕ್ಯುಲರ್ ಥೆರಪಿಟಿಕ್ಸ್ ಮತ್ತು ಮೆಟಬಾಲಿಸಂಗೆ ಸಂಬಂಧಿಸಿದ ಅನೇಕ ಅಮೂಲ್ಯ ಲೇಖನಗಳನ್ನು ಹಲವಾರು ವಿಜ್ಞಾನ ಪತ್ರಿಕೆಗಳಲ್ಲಿ ಅನುರಾಧ ಬರೆದಿದ್ದಾರೆ. ಇಷ್ಟೆಲ್ಲ ಓದು, ಸಂಶೋಧನೆಗಳ ನಡುವೆಯೂ ಅವರ ಕ್ರಿಕೆಟ್ ಆಸಕ್ತಿ ಮಾತ್ರ ಸ್ವಲ್ಪವೂ ಕುಂದಿರಲಿಲ್ಲ. ಅಷ್ಟೇನೂ ಕ್ರಿಕೆಟ್ ಪ್ರೇಮಿ ಅಲ್ಲದ ಜರ್ಮನಿ ಯಲ್ಲೂ ಅದು ಹೊರಬರಲು ಹೊಂಚು ಹಾಕುತ್ತಿತ್ತು. 2013ರಲ್ಲಿ ಆಕೆಯು ಜರ್ಮನಿಯ ರಾಷ್ಟ್ರೀಯ ತಂಡಕ್ಕೆ ಆಡಲು ಆಯ್ಕೆ ಆದರು. ಏಳು ವರ್ಷಗಳ ಕಾಲ ತಂಡದ ನಾಯಕಿಯಾಗಿಯೂ ಅದರ ಯಶಸ್ಸಿಗೆ ಕಾರಣರಾದರು. ಟಿ20 ಮ್ಯಾಚಿನಲ್ಲಿ ನಾಕು ಎಸೆತಕ್ಕೆ ನಾಕು ವಿಕೆಟುಗಳನ್ನು ಪಡೆದ ಪ್ರಥಮ ಮಹಿಳೆ ಎಂಬ ರೆಕಾರ್ಡ್ ಅನ್ನೂ ಮಾಡಿದರು. ಟಿ20 ಮ್ಯಾಚುಗಳಲ್ಲಿ ಪುರುಷ–ಮಹಿಳೆ ಇಬ್ಬರೂ ಸೇರಿದಂತೆ ಬೆಸ್ಟ್ ಬೌಲಿಂಗ್ ಫಿಗರ್ ಸಾಧಿಸಿ ರುವುದು ಅನುರಾಧ ಅವರ ಅಗ್ಗಳಿಕೆ.

ಕ್ರಿಕೆಟ್ ಆಡುವುದಲ್ಲದೆ ಜರ್ಮನಿಯಲ್ಲಿ ಆ ಆಟವನ್ನು ಬೆಳೆಸುವ, ಮುಂದುವರೆಸುವ ನಿಟ್ಟಿನಲ್ಲಿ (ಅದರಲ್ಲೂ ಯುವ ಆಟಗಾರರಲ್ಲಿ ಮತ್ತು ಮಹಿಳೆಯರಲ್ಲಿ) ಅವರು ಮಹತ್ವದ ಪಾತ್ರ ವಹಿಸಿದ್ದಾರೆ ಎಂದರೆ ಅತಿಶಯೋಕ್ತಿ ಅಲ್ಲ. ಫ್ರಾಂಕ್‌ಫರ್ಟಿನ ಫ್ಯೂರೀಸ್ ಮತ್ತು ಹೆಸೆನ್‌ನಲ್ಲಿ, ಪ್ರಥಮ ಮಹಿಳಾ ಟೀಂ ಅನ್ನು ಪ್ರಾರಂಭಿಸಿದ ಅನುರಾಧ ತಾವೂ ಆಡುತ್ತಲೇ, 2014ರಲ್ಲಿ ಅದರ ಕೋಚ್ ಆಗಿಯೂ ಕಾರ್ಯನಿರ್ವಹಿಸಿದರು. ಜೊತೆಗೆ ಆ ಕ್ಲಬ್ಬನ್ನು ಬೆಳೆಸುವ ಹೊಣೆಗಾರಿಕೆಯನ್ನು ಹೊತ್ತ ಡೆವ ಲಪ್‌ಮೆಂಟ್ ಆಫೀಸರ್ ಸಹ ಆದರು. ಈ ಫ್ಯೂರಿಸ್ ತಂಡವು ಎರಡು ಬಾರಿ ಜರ್ಮನ್ ಬಂಡೆಸ್ಲಿಗಾ ಚಾಂಪಿಯನ್ಸ್ ಎಂಬ ಬಿರುದು ಗಳಿಸಿ, ಸ್ಥಳೀಯ ಸುಮಾರು 90ಕ್ಕೂ ಹೆಚ್ಚು ಮಹಿಳೆಯರು ತಂಡಕ್ಕೆ ಸೇರಿ ರೆಗ್ಯುಲರ್ ಆಗಿ ಆಡಲು ಪ್ರೇರೇಪಿಸಿದೆ. ಇಲ್ಲಿಯ ಯುವ ಆಟಗಾರರಿಗೆ ಕಲಿಸುವುದರೊಂದಿಗೆ ಅನೇಕ ರಾಷ್ಟ್ರೀಯ ಆಟಗಾರರನ್ನೂ ತಯಾರು ಮಾಡಲಾಗಿದೆ.



ಅನುರಾಧ ದೊಡ್ಡಬಳ್ಳಾಪುರ

ಜರ್ಮನಿಯ ಮೂವರು ಶ್ರೇಷ್ಠ ಮಟ್ಟದ ಈಸಿಬಿ ಅರ್ಹತೆಯನ್ನುಳ್ಳ ಅಡ್ವಾನ್ಸ್‌ಡ್ ಕೋಚುಗಳಲ್ಲಿ ಅನುರಾಧ ಸಹ ಒಬ್ಬರು ಆಗಿದ್ದಾರೆ. ಸದ್ಯ ಅವರು ಎಸ್ಟೋನಿಯನ್ ವುಮನ್ಸ್ ನ್ಯಾಷನಲ್ ಟೀಮಿನ ಹೆಡ್ ಕೋಚಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಐಸಿಸಿ ಮಟ್ಟದ ಕೋಚ್ ಟ್ಯೂಟರ್‌ಗಳಂತೆ ಇವರೂ ಈಗ ಕೋಚ್ ಡೆವಲಪರ್ ಮತ್ತು ಮೆಂಟರ್ ಆಗಿದ್ದಾರೆ.

ಜರ್ಮನಿಯ ಕ್ರಿಕೆಟ್ ಆಸಕ್ತರಿಗೆ ಅನುರಾಧ ಅವರು ನಿಜ ಅರ್ಥದ ಮಾರ್ಗದರ್ಶಕರೇ ಆಗಿದ್ದಾರೆ. ಜೊತೆಗೆ ಬಯೊಮೆಡಿಕಲ್ ವಿಜ್ಞಾನದಲ್ಲೂ ಅವರ ಸಾಧನೆ ಅಪಾರವಾದುದು. ಇದನ್ನು ಗುರುತಿಸಿ ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು 2022ರಲ್ಲಿ ಅವರಿಗೆ ಒಂದು ಪ್ರಶಂಸಾ ಪತ್ರವನ್ನು ಬರೆದಿದ್ದಾರೆ. ಮೈಸೂರಿನವರೇ ಆದ ಅರ್ಜುನ್ ಅವರು ಅನುರಾಧ ಅವರ ಪತಿ. ಅವರೂ ಜರ್ಮನಿಯ ಸ್ನೈಡರ್ ಇಲೆಕ್ಟ್ರಿಕ್ ಕಂಪನಿಯಲ್ಲಿ ಪ್ರಾಡಕ್ಟ್ ಡೆವಲಪರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೂ ಪತ್ನಿಯ ಕ್ರಿಕೆಟ್ ಆಸಕ್ತಿಗೆ ನೀರೆರೆಯುತ್ತಾರೆ. ವಿದೇಶದಲ್ಲಿದ್ದರೂ ತಮ್ಮ ಮಾತೃಭಾಷೆಯನ್ನು ಮರೆಯದ ಈ ಯುವ ದಂಪತಿಗಳ ಕನ್ನಡ ಪ್ರೀತಿ ಮೆಚ್ಚುವಂಥದು. ಜರ್ಮನಿಯ ಕ್ರಿಕೆಟ್ ತಂಡಕ್ಕೆ ಆಮ್ಲಜನಕದಂತಿರುವ ಅನುರಾಧ ದೊಡ್ಡಬಳ್ಳಾಪುರ ಅವರಿಗೆ ಭಾರತೀಯರೆಲ್ಲರ ಹಾರ್ದಿಕ ಅಭಿನಂದನೆಗಳು ಸಲ್ಲುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖಿತಪ್ತರು:
ಶ್ರೀಮತಿ ಅನಿತ ಮನೋಹರ್ ಮತ್ತು ಮಕ್ಕಳು, ಬಿ.ಹೊಸಹಳ್ಳಿ
ಶ್ರೀ ಬೋರಲಿಂಗೇಗೌಡ, ಕುಂಬಾರಕೊಪ್ಪಲು

ಶ್ರೀ ಮನೋಹರ್ ಹೆಚ್.ಆರ್
ನಿಧನ: 20-04-2018



ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ಜೆ. ಬಿ. ನಾಗರಾಜ್ ರವರ ಮಗ **ಶ್ರೀ. ಜೆ. ಎನ್. ಮಂಜೇಶ್**, ಲೇಟ್ ಜೆ.ಎನ್ ಬಸಪ್ಪ ರವರ ಮಗ **ಶ್ರೀ. ಜೆ. ಬಿ. ಸುದರ್ಶನ್** ಹಾಗೂ ಮೆ. **ಶ್ರೀ ರಾಘವೇಂದ್ರ ಭವನ** [ಈ ಹಿಂದಿನ **ಶ್ರೀ ರಾಘವೇಂದ್ರ ಪ್ರಸನ್ನ ಬೋರ್ಡಿಂಗ್ ಹೌಸ್**] ನೋಂದಾಯಿತ ಪಾಲುದಾರಿಕೆ ಸಂಸ್ಥೆ, ರವರುಗಳು ಒಟ್ಟಾಗಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ **15 (ಹದಿನೈದು) ದಿನಗಳ** ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಹನುಮಂತ ರಾವ್ ರಸ್ತೆಯಲ್ಲಿರುವ ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ವಾಣಿಜ್ಯ ಸ್ವತ್ತಿನ ಒಟ್ಟು ವಿಸ್ತೀರ್ಣ **279.2665 ಚದರ ಮೀಟರ್** ಉಳ್ಳ ಕಟ್ಟಡವನ್ನೊಳಗೊಂಡ ಸ್ವತ್ತಿನ ಒಟ್ಟು ಚಕ್ಕುಬಂದಿ

ಸ್ವತ್ತಿನ ಮಾಲೀಕರು	ಸ್ವತ್ತಿನ ನಂ.	ಒಗ್ಗೂಡಿಸಲಾದ ಚಕ್ಕುಬಂದಿ			
		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ಶ್ರೀ. ಜೆ. ಎನ್. ಮಂಜೇಶ್	1669, D-3, 1669/1A Ds-3/1A	[illegible]	[illegible]	[illegible]	[illegible]
ಶ್ರೀ. ಜೆ. ಬಿ. ಸುದರ್ಶನ್	1669/3, D-3/2				
	1669/1C, D-3/1C				
ಶ್ರೀ ರಾಘವೇಂದ್ರ ಭವನ	1669/1, D-3/A				
	1669 D-3/1				
	1669 /1B, D-3/1B				
	1669/3A, D-3/2A				

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್,
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641





ವಿವೇಕಾನಂದ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ



ರಂಜಿತಾ ಮೈತ್ರಿ ದೇವಿಕಾ ಅಂಜಲಿ ಐಶ್ವರ್ಯ ಧನಲಕ್ಷ್ಮಿ

ಮೈಸೂರು, ಏ.19– ಮೈಸೂರು ಜಯಲಕ್ಷ್ಮೀಪುರಂನ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜಿಗೆ ಮಾರ್ಚ್–2025ರಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ–01ರಲ್ಲಿ ಉತ್ತಮ ಫಲಿತಾಂಶ ಬಂದಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಒಟ್ಟು 40 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಬಿಗ್ ಶಾಕ್
ಮತ್ತೊಂದು ಪ್ರಕರಣದಲ್ಲೂ ಜಾಮೀನು ಅರ್ಜಿ ವಜಾ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಮೊದಲ ಪ್ರಕರಣದಲ್ಲಿ ಈಗಾಗಲೇ ಜಾಮೀನು ಅರ್ಜಿಯನ್ನು ಕೋರ್ಟ್ ವಜಾಗೊಳಿಸಿತ್ತು. ಇಂದು ಮತ್ತೊಂದು ಪ್ರಕರಣದಲ್ಲಿ ಜಾಮೀನು ಅರ್ಜಿ ವಜಾಗೊಳಿಸಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿದ್ದ ಕ್ರೈಂ ನಂಬರ್ 20/2024 ಪ್ರಕರಣದಲ್ಲಿ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್, ವಿಚಾರಣೆ ನಡೆಸಿದರು. ಇಂದು ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದಂತಹ 2ನೇ ಪ್ರಕರಣದಲ್ಲಿ ಜಾಮೀನು ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದ್ದಾರೆ.

ಶಾಂತಕುಮಾರಿ ನಿಧನ



ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳ ಸಮೀಪದ ಜುವಾರಿ ಗಾರ್ಡನ್ ನಿವಾಸಿ ಹಾಗೂ ವಿಜಯಕುಮಾರ್ ಅವರ ಪತ್ನಿ ಶಾಂತಕುಮಾರಿ (74) ಅವರು ಇಂದು ಮುಂಜಾನೆ ಕೆಲಕಾಲದ ಅನಾರೋಗ್ಯದ ನಂತರ ನಿಧನರಾದರು. ಮೃತರು ಪತಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ವಿಜಯನಗರ ನಾಲ್ಕನೇ ಹಂತದ ಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ರಿಕ್ಕಿ ರೈ ಕೊಲೆ ಯತ್ನ

ಬಂದಿದ್ದ ರಿಕ್ಕಿ, ಶುಕ್ರವಾರ ಸದಾಶಿವನಗರದ ಮನೆಯಿಂದ ಸಂಜೆ 6ರ ಸುಮಾರಿಗೆ ಬಿಡದಿ ಬಳಿಯ ಹೊರಟು ಕರಿಯಪ್ಪನದೊಡ್ಡಿ ತೋಟದ ಮನೆಗೆ ರಾತ್ರಿ 7ರ ಸುಮಾರಿಗೆ ತಲುಪಿದ್ದಾರೆ. ಕೆಲ ಹೊತ್ತು ವಿಶ್ರಾಂತಿ ಪಡೆದ ಬಳಿಕ, ರಾತ್ರಿ 11ರ ಸುಮಾರಿಗೆ ಮನೆಯಿಂದ ಬೆಂಗಳೂರಿಗೆ ಕಪ್ಪು ಬಣ್ಣದ ಫಾರ್ಚ್ಯೂನರ್ ಕಾರಿನಲ್ಲಿ ತಮ್ಮ ಅಂಗರಕ್ಷಕ ರಾಜ್‌ಪಾಲ್ ಜೊತೆ ಹೊರಟಿದ್ದಾರೆ. ಸಾಮಾನ್ಯವಾಗಿ ರಿಕ್ಕಿಯೇ ಕಾರು ಚಾಲನೆ ಮಾಡುತ್ತಾರೆ. ಆದರೆ, ಶುಕ್ರವಾರ ಕಾರನ್ನು ಅವರ ಚಾಲಕ ಬಸವರಾಜು ಚಾಲನೆ ಮಾಡಿದ್ದಾರೆ. ಕಾರು ಮನೆ ಕಾಂಪೌಂಡ್‌ನಿಂದ ಅನತಿ ದೂರಕ್ಕೆ ಬಂದಾಗ ಟಪ್ ಎಂಬ ಶಬ್ದ ಕೇಳಿದ್ದು, ಟೈಯರ್‌ನಲ್ಲಿ ಸಮಸ್ಯೆ ಇರಬೇಕೆಂದು ಚಾಲಕ ಕಾರು ನಿಲ್ಲಿಸಿ ಪರಿಶೀಲಿಸಿದಾಗ ಎಲ್ಲವೂ ಸರಿ ಇತ್ತು. ಬಳಿಕ ಅಲ್ಲಿಂದ ಹೊರಟು ರೈಲ್ವೆ ಕ್ರಾಸ್‌ವರೆಗೆ ಬಂದಾಗ ರಿಕ್ಕಿ ಅವರು ತನ್ನ ಪರ್ಸ್ ಮರೆತಿರುವುದಾಗಿ ಹೇಳಿದರು. ಕಾರನ್ನು ಮತ್ತೆ ಮನೆ ಕಡೆಗೆ ತಿರುಗಿಸಿದ್ದಾರೆ ಎಂಬುದು ಚಾಲಕ ಪೊಲೀಸರಿಗೆ ನೀಡಿದ ದೂರಿನಿಂದ ತಿಳಿದುಬಂದಿದೆ. ಅಂದರೆ ರಾತ್ರಿ 11ರ ಸುಮಾರಿನಲ್ಲೇ ರಿಕ್ಕಿ ಕಾರಿನ ಮೇಲೆ ದುಷ್ಕರ್ಮಿಗಳು ಗುಂಡು ಹಾರಿಸಿದರಾದರೂ ಕಾರಿಗಾಗಲೀ, ಅವರಿಗಾಗಲೀ ಯಾವುದೇ ಅಪಾಯವಾಗಿಲ್ಲ. ಜೊತೆಗೆ ಗುಂಡು ಹಾರಿಸಲಾಗಿದೆ ಎಂಬುದ ಅವರು ಗ್ರಹಿಸಿರಲೂ ಇಲ್ಲ.

ಮತ್ತೇ ಪರ್ಸ್ ತೆಗೆದುಕೊಂಡು ರಾತ್ರಿ 12.50ರ ಸುಮಾರಿನಲ್ಲಿ ರಿಕ್ಕಿ ಅವರ ಕಾರು ಬೆಂಗಳೂರಿಗೆ ಹೊರಡಲು ಕಾಂಪೌಂಡ್ ದಾಟಿ ಸ್ವಲ್ಪ ಮುಂದೆ ಬಂದಾಗ, ನಿವೇಶನವೊಂದರ ಕಾಂಪೌಂಡ್ ಹಿಂದಿನಿಂದ ಅದರ ರಂಧ್ರದ ಮೂಲಕ ಏಕಾಏಕಿ ಕಾರಿನ ಮೇಲೆ 2 ಸುತ್ತು ಗುಂಡಿನ ದಾಳಿ ನಡೆದಿದೆ. ರಿಕ್ಕಿ ಕಾರು ಚಾಲನೆ ಮಾಡುತ್ತಿದ್ದಾರೆಂದು ಲೆಕ್ಕಾಚಾರ ಹಾಕಿದ್ದ ದುಷ್ಕರ್ಮಿಗಳು ಚಾಲಕನ ಸೀಟನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ್ದಾರೆ. ಆದರೆ, ಗುಂಡು ಚಾಲಕನ ಸೀಟಿನ ಹಿಂಬದಿಗೆ ತಾಗಿ, ಹಿಂದಿನ ಸೀಟಿನಲ್ಲಿದ್ದ ರಿಕ್ಕಿ ಅವರ ಬಲ ತೋಳು ಮತ್ತು ಮೂಗಿಗೆ ಬಡಿದಿದೆ.

ತಕ್ಷಣವೇ ಅವರ ಅಂಗರಕ್ಷಕ ರಾಜ್‌ಪಾಲ್ ಮತ್ತು ಚಾಲಕ ಬಸವರಾಜು ಅದೇ ಕಾರಿನಲ್ಲಿ ರಿಕ್ಕಿ ಅವರನ್ನು ಬಿಡದಿಯ ಭರತ್ ಕೆಂಪಣ್ಣ ಆಸ್ಪತ್ರೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸೂಚನೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ಆಂಬುಲೆನ್ಸ್‌ನಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ವೈದ್ಯರು ಬಲಗೈ ತೋಳಿಗೆ ಶಸ್ತ್ರ ಚಿಕಿತ್ಸೆ ನಡೆಸಿ ಎರಡು ಗುಂಡುಗಳನ್ನು ಹೊರ ತೆಗೆದಿದ್ದಲ್ಲದೇ, ಮೂಗಿಗೂ ಚಿಕಿತ್ಸೆ ನೀಡಿದ್ದಾರೆ. ಸದ್ಯಕ್ಕೆ ರಿಕ್ಕಿ ಪ್ರಾಣಾಪಾಯದಿಂದ ಪಾರಾಗಿದ್ದರೂ, ಮಾತನಾಡುವ ಸ್ಥಿತಿಯಲ್ಲಿಲ್ಲ ಎಂದು ಅವರ ಆಪ್ತರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ರಾಮನಗರ ಎಸ್ಪಿ ಶ್ರೀನಿವಾಸ್‌ಗೌಡ ಮತ್ತು ಡಿವೈಎಸ್‌ಪಿ ಶ್ರೀನಿವಾಸ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗಾಗಿ ರಾಮನಗರ, ಬಿಡದಿ ಮತ್ತು ರಾಮನಗರ ಜಿಲ್ಲಾ ಸೆನ್ ಠಾಣೆ ಡಿವೈಎಸ್‌ಪಿಗಳನ್ನೊಳಗೊಂಡ ಮೂರು ವಿಶೇಷ ತಂಡಗಳನ್ನು ರಚಿಸಲಾಗಿದೆ.

ದೂರು ನೀಡಲಿ: ಡಿಸಿಎಫ್

ರಸ್ತೆ ಅಗಲೀಕರಣ ಕಾರ್ಯ ಕೈಗೊಳ್ಳಲಾಗಿದೆ. ಈಗಾಗಲೇ ರಸ್ತೆ ಅಗಲೀಕರಣ ಕಾರ್ಯಾದೇಶ ಕೂಡ ನೀಡಲಾಗಿದೆ ಎಂದರು.

ಪ್ರಸ್ತುತ 30 ಅಡಿ ಇದ್ದ ಹೈದರಾಲಿ ರಸ್ತೆಯನ್ನು ಸಿಡಿಪಿ ಪ್ರಕಾರ 90 ಅಡಿ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ರಸ್ತೆ ಅಗಲೀಕರಣಕ್ಕೆ ಮರಗಳು ಅಡ್ಡಿಯಾಗಿದ್ದ ಕಾರಣ ಅವುಗಳನ್ನು ಕತ್ತರಿಸಿ ತೆರವು ಮಾಡುವುದು ಅನಿವಾರ್ಯವಾಗಿತ್ತು. ಅದರಂತೆ ಅರಣ್ಯ ಇಲಾಖೆ ಮರ ಕತ್ತರಿಸಿದ್ದು, ಈಗ ರಸ್ತೆ ಅಗಲೀಕರಣ ಕಾರ್ಯ ಆರಂಭಿಸಲಾಗುವುದು. ಯಾವುದಾದರೊಂದು ಅಭಿವೃದ್ಧಿ ಕೆಲಸ ಮಾಡುವಾಗ ಇಂತಹ ವಿರೋಧ ವ್ಯಕ್ತವಾಗುವುದು ಸರ್ವೆ ಸಾಮಾನ್ಯ ಎಂದರು. ಮರಗಳನ್ನು ಕತ್ತರಿಸಿರುವ ಹಿನ್ನೆಲೆ ಕಾನೂನಿನ ಪ್ರಕಾರ ಒಂದು ಮರ ಕಡಿದಿರುವುದಕ್ಕೆ 10 ಸಸಿಯಂತೆ 400 ಸಸಿ ನೆಟ್ಟು ಅವುಗಳನ್ನು ಬೆಳೆಸಲಾಗುವುದು ಎಂದು ಷೇಕ್ ತನ್ವೀರ್ ಆಸೀಫ್ ಭರವಸೆ ನೀಡಿದರು.

50ಕ್ಕಿಂತ ಹೆಚ್ಚು ಮರ ಕಡಿಯಲು ಸಾರ್ವಜನಿಕರ ಅಭಿಪ್ರಾಯ ಕಡ್ಡಾಯ

ಹಸಿರು ನ್ಯಾಯ ಪೀಠದ ಪ್ರಕಾರ ಯಾವುದೇ ನಗರ, ಪಟ್ಟಣ, ಗ್ರಾಮಗಳಲ್ಲಿ 50ಕ್ಕಿಂತ ಹೆಚ್ಚು ಮರ ಕತ್ತರಿಸುವುದಾದರೆ ಅರಣ್ಯ ಇಲಾಖೆಯವರು ಸಾರ್ವಜನಿಕರ ಅಭಿಪ್ರಾಯ ಆಲಿಸುವುದು ಕಡ್ಡಾಯವಾಗಿದೆ.

ಆದರೆ ಹೈದರಾಲಿ ರಸ್ತೆಯಲ್ಲಿ 40 ಮರಗಳಿದ್ದ ಕಾರಣ ಅರಣ್ಯ ಇಲಾಖೆ ಸಾರ್ವಜನಿಕರ ಅಭಿಪ್ರಾಯ ಪಡೆಯಲಿಲ್ಲ. ಉದಾಹರಣೆಗೆ ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿ 50ಕ್ಕಿಂತ ಹೆಚ್ಚು ಮರಗಳನ್ನು ಕಡಿಯಲು ಸಾರ್ವಜನಿಕರ ಅಭಿಪ್ರಾಯ ಆಲಿಸಲಾಯಿತು. ಮರ ಕಡಿದು ರಸ್ತೆ ಅಗಲೀಕರಣಕ್ಕೆ ಸಾರ್ವ ಜನಿಕರ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಮರ ಕಡಿಯುವುದರಿಂದ ಅರಣ್ಯ ಇಲಾಖೆ ಹಿಂದೆ ಸರಿಯಿತು.

ಆದರೆ ಇಲ್ಲಿ 40 ಮರಗಳಿದ್ದ ಕಾರಣ ಅರಣ್ಯ ಇಲಾಖೆ ಯಾರ ಅಭಿಪ್ರಾಯವನ್ನು ಆಲಿಸದೆ ಏಕಾಏಕಿ ಮರ ಕಡಿದಿದೆ. ಒಂದು ಮರ ಬೆಳೆಯಲು ಹತ್ತಾರು ವರ್ಷ ಬೇಕು. ಆದರೆ ಹೈದರಾಲಿ ರಸ್ತೆಯಲ್ಲಿ ಯಂತ್ರಗಳಿಂದ ಕ್ಷಣ ಮಾತ್ರದಲ್ಲಿ ಮರ ಕಡಿಯಲಾಗಿದೆ. ಮರ ಬೆಳೆಸಿ ಪರಿಸರ ಉಳಿಸಿ ಎಂದು ಹೇಳುವ ಅರಣ್ಯ ಇಲಾಖೆಯೇ ಮರಗಳ ಬುಡಕ್ಕೆ ಕೊಡಲಿ ಪೆಟ್ಟು ನೀಡಿದೆ.

ಮತ್ತೆ ದಲಿತ ಸಿಎಂ ಕೂಗು

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಸಿಎಂ ಆದಾಗ ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಆಕಸ್ಮಿಕವಾಗಿ ಅವರು ಸೋತ ನಂತರ ಅವರನ್ನು ಡಿಸಿಎಂ ಮಾಡಬೇಕು ಎಂದು ನಾನೇ ಒತ್ತಾಯ ಮಾಡಿದ್ದೆ. ದಲಿತರಲ್ಲಿ ಯಾರಿಗಾದರೂ ಸಿಎಂ ಸ್ಥಾನ ಕೊಡಬೇಕು ಎಂಬುದು ಇದೆ. ಆದರೆ, ಆ ಸಮಯ ಇನ್ನೂ ಬಂದಿಲ್ಲ ಅನ್ನುತ್ತೆ. ಒಬ್ಬ ಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷರು ಇರುವಾಗ ಅದನ್ನು ನಾವು ಹೇಳುವ ಹಾಗಿಲ್ಲ. ಯಾವ ಸಮಯಕ್ಕೆ ಕೆಪಿಸಿಸಿ ಅಧ್ಯಕ್ಷ ಮತ್ತು ಸಿಎಂ ಬದಲಾವಣೆ ಮಾಡಬೇಕು ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು. ನಾವು ವಾಸ್ತವಾಂಶ ಕೊಟ್ಟಿದ್ದು ಮುಂದೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಆಗ ನಾವು ಸಹ ನಮ್ಮ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸುತ್ತೇವೆ ಎಂದು ಸಚಿವ ಕೆಹೆಚ್.ಮುನಿಯಪ್ಪ ಹೇಳಿಕೆ ನೀಡಿದರು.

ಜನಿವಾರ ಕತ್ತರಿಸಿದ್ದು ದೊಡ್ಡ ತಪ್ಪು

ತನಿಖೆ ನಡೆಯುತ್ತಿದೆ ಎಂದು ಸಚಿವ ಡಾ.ಪರಮೇಶ್ವರ್ ಹೇಳಿದರು.

ಕಾನೂನು ವ್ಯವಸ್ಥೆ ಸರಿ ಇದೆ: ಕಾನೂನು–ಸುವ್ಯವಸ್ಥೆ ಸರಿಯಾಗಿದೆ ಎಂದು ಎಲ್ಲಾ ಪ್ಯಾರಾ ಮೀಟರ್ಸ್ ಹೇಳುತ್ತಿವೆ. ಕ್ರೈಂ ಪ್ರಕರಣಗಳು ಕಡಿಮೆಯಾಗಿವೆ. ಪೊಲೀಸ್ ಕಮಿಷನರ್ ಬ್ರೀಫ್ ಮಾಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕಡಿಮೆಯಾಗಿದೆ. ಸೈಬರ್ ಕೇಸ್ ಕಡಿಮೆಯಾಗಿದೆ. ಕಾನೂನು ಸುವ್ಯವಸ್ಥೆ ಎಲ್ಲಾ ಸರಿಯಾಗಿದೆ ಎಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಿಲ್ಲ ಎಂಬ ವಿಪಕ್ಷಗಳ ಆರೋಪಕ್ಕೆ ತಿರುಗೇಟು ನೀಡಿದರು.

ಒಳಮೀಸಲಾತಿಗೆ ಜಾತಿಗಣತಿ ವರದಿ ಬಳಸುವ ಚರ್ಚೆ ವಿಚಾರವಾಗಿ ಮಾತನಾಡಿ, ನ್ಯಾ. ನಾಗಮೋಹನ್ ದಾಸ್ ಅವರಿಗೆ ಈಗಾಗಲೇ ಕೊಟ್ಟಿದ್ದೇವೆ ಈ ಜಾತಿಗಣತಿ ವರದಿಯನ್ನು ಅದರೊಂದಿಗೆ ಹೋಲಿಸುತ್ತಾರೆ. ಡಬಲ್ ಆದರೆ ಒಳ್ಳೆಯದಲ್ವಾ. ಕಮಿಷನ್ ಡಾಟಾ ಕಲೆಕ್ಟ್ ಮಾಡಲು ಶುರು ಮಾಡಿದೆ. ಈಗ ನಿಲ್ಲಿಸಿ ಅಂತ ಹೇಳೋದು ಸರಿಯಲ್ಲ ಎಂದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ
ಸಂಸದ ಸ್ಥಾನದಿಂದ ರಾಹುಲ್ ಗಾಂಧಿ ವಜಾಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ


ಮೈಸೂರು, ಏ.19(ಜಿಎ)–ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಅಕ್ರಮವಾಗಿ ಹಣದ ವಹಿವಾಟು ನಡೆಸಿರುವ ಬಗ್ಗೆ ಇಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಕೂಡಲೇ ರಾಹುಲ್ ಗಾಂಧಿ ಅವರ ಸಂಸದ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿ ಬಿಜೆಪಿ ಯುವ ಮೈಸೂರು ನಗರ, ಜಿಲ್ಲೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ರಾಮಸ್ವಾಮಿ ವೃತ್ತದಲ್ಲಿ ಬಳಿ ಜಮಾವಣೆಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು 'ನಕಲಿ ಗಾಂಧಿಗಳಿಗೆ ಧಿಕ್ಕಾರ', 'ಲೂಟಿ ಲೂಟಿ ಕಾಂಗ್ರೆಸ್', ಸ್ವಾತಂತ್ರ್ಯ ಹೋರಾಟಗಾರನಿಗೆ ಅವಮಾನಿಸಿದವರಿಗೆ ಧಿಕ್ಕಾರ ಎಂದು ಪ್ಲೇಕಾರ್ಡ್‌ಗಳನ್ನು ಹಿಡಿದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ನ್ಯಾಷನಲ್ ಹೆರಾಲ್ಡ್ ದೇಶದಲ್ಲಿ ದೊಡ್ಡ ಹಗರಣವಾಗಿದ್ದು, ಈ ಹಗರಣ ಕಾಂಗ್ರೆಸ್ ದೇಶಕ್ಕೆ ಮಾಡಿದ ದ್ರೋಹ, ಸ್ವಾತಂತ್ರ್ಯದ ಹೋರಾಟದಲ್ಲಿ ದೇಶದ ಜನತೆ ಕಾಂಗ್ರೆಸ್ ನಂಬಿ ಮತ್ತು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ವಿಶ್ವಾಸದಿಂದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಹೂಡಿಕೆ ಮಾಡಿದ್ದರು. ಆದರೆ ಆ ಹಣವನ್ನು ಕಾಂಗ್ರೆಸ್ ತನ್ನದೇ ಕುಟುಂಬದ ಚಾರಿಟಬಲ್ ಟ್ರಸ್ಟ್‌ಗೆ ವರ್ಗಾಯಿಸಿ ದೇಶಕ್ಕೆ ವಿಶ್ವಾಸದ್ರೋಹ ಮಾಡಿದೆ. ಇದನ್ನ ನ್ಯಾಯಾಲಯದಲ್ಲಿ ಪ್ರಶ್ನಿಸಬಾರದು ಎನ್ನುವುದು ಸಂವಿಧಾನ ವಿರೋಧಿ ಧೋರಣೆಯಾಗಿದೆ. ಕೂಡಲೇ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ ಮಾತನಾಡಿ, ಇಡೀ ದೇಶವನ್ನು ನುಂಗಿ ನೀರು ಕುಡಿಯಲು ನೆಲದಿಂದ ಆಕಾಶದವರೆಗೆ ಅನೇಕ ಭ್ರಷ್ಟಾಚಾರಗಳನ್ನು ಮಾಡಿ ದೇಶ ಲೂಟಿ ಮಾಡಿದವರು, ಒಂದು ವರ್ಗದ ಜನತೆಯ ಓಲೈಕೆಗಾಗಿ ದೇಶವನ್ನೇ ಭ್ರಷ್ಟಾಚಾರ ಕೂಪವಾಗಿ ಮಾಡಿಸಿದವರು, ಈಗ ಬಿಜೆಪಿ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ಎಂತಹ ದುಸ್ಥಿತಿ ಕಾಂಗ್ರೆಸ್‌ಗೆ ಬಂದಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ಶೈಲೇಂದ್ರ, ಮೈಸೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಸಚಿನ್, ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಬಿ.ಎಂ. ರಘು, ಉಪಾಧ್ಯಕ್ಷ ಜೋಗಿ ಮಂಜು, ಮಂಡಲಗಳ ಯುವ ಮೋರ್ಚಾ ಅಧ್ಯಕ್ಷರಾದ ಮಧು, ಅರ್ಜುನ್, ಮೋಹನ್, ನಿಶಾಂತ್, ಮಾಜಿ ಮೃಗಾಲಯ ಪ್ರಾಧಿಕಾರ ಮಾಜಿ ಅಧ್ಯಕ್ಷ ಶಿವಕುಮಾರ್, ಫೈಟಿ ರವಿ, ದಿನೇಶ್‌ಗೌಡ, ಗೋಪಾಲ್‌ರಾಜ್, ಸ್ಮಾರ್ಟ್ ಮಂಜು ಪಾಲ್ಗೊಂಡಿದ್ದರು.



ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿ ಬಿಜೆಪಿ ಯುವ ಮೈಸೂರು ನಗರ, ಜಿಲ್ಲೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಅಭಿನಂದನೆ...



ಮೈಸೂರು ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘದ ವತಿಯಿಂದ ನಡೆದ ಪಿಎಲ್‌ಡಿ ಬ್ಯಾಂಕಿನ ಚುನಾವಣೆಯಲ್ಲಿ ಜಯಶೀಲರಾದ ಎಂ.ಕುಮಾರ್ (ಚಿಕ್ಕಳ್ಳಿ) ಹಾಗೂ ಮಹದೇಶ್ವರ ಸೊಸೈಟಿಯಿಂದ ಚುನಾಯಿತರಾದ ಚೇತನ್ ವಿಷಕಂಠೇಗೌಡ (ಕುಂಬಾರಕೊಪ್ಪಲು) ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷೆ ಶ್ರೀಮತಿ ಲಲಿತಮ್ಮ, ಉಪಾಧ್ಯಕ್ಷರಾದ ಜಿ.ಎಂ.ಅಂದಾನಿ, ನಿರ್ದೇಶಕರಾದ ಹೊನ್ನಗಿರಿಗೌಡ, ಅಣ್ಣಯ್ಯ, ಕೆ.ಚಂದ್ರಶೇಖರ್, ಮಂಜುನಾಥ್, ಶ್ರೀಮತಿ ರುಕ್ಮಿಣಿ, ಯೋಗೇಶ್ ಸಿ., ಹೆಚ್.ಪ್ರಕಾಶ್, ರಾಮಕೃಷ್ಣಚಾರಿ, ರೇಣುಕಾ, ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ರಮೇಶ್, ಸಿಬ್ಬಂದಿಗಳಾದ ರುದ್ರಸ್ವಾಮಿ, ಮಹೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ದಲಿತ ಮಹಿಳೆ ಮೇಲೆ ಹಲ್ಲೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಕರ್ನಾಟಕ ವೀರಕೇಸರಿ ಪಡೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ಮೈಸೂರು,ಏ.19(ಜಿಎ)–ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನ ಗ್ರಾಮದಲ್ಲಿ ದಲಿತ ಮಹಿಳೆ ಮೇಲೆ ಹಲ್ಲೆ ನಡೆಸಿರುವ ಘಟನೆಯನ್ನು ಖಂಡಿಸಿ ಕರ್ನಾಟಕ ವೀರಕೇಸರಿ ಪಡೆ ಮೈಸೂರು ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ವೀರಕೇಸರಿ ಪಡೆಯ ಅಧ್ಯಕ್ಷ ಮಧುವನ ಚಂದ್ರು ಮಾತನಾಡಿ, ಎಚ್.ಡಿ.ಕೋಟೆ ತಾಲೂಕಿನ ನಾಗನಹಳ್ಳಿಯ ಕವಿತಾ ಬಾಯಿ ಮತ್ತು ಅವರ ವಿಕಲಚೇತನ ಪತಿ ರಾಯಪ್ಪರ ಮೇಲೆ ಸವರ್ಣೀಯರು ನಿರಂತರವಾಗಿ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ. ಇದಾಗಿಯೂ ಹಲ್ಲೆಗೊಳಗಾದವರಿಂದ ಅಟ್ರಾಸಿಟಿ ದೂರು ದಾಖಲಿಸಿಲ್ಲ. ಬದಲಿಗೆ ಹಲ್ಲೆಗೆ ಒಳಗಾದವರ ಮೇಲೆ ದೂರು ದಾಖಲಿಸಿದ್ದಾರೆಂದು ದೂರಿದರು. ಈ ಹಿನ್ನೆಲೆಯಲ್ಲಿ ಹಲ್ಲೆ ನಡೆಸಿದವರ ವಿರುದ್ಧ ಕಾನೂನು ರೀತಿ ದೂರು ದಾಖಲಿಸಿ ಮುಂದಿನ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು. ಪ್ರತಿಭಟನೆಯಲ್ಲಿ ಬಸವರಾಜು, ಸಿದ್ದರಾಜು, ರಾಮನಾಯಕ, ರಾಜೇಶ್ವರಿ ಮತ್ತಿತರರರು ಪಾಲ್ಗೊಂಡಿದ್ದರು.

ವಾಜಮಂಗಲ ಗ್ರಾಮದಲ್ಲಿ
ಡಾ.ಅಂಬೇಡ್ಕರ್ ಬ್ಯಾನರ್‌ಗೆ ಹಾನಿ
ಗ್ರಾಮಸ್ಥರ ಆಕ್ರೋಶ; ದುಷ್ಕರ್ಮಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯ, ಸ್ಥಳದಲ್ಲಿ ಬಿಗುವಿನ ವಾತಾವರಣ; ಬಿಗಿ ಪೊಲೀಸ್ ಬಂದೋಬಸ್ತ್



ವಾಜಮಂಗಲದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿರುವುದು.

ಮೈಸೂರು, ಏ.19(ಆರ್‌ಕೆ)–ಮೈಸೂರು ತಾಲೂಕು, ವಾಜಮಂಗಲ ಗ್ರಾಮದಲ್ಲಿ ಕಿಡಿಗೇಡಿಗಳು ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರವಿರುವ ಬ್ಯಾನರ್‌ಗಳಿಗೆ ಹಾನಿ ಮಾಡಿರುವ ಘಟನೆ ಶುಕ್ರವಾರ ಮಧ್ಯರಾತ್ರಿ ಸಂಭವಿಸಿದೆ.

ಇಂದು ಬೆಳಗಾಗುತ್ತಿದ್ದಂತೆಯೇ ಏಪ್ರಿಲ್ 14ರಂದು ಡಾ.ಅಂಬೇಡ್ಕರ್ ಜಯಂತಿ ಅಂಗವಾಗಿ ಅಳವಡಿಸಿದ್ದ ಬ್ಯಾನರ್‌ಗಳನ್ನು ಬ್ಲೇಡಿನಿಂದ ಕೊಯ್ದು ಹಾನಿ ಮಾಡಿರುವುದು ಗೋಚರಿಸುತ್ತಿದ್ದಂತೆಯೇ ಗ್ರಾಮಸ್ಥರು, ದಲಿತ ಸಂಘಟನೆಗಳ ಪದಾಧಿಕಾರಿಗಳು ಸ್ಥಳದಲ್ಲಿ ಪ್ರತಿಭಟನೆ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಂವಿಧಾನ ಶಿಲ್ಪಿ, ವಿಶ್ವ ಜ್ಞಾನಿ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರವುಳ್ಳ ಬ್ಯಾನರ್‌ಗಳನ್ನು ಹರಿದು ಹಾಕಿ ಹಾನಿ ಮಾಡಿರುವ ದುಷ್ಕರ್ಮಿಗಳನ್ನು ಪತ್ತೆ ಮಾಡಿ ಬಂಧಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ವಾಜಮಂಗಲಕ್ಕೆ ಭೇಟಿ ನೀಡಿದ್ದ ಎಸ್ಪಿ ಎನ್.ವಿಷ್ಣುವರ್ಧನ್, ಅಡಿಷನಲ್ ಎಸ್ಪಿಗಳಾದ ಸಿ.ಮಲ್ಲಿಕ್, ನಾಗೇಶ್, ಡಿವೈಎಸ್ಪಿ ಕರೀಂ ರಾವತರ್ ಅವರು ಅಂಬೇಡ್ಕರ್ ಬ್ಯಾನರ್‌ಗಳಿಗೆ ಹಾನಿ ಮಾಡಿರುವ ಕಿಡಿಗೇಡಿಗಳನ್ನು ಪತ್ತೆ ಮಾಡಿ ಜೈಲಿಗೆ ಕಳುಹಿಸುತ್ತೇವೆ, ಶಾಂತಿ ಕಾಪಾಡಿ ಎಂದು ಮನವಿ ಮಾಡಿದರು.

ಕೃತ್ಯ ಎಸಗಿರುವವರನ್ನು ಬಂಧಿಸಿ ಕಾನೂನು ರೀತಿ ಕ್ರಮ ವಹಿಸಬೇಕು. ಅಲ್ಲಿ ಅಳವಡಿಸಿರುವ ಡಾ.ಅಂಬೇಡ್ಕರ್ ಭಾವಚಿತ್ರವುಳ್ಳ ಬ್ಯಾನರ್‌ಗಳಿಗೆ ರಕ್ಷಣೆ ನೀಡಬೇಕೆಂದೂ ಒತ್ತಾಯಿಸಿ ಪ್ರತಿಭಟನಾಕಾರರು ಎಸ್ಪಿ ಎನ್.ವಿಷ್ಣುವರ್ಧನ್ ಅವರಿಗೆ ಲಿಖಿತ ದೂರು ನೀಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಡಿಎಆರ್, ಕೆಎಸ್‌ಆರ್‌ಪಿ ತುಕಡಿ ಹಾಗೂ ಸಿವಿಲ್ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಬಿಜಿಎಸ್ ಪ್ರಥಮ ದರ್ಜೆ ಕಾಲೇಜು :** ಕೆರಿಯರ್ ಮಾರ್ಕರ್ ಕೌಶಲಾಧಾರಿತ ಕಾರ್ಯಕ್ರಮ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಅಭಿವೃದ್ಧಿ ಟ್ರಸ್ಟ್ :** ರಾಜ್ಯ ಮಟ್ಟದ 12ನೇ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಮ್ಮೇಳನ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಎಂ.ಬಿ.ಜಯಶಂಕರ, ಡಾ.ಅಮ್ಮಸಂದ್ರ ಸುರೇಶ, ಈರಪ್ಪ ಕುಡಗುಂಟಿ, ಡಾ.ಮಹೇಶ್ ಜೋಶಿ, ಎಂ.ಜಿ.ಆರ್.ಅರಸ್, ಲಯನ್ ಗೋಲ್ಡನ್ ಟಿ. ಸುರೇಶ, ಡಾ.ಟಿ.ತ್ಯಾಗರಾಜು, ಬಿ.ಸಿ.ಎಸ್.ಕುಮಾರ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸರ್ ಎಂ. ವಿಶ್ವೇಶ್ವರಯ್ಯನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ:** ಮಳೆ ನೀರಿನ ಸಂಗ್ರಹಣೆ ಮತ್ತು ಬೋರ್‌ವೆಲ್/ತೆರೆದ ಬಾವಿ ಅಂತರ್ಜಲ ಅಭಿವೃದ್ಧಿಯ ಬಗ್ಗೆ ಪ್ಲಂಬಿಂಗ್ ತಂತ್ರಜ್ಞಾನಗಳು ಕುರಿತು ಕಾರ್ಯಾಗಾರ, ಉಪನ್ಯಾಸ: ನೀರಾವರಿ ಇಲಾಖೆ ನಿವೃತ್ತ ಎಸ್‌ಇ ಹೆಚ್. ರಮೇಶ್, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ಅತಿಥಿಗಳು: ಎಸ್.ಮಹೇಶ್, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 9.45ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಲಯನ್ಸ್ ಇಂಟರ್ ನ್ಯಾಷನಲ್:** 2ನೇ ವಾರ್ಷಿಕ ಜಿಲ್ಲಾ ಸಮಾವೇಶ 'ಸಾರ್ಥ' ಮುಖ್ಯ ಅತಿಥಿಗಳು : ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯಲಕ್ಷ್ಮಿ ದೇಶಮಾನೆ, ಗೌರವ ಅತಿಥಿಗಳು : ಚಲನಚಿತ್ರ ನಟ ಅನಿರುದ್ಧ್ ಜಟ್ಕರ್, ಅಧ್ಯಕ್ಷತೆ : ಲಯನ್ ಎನ್. ಸುಬ್ರಮಣ್ಯ, ಸ್ಥಳ: ಕರಾಮುವಿವಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವವಸು ನಾಮ ಸಂವತ್ಸರದ ಶ್ರೀರಾಮ ನವಮಿ, ಬೆಳಗ್ಗೆ 11ರಿಂದ ಎಂ.ಎಸ್.ವೆಂಕಟೇಶ್ ಅವರಿಂದ ದಾಸರ ಪದಗಳು, ಸಂಜೆ 6.30ಕ್ಕೆ ಕೃಷ್ಣಮೂರ್ತಿಪುರಂ ಸಿರಿದೇವಿ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ಶ್ರೀರಾಮ ದೇವಸ್ಥಾನ, ಚಾಮರಾಜಪುರಂ, ಸಂಜೆ.

■ **ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘ :** ನಾಡ ಕುಸ್ತಿ ಪಂದ್ಯಾವಳಿ ಹಾಗೂ ಗರಡಿ ಗಮ್ಮತ್ತು ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಅಧ್ಯಕ್ಷತೆ : ಶಾಸಕ ಟಿ.ಎಸ್.ಶ್ರೀವತ್ಸ, ಗ್ರಂಥ ಬಿಡುಗಡೆ : ಸಂಘದ ಗೌರವಾಧ್ಯಕ್ಷ ಪೈಲ್ವಾನ್ ಎಸ್.ಮಹದೇವ್, ಕೃತಿ ಕುರಿತು: ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಎಸ್.ಚಂದ್ರಶೇಖರ್, ಗಿರೀಶ್ ದೊಡ್ಡಮನಿ, ಪಿ.ನಾಗೇಂದ್ರ, ಸಿ.ಬಸವರಾಜ್, ಓ.ಶ್ಯಾಮ್ ಭಟ್, ಜಿ.ಎನ್. ಅನಂತವರ್ಧನ್, ಸ್ಥಳ: ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡ, ಮಧ್ಯಾಹ್ನ 3.30ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಶ್ರೀಮತಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ಕುಲಶೇಖರ ಆಳ್ವಾರ್ ವಿರಚಿತ ಮುಕುಂದ ಮಾಲಾ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಸಂಜೆ 6ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಸ್ತೋತ್ರ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ನಲವತ್ತರ ನಲಿವು ವೈವಿಧ್ಯಮಯ ಸಂಗೀತ ಕಾರ್ಯಕ್ರಮದ ಸಮಾರೋಪ ಸಮಾರಂಭ, ಉಪಸ್ಥಿತರು : ಶ್ರೀಮತಿ ಎಚ್.ಆರ್. ಲೀಲಾವತಿ, ಶ್ರೀಮತಿ ಬಿ.ಕೆ.ಸುಮಿತ್ರಾ, ಡಾ. ಮಾಧವಿರಾಜ, ಶ್ರೀಮತಿ ಇಂದು ವಿಶ್ವನಾಥ್, ಡಾ. ರೋಹಿಣಿ ಮೋಹನ್, ಪ್ರವೀಣ್ ಡಿ. ರಾವ್, ಎಚ್.ಆರ್. ಲೀಲಾವತಿ ಅವರ ಗಾಯನ, ಸಂಗೀತ ಸಂಯೋಜನೆ ಹಾಗೂ ಕಾವ್ಯ 'ಹಾಡಾಗಿ ಹರಿದಾಳೆ', ಸ್ಥಳ: ರಮಾಗೋವಿಂದ ರಂಗಮಂದಿರ, ಗಾನಭಾರತಿ, ಕುವೆಂಪುನಗರ, ಸಂಜೆ 6ಕ್ಕೆ.

■ **ಇಲವಾಲದ ಶ್ರೀ ವರದರಾಜಸ್ವಾಮಿ ದೇವಸ್ಥಾನ :** ಶ್ರೀರಾಮೋತ್ಸವ, ಖ್ಯಾತ ಸಂಗೀತ ಗಾಯಕಿ ಹಾಗೂ ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿದುಷಿ ಸುಮ ಹರಿನಾಥ್ ಅವರಿಂದ ದಾಸರ ಪದಗಳ ಗಾಯನ, ಮೃದಂಗದಲ್ಲಿ ವಿದ್ವಾನ್ ಶ್ಯಾಂ–ಮೃದಂಗ, ವಿದ್ವಾನ್ ಚೇತನ್–ವಯೋಲಿನ್, ಸ್ಥಳ: ಶ್ರೀ ವರದರಾಜಸ್ವಾಮಿ ದೇವಸ್ಥಾನ, ಸಂಜೆ 6ಕ್ಕೆ.

■ **ಶ್ರೀರಾಮಮಂದಿರ (ಜಯನಗರ):** ಶ್ರೀ ರಾಮಚಂದ್ರ ಸ್ವಾಮಿಯವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀ ರಾಮ ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ, ಕುಂಭಾಭಿಷೇಕ, 59ನೇ ವಾರ್ಷಿಕೋತ್ಸವ ಕಾರ್ಯಕ್ರಮ, ಬೆಳಗ್ಗೆ 7 ಗಂಟೆಯಿಂದ ಶ್ರೀ ರಾಮಚಂದ್ರಸ್ವಾಮಿಗೆ ಷೋಡಷ ದ್ರವ್ಯಗಳಿಂದ ಅಭಿಷೇಕ ಮತ್ತು ಪಟ್ಟಾಭಿಷೇಕ ಪರಮಪೂಜ್ಯ ಶ್ರೀ ಬ್ರಹ್ಮಾನಂದ ಭಾರತಿ ಸ್ವಾಮಿಗಳು, ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರ, ಶಿರಳಿಗಿ, ಸಿದ್ದಾಪುರ, ಉತ್ತರ ಕನ್ನಡ ಅವರಿಂದ ವಿಮಾನ ಗೋಪುರಗಳಿಗೆ ಕುಂಭಾಭಿಷೇಕ ಮತ್ತು ಅನುಗ್ರಹ ಭಾಷಣ, ಸಂಜೆ 6.30ಕ್ಕೆ ಶ್ರೀ ಪರಿವಾರ ಸಮೇತ ಹನುಮಂತೋತ್ಸವ, ಸ್ಥಳ: ರಾಮಮಂದಿರ ಆವರಣ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ವಿಶ್ವವಸು ನಾಮ ಸಂವತ್ಸರದ 135ನೇ ವರ್ಷದ ಶ್ರೀ ರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ಶಯನೋತ್ಸವ, ಸಂಜೆ 6.30ಕ್ಕೆ ಕು. ಕೆ. ಸಿಂಧುಶ್ರೀ ಮತ್ತು ಅದಿತಿ ರಮೇಶ್ ಅವರಿಂದ ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ.

■ **ರಂಗಾಯಣ, ರಂಗಸಂಪದ ತಂಡ :** ಕನ್ನಡ ಚಲನಚಿತ್ರ ನಟಿ ಮತ್ತು ರಂಗ ಕಲಾವಿದೆ ಉಮಾಶ್ರೀ ಅವರಿಂದ ಶರ್ಮಿಷ್ಠೆ ಏಕವ್ಯಕ್ತಿ ನಾಟಕ ಪ್ರದರ್ಶನ, ನಿರ್ದೇಶನ : ಚಿದಂಬರರಾವ್ ಜಂಬೆ, ರಚನೆ : ಬೇಲೂರು ರಘುನಂದನ್ ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6.30ಕ್ಕೆ.

■ **ಅರಳಿ ರಂಗ ತಂಡ :** ಡಾ.ಸಿ.ರವೀಂದ್ರನಾಥ್ ಅವರು ರಚಿಸಿರುವ ಕನ್ನಡ ನಾಟಕ ಉರುವಿ, ಉಪಸ್ಥಿತರು : ಸಾಹಿತಿ ರಹಮತ್ ತರಿಕೆರೆ, ಅಂಕಣಕಾರ ಬಿ. ಚಂದ್ರೇಗೌಡ, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಮಂಡಳಿ:** ಶ್ರೀ ರಾಮೋತ್ಸವ, ಪ್ರವಚನ, ಮಕ್ಕಳಿಂದ ಹಾಡುಗಾರಿಕೆ ಮತ್ತು ಸಮಾರೋಪ ಸಮಾರಂಭ, ಸ್ಥಳ: ಮಂಡಳಿ ಆವರಣ, ಚಂದ್ರಮೌಳೇಶ್ವರ ರಸ್ತೆ, ಕೆ.ಆರ್.ನಗರ, ಸಂಜೆ.

ದಂಡಿಕೆರೆ ಗ್ರಾಮದಲ್ಲಿಂದು, ಮೈಸೂರು ತಾಲೂಕು

■ **ಡಾ.ಅಂಬೇಡ್ಕರ್ ಯುವಕರ ಸಂಘ:** ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಅಂಗವಾಗಿ ಡಾ.ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮ, ಸಾನ್ನಿಧ್ಯ: ಬಂತೇ ಬೋಧಿರತ್ನ, ಆಶೀರ್ವಚನ: ಶ್ರೀ ಬಸವಲಿಂಗ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ದರ್ಶನ್, ಸಂಸದ ಸುನೀಲ್ ಬೋಸ್, ಅಧ್ಯಕ್ಷತೆ: ಎಂಎಲ್‌ಸಿ ಡಾ.ಯತೀಂದ್ರ ಬೆಳಗ್ಗೆ 10ಕ್ಕೆ.



ಇಂದಿನ ಪಂಚಾಂಗ

20.04.2025 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025ರಿಂದ 26.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪೂಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ದಿವ್ಯಾ ರಾಘವನ್, 8.30–ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, ವಿಷಯ : ಭಾಗವಹಿಸುತ್ತಾರೆ, ನಿರ್ಮಾಣ–ನಂದನ್‌ಕುಮಾರ್ ಎಲ್.ಓ., 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಅಕಾಲ ಪ್ರೌಢಾವಸ್ಥೆ ಕುರಿತು ಮಕ್ಕಳ ಮತ್ತು ಹದಿಹರೆಯದವರ ಎಂಡೋಕ್ರೈನಾಲಜಿಸ್ಟ್ ಡಾ.ತೃಪ್ತಿ. ಎಸ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH - TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಶ್ರೀರಂಗಪಟ್ಟಣ ತಾಲೂಕು ವಿದ್ಯಾಭಾರತಿ ಪಬ್ಲಿಕ್ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಮಾದಗಳ್ಳಿ ಗ್ರಾಮದ ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ ಸಿದ್ಧಯ್ಯನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ. ಸಿ.ಎ.ಶ್ರೀಧರ್, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 9.15 ರಂಗಗೀತೆಗಳು–ಶ್ರೀಕೃಷ್ಣ ಪಾರಿಜಾತ ನಾಟಕದ ಹಾಡುಗಳು, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ–Radio Scope, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಬಿ. ವಿ. ದುರ್ಗಾ ಭವಾನಿ–ವೈಯೋಲಿನ್ ವಾದನ

ಮೈಸೂರು ಮಿತ್ರ

ಪ್ರೇಕ್ಷಕರ ಚಿತ್ತದಲ್ಲಿ ಯುಗಾದಿಯ ಚಿತ್ತಾರ ಮೂಡಿಸಿದ ಮನಮೋಹಕ ಭರತನಾಟ್ಯ

● ಚಿತ್ಕಲಾ ಸ್ಕೂಲ್ ಆಫ್ ಡ್ಯಾನ್ಸ್‌ನ ಪಿ.ಪ್ರವೀಣ್ ಕುಮಾರ್ ನೇತೃತ್ವದ ತಂಡದಿಂದ ಅನಾವರಣಗೊಂಡ ಭರತನಾಟ್ಯದ ಸೊಗಸು ● ಮೈಸೂರು ಬಿವಿಬಿಯಲ್ಲಿ ನಡೆದ ನೃತ್ಯೋಲ್ಲಾಸಕ್ಕೆ ಮನಸೋತ ಪ್ರೇಕ್ಷಕರು



ಮೈಸೂರಿನ ಭಾರತೀಯ ವಿದ್ಯಾಭವನದ ಸಭಾಂಗಣದಲ್ಲಿ ಶನಿವಾರ ಬೆಂಗಳೂರಿನ ಚಿತ್ಕಲಾ ಸ್ಕೂಲ್ ಆಫ್ ಡ್ಯಾನ್ಸ್‌ನ ಪಿ.ಪ್ರವೀಣ್‌ಕುಮಾರ್ ನೇತೃತ್ವದ ತಂಡ ಭರತನಾಟ್ಯ ಪ್ರಸ್ತುತಪಡಿಸಿತು.



ಮೈಸೂರಿನ ಭಾರತೀಯ ವಿದ್ಯಾಭವನದ (ಬಿವಿಬಿ) ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಭರತನಾಟ್ಯ ಕಾರ್ಯಕ್ರಮವನ್ನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು ಮತ್ತು ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರಾದ ಡಾ.ಕೆ.ಬಿ.ಗಣಪತಿ ಅವರು (ಎಡದಿಂದ 5ನೇಯವರು) ಉದ್ಘಾಟಿಸಿದರು. ಎಡದಿಂದ ಬಿವಿಬಿ ಮೈಸೂರು ಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಮರೀಗೌಡ, ಕೃಷ್ಣೇಗೌಡ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಚಿತ್ಕಲಾ ಸ್ಕೂಲ್ ಆಫ್ ಡ್ಯಾನ್ಸ್‌ನ ಪಿ.ಪ್ರವೀಣ್‌ಕುಮಾರ್, ಬಿವಿಬಿ ಮೈಸೂರು ಕೇಂದ್ರದ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಆಡಳಿತ ಮಂಡಳಿ ಸದಸ್ಯ ಗಂಗಾಧರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.19(ಪಿಎಂ)– ಪ್ರೇಕ್ಷಕರ ಚಿತ್ತದಲ್ಲಿ ಯುಗಾದಿಯ ಚಿತ್ತಾರ ಮೂಡಿಸಿದ ಮನಮೋಹಕ ಭರತನಾಟ್ಯ... ಮಾತ್ರವಲ್ಲದೆ, ನಟರಾಜನ ತಾಂಡವ... ಕೃಷ್ಣನ ತುಂಟಾಟ... ವಿಷ್ಣುವಿನ ದಶಾವತಾರ... ಸಹ ಭರತನಾಟ್ಯದಲ್ಲಿ ಅನಾವರಣಗೊಂಡು ದೃಶ್ಯಕಾವ್ಯ ಮೂಡಿಸಿತು. ಇಂತಹ ಸೊಗಸಿಗೆ ಪ್ರೇಕ್ಷಕರು ತಲೆದೂಗಿ ಸಂಭ್ರಮಿಸಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಬಿವಿಬಿ ಮೈಸೂರು ಕೇಂದ್ರದ ವತಿಯಿಂದ 'ನೃತ್ಯೋಲ್ಲಾಸ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ಬೆಂಗಳೂರಿನ ಚಿತ್ಕಲಾ ಸ್ಕೂಲ್ ಆಫ್ ಡ್ಯಾನ್ಸ್‌ನ ಪಿ.ಪ್ರವೀಣ್‌ಕುಮಾರ್ ನೇತೃತ್ವದ ತಂಡ ಹೀಗೆ ನಾಟ್ಯಮಯ ಲೋಕದಲ್ಲಿ ಪ್ರೇಕ್ಷಕರಲ್ಲಿ ಉಲ್ಲಾಸನ್ನುಂಟು ಮಾಡುವಲ್ಲಿ ಯಶಸ್ವಿಯಾಯಿತು.

ಪಿ.ಪ್ರವೀಣ್‌ಕುಮಾರ್ ನೇತೃತ್ವದಲ್ಲಿ ಅವರ ಶಿಷ್ಯ ವೃಂದದ ಕಲಾವಿದೆಯರಾದ ಶ್ರೀಮಾ, ನವ್ಯಶ್ರೀ, ರಿಯಾ ಸ್ವಾಮಿನಾಥನ್, ಮೀನಾಕ್ಷಿ, ರಾಗ, ಪ್ರಜ್ವಲಿತ ಅವರು ಮನಮೋಹಕವಾಗಿ ಹೆಜ್ಜೆ ಹಾಕಿದರು. 'ಪುಷ್ಪಾಂಜಲಿ' ನೃತ್ಯದೊಂದಿಗೆ ಪ್ರಾರಂಭಗೊಂಡ ಭರತನಾಟ್ಯವು, ವಿಘ್ನೇಶ್ವರ, ಲಕ್ಷ್ಮೀ ಹಾಗೂ ನಟರಾಜನಿಗೆ ಪ್ರಾರ್ಥನೆ ಸಲ್ಲಿಸುವ ಸಾಹಿತ್ಯ ಮತ್ತು ಸಂಗೀತಕ್ಕೆ ಭಕ್ತಿಪೂರ್ವಕ ಹೆಜ್ಜೆ ಹಾಕುವ ಮೂಲಕ ಸಭಿಕರಲ್ಲಿಯೂ ಭಕ್ತಿಭಾವ ಮೂಡಿಸಿದರು. 'ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ..' ಮಂತ್ರ ಸೇರಿದಂತೆ ವಿವಿಧ ಸಾಹಿತ್ಯ ಸಂಯೋಜಿಸಿರುವ ಸಂಗೀತಕ್ಕೆ ನಾಟ್ಯ ಪ್ರದರ್ಶಿಸಿ, ಭಕ್ತಿಯ ಹೊನಲು ಹರಿಸಿದರು.

ಸಂತ ಅನ್ನಮಾಚಾರ್ಯರ ರಚನೆಯ 'ಜಯ ಜಾನಕಿ ರಮಣ...' ಗೀತೆಗೆ ಹೆಜ್ಜೆ ಹಾಕಿದ ಪಿ.ಪ್ರವೀಣ್‌ಕುಮಾರ್ ಮತ್ತು ಅವರ ಶಿಷ್ಯ ವೃಂದವು ವಿಷ್ಣುವಿನ ದಶಾವತಾರದ ದೃಶ್ಯಕಾವ್ಯವನ್ನೇ ಮೂಡಿಸಿದರು. ವಿಷ್ಣುವಿನ ಅವತಾರಗಳನ್ನು ವರ್ಣಿಸಿರುವ ಈ ಗೀತೆಗೆ ಸೊಗಸಾಗಿ ನೃತ್ಯ ಪ್ರದರ್ಶಿಸಿ, ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದರು. ವಂಕಟೇಶ್ವರ, ನರಸಿಂಹ, ಕೃಷ್ಣ ಸೇರಿದಂತೆ ಮೊದಲಾದ ವಿಷ್ಣುವಿನ ಅವತಾರಗಳು ಒಂದೊಂದೇ ನಾಟ್ಯ ಕಲಾವಿದರ ಭಾವಭಂಗಿಯಲ್ಲಿ ಮೂಡಿಬರುತ್ತಿದ್ದನ್ನು ಕಂಡ ಪ್ರೇಕ್ಷಕರು ಚಪ್ಪಾಳೆಯ ಮಳೆ ಸುರಿಸಿ ಅಭಿಮಾನ ವ್ಯಕ್ತಪಡಿಸಿದರು.

ಬಳಿಕ 'ಶಿವಸ್ತುತಿ' ನೃತ್ಯ ಪ್ರಕಾರಕ್ಕೆ ವೇದಿಕೆ ತೆರೆದುಕೊಂಡಿತು. ನಟರಾಜನ ತಾಂಡವದ ರೋಚಕ ಭಾವಭಂಗಿಯನ್ನು ಪಿ.ಪ್ರವೀಣ್‌ಕುಮಾರ್ ಒಬ್ಬರೇ ಸಾದಪಡಿಸಿದರು. ದಣಿವರಿಯದೇ ನಿರಂತರ ಉಲ್ಲಾಸಮಯ ನೃತ್ಯದೊಂದಿಗೆ ಅವರು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. 'ಮಹಾದೇವೋ ಶಿವ ಶಂಭೋ...' ಗೀತೆಗೆ ಹೆಜ್ಜೆ ಹಾಕುವ ಮೂಲಕ ಗೆಜ್ಜೆನಾದ ಹೊಮ್ಮಿಸಿ ನಾಟ್ಯದ ಅಧಿಪತಿ ನಟರಾಜನ ವಿವಿಧ ಅವತಾರಗಳನ್ನು ನೃತ್ಯದ ಮೂಲಕ ಸಾದರಪಡಿಸಿದರು.

ನಂತರ ಯುಗಾದಿ ಹಬ್ಬ ಕುರಿತಂತೆ ಪ್ರವೀಣ್‌ಕುಮಾರ್ ಮತ್ತು ಅವರ ತಂಡ ಸಾದರಪಡಿಸಿದ ನೃತ್ಯವು ಚೈತ್ರ ಮಾಸದ ಪ್ರಾಕೃತಿಕ ಸೌಂದರ್ಯವನ್ನು ಕಣ್ಮುಂದೆ ತಂದಿತು. 'ಹೊಸ ವರುಷ ಬಂದಿದೆ.. ನವ ಹರುಷ ತಂದಿದೆ... ಮಾಮರ ಚಿಗುರು... ಹಳೆಯದೆಲ್ಲಾ ಕಳೆಯಿತು... ಹೊಸದಾರಿ ತೆರೆಯಿತು...' ಗೀತೆಗೆ ನಾಟ್ಯ ಪ್ರಸ್ತುತಪಡಿಸಿ, ಪ್ರೇಕ್ಷಕರ ಚಿತ್ತದಲ್ಲಿ ಯುಗಾದಿ ಹಬ್ಬದ ಚಿತ್ತಾರ ಮೂಡಿಸಿದರು. ಆ ಮೂಲಕ ಯುಗಾದಿ ಹಬ್ಬದ ಮಹತ್ವ, ಆ ವೇಳೆಯ ಪ್ರಾಕೃತಿಕ ಸೌಂದರ್ಯದ ವರ್ಣನೆಯನ್ನು ತಮ್ಮ ನೃತ್ಯದಲ್ಲಿ ಅನಾವರಣಗೊಳಿಸಿದರು. ಇದಲ್ಲದೆ, ಕೃಷ್ಣಾಂಜಲಿ, ದೇವಿಸ್ತುತಿ, ಪದಂ ಮೊದಲಾದ ಭರತನಾಟ್ಯದ ನೃತ್ಯ ಪ್ರಕಾರದೊಂದಿಗೆ ಪ್ರೇಕ್ಷಕರ ಮನಕ್ಕೆ ಲಗ್ಗೆಯಿಟ್ಟ ಈ ತಂಡವು ಅವರಿಂದ ಅಭಿಮಾನ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾಯಿತು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಭಾರತೀಯ ವಿದ್ಯಾಭವನದ (ಬಿವಿಬಿ) ಮೈಸೂರು ಕೇಂದ್ರದ ಅಧ್ಯಕ್ಷರಾದ ಡಾ.ಕೆ.ಬಿ.ಗಣಪತಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ಗಂಗಾಧರ್, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಇಂದಿನ ಕಾರ್ಯಕ್ರಮದ ಪ್ರಾಯೋಜಕರೂ ಆದ ಬಿವಿಬಿ ಮೈಸೂರು ಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಮರೀಗೌಡ ಮತ್ತು ಕೃಷ್ಣೇಗೌಡ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಪ್ರೇಕ್ಷಕರು ಹಾಜರಿದ್ದರು.

ದಟ್ಟಗಳ್ಳಿಯಲ್ಲಿ 'ಹೈಟೆನ್ಷನ್ ವಿದ್ಯುತ್ ಲೈನ್'ಗಾಗಿ 175 ಮರಗಳ 'ಮಾರಣಹೋಮ'ಕ್ಕೆ ಸಿದ್ಧತೆ

ದಟ್ಟಗಳ್ಳಿಯ ಮೂರನೇ ಹಂತದ 10ನೇ ಕ್ರಾಸ್‌ನ ಹಲವು ಮರಗಳಿಗೆ ಸಂಖ್ಯೆ ನಮೂದು



ಮೈಸೂರಿನ ದಟ್ಟಗಳ್ಳಿಯ ಮೂರನೇ ಹಂತದ 10ನೇ ಕ್ರಾಸ್ ರಸ್ತೆಯಲ್ಲಿ ಹೈಟೆನ್ಷನ್ ವಿದ್ಯುತ್ ಲೈನ್ ನಿರ್ಮಾಣಕ್ಕಾಗಿ ತೆರವುಗೊಳಿಸಲು ಉದ್ದೇಶಿಸಿರುವ ಸಾಲು ಮರಗಳು.

ಮೈಸೂರು, ಏ.19(ಎಂಟಿವೈ)– ಮೈಸೂರಿನ ದಟ್ಟಗಳ್ಳಿಯಲ್ಲಿ 'ಹೈಟೆನ್ಷನ್ ವಿದ್ಯುತ್ ಲೈನ್' ನಿರ್ಮಾಣಕ್ಕಾಗಿ ಕೆಪಿಟಿಸಿಎಲ್, ಸುಮಾರು 175 ಮರಗಳ ತೆರವಿಗೆ ಅನುಮತಿ ಕೋರಿ ಅರಣ್ಯ ಇಲಾಖೆಗೆ ಪತ್ರ ಬರೆದಿದ್ದು, ಸ್ಥಳೀಯರು ಹಾಗೂ ಪರಿಸರ ಸ್ನೇಹಿಗಳಲ್ಲಿ ಆತಂಕ ನಿರ್ಮಾಣವಾಗಿದೆ.

ದಟ್ಟಗಳ್ಳಿಯ ರಿಂಗ್‌ರಸ್ತೆ ಜಂಕ್ಷನ್‌ನಲ್ಲಿರುವ ಕೆಪಿಟಿಸಿಎಲ್ ವಿದ್ಯುತ್ ಪ್ರಸರಣ ಘಟಕದಿಂದ ದಟ್ಟಗಳ್ಳಿಯ ಮೂರನೇ ಹಂತದ 10ನೇ ಕ್ರಾಸ್ ಮೂಲಕ ಹೆಚ್.ಡಿ.ಕೋಟೆ ರಸ್ತೆ ಕಡೆಗೆ ಹೊಸದಾಗಿ ಹೈಟೆನ್ಷನ್ ವಿದ್ಯುತ್ ಲೈನ್ ಅಳವಡಿಸಲು ಉದ್ದೇಶಿಸಿದ್ದು, ಅದಕ್ಕಾಗಿ ದಟ್ಟಗಳ್ಳಿಯ ಮೂರನೇ ಹಂತದ ವಿವಿಧ ಅಡ್ಡ ರಸ್ತೆಗಳಲ್ಲಿ ಕಳೆದ ಮೂರು ದಶಕಗಳಿಂದ ಬೆಳೆದು ನಿಂತಿರುವ 175 ಮರ ಕಡಿಯಲು ಅವಕಾಶ ನೀಡುವಂತೆ ಕೆಪಿಟಿಸಿಎಲ್, ಅರಣ್ಯ ಇಲಾಖೆಗೆ ಪತ್ರ ವ್ಯವಹಾರ ನಡೆಸಿದೆ.

ವಸತಿ ಪ್ರದೇಶದೊಂದಿಗೆ ಶಾಲಾ ಕಟ್ಟಡ, ಕಲ್ಯಾಣ ಮಂಟಪವಿರುವ ಈ ರಸ್ತೆಯ ಎರಡೂ ಬದಿಯಲ್ಲೂ ಹೊಂಗೆ, ಸಿಲ್ವರ್ ಸೇರಿದಂತೆ ವಿವಿಧ ಜಾತಿಯ ಮರಗಳು ಸೊಗಸಾಗಿ ಬೆಳೆದಿವೆ. ದಟ್ಟಗಳ್ಳಿ ಬಡಾವಣೆ ಅಭಿವೃದ್ಧಿಪಡಿಸಿದಂದಿನಿಂದ ಗಿಡ ನೆಟ್ಟು ಪೋಷಿಸಿ, ಇವುಗಳ ಬೆಳೆಸಿರುವ ಸ್ಥಳೀಯರು, ಇದೀಗ ಬಡಾವಣೆಯಲ್ಲಿರುವ ಗಿಡ–ಮರಗಳನ್ನು ಹೈಟೆನ್ಷನ್ ಲೈನ್‌ಗಾಗಿ ಕಳೆದು ಕೊಳ್ಳುವಂತಾಗಿದೆ. ತಮ್ಮ ಬಡಾವಣೆಯಲ್ಲಿರುವ ಮರಗಳನ್ನು ಉಳಿಸಿಕೊಳ್ಳಲು ಹೋರಾಟದ ಹಾದಿ ತುಳಿಯಲು ಅವರು ನಿರ್ಧರಿಸಿದ್ದಾರೆ.

ಮರಗಳಿಗೆ ಮಾರ್ಕ್: ಹೈಟೆನ್ಷನ್ ವಿದ್ಯುತ್ ಮಾರ್ಗ ಹಾದು ಹೋಗುವ ಸಂಭವನೀಯ ರಸ್ತೆಗಳಲ್ಲಿರುವ ಮರಗಳ ತೆರವಿಗಾಗಿ ಕೆಪಿಟಿಸಿಎಲ್, ಮರಗಳ ಮೇಲೆ ಅಂಕೆ ನಮೂದಿಸಿದೆ. ಮರಗಳ ಮೇಲೆ ಗುರುತು ಮಾಡಿರುವ ಮಾರ್ಗ ದುದ್ದಕ್ಕೂ ಪರಿಶೀಲಿಸಿದಾಗ ಕೆಪಿಟಿಸಿಎಲ್, ರಿಂಗ್ ರಸ್ತೆಯ ಸರ್ವಿಸ್ ರಸ್ತೆವರೆಗೆ ಬೃಹತ್ ಮರ ಸೇರಿ ಒಟ್ಟು 175 ಮರಗಳ ತೆರವಿಗೆ ಗುರುತು ಮಾಡಲಾಗಿದೆ. ಅಲ್ಲದೆ, ರಿಂಗ್ ರಸ್ತೆಯ ಇಕ್ಕೆಲಗಳಲ್ಲಿ ಅರಣ್ಯ ಇಲಾಖೆಯೂ ಬೆಳೆಸಿದ್ದ ಬೇವಿನ ಮರಗಳೂ ಇರುವುದು ವಿಪರ್ಯಾಸ.

ಪರಿಸರವಾದಿಗಳ ಸಾಥ್: ದಟ್ಟಗಳ್ಳಿಯಲ್ಲಿ ತೆರವು ಮಾಡಲು ಉದ್ದೇಶಿಸಿರುವ ಮರಗಳ ಸಂರಕ್ಷಣೆಗೆ ಮೈಸೂರಿನ ಪ್ರಜ್ಞಾವಂತ ನಾಗರಿಕರು ಹಾಗೂ ಪರಿಸರವಾದಿಗಳು ಹೋರಾಟಕ್ಕೆ ಮುಂದಾಗಿದ್ದಾರೆ. ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ದಟ್ಟಗಳ್ಳಿಯಲ್ಲಿ ಮರ ಕಡಿಯಲು ಗುರುತಿಸಿರುವುದನ್ನು ಖಂಡಿಸಿ ಸಂದೇಶ ರವಾನಿಸುವ ಮೂಲಕ ಕಿಡಿಕಾರಿದ್ದಾರೆ. ಅಲ್ಲದೆ, ಯಾವುದೇ ಕಾರಣಕ್ಕೂ ಮರ ಕಡಿಯದಂತೆ ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ. ಸಾರ್ವಜನಿಕರು ಹಾಗೂ ಸ್ಥಳೀಯರ ಅಭಿಪ್ರಾಯ ಪಡೆಯದೇ ಮರ ತೆರವಿಗೆ ಮುಂದಾದರೆ ಉಗ್ರ ಹೋರಾಟ ಆರಂಭಿಸುವುದಾಗಿ ಪರಿಸರವಾದಿಗಳು ಎಚ್ಚರಿಕೆ ನೀಡಿದ್ದಾರೆ.

ಉತ್ತನಹಳ್ಳಿ ರಸ್ತೆಯಲ್ಲಿ 23 ಮರಗಳ ಬುಡಕ್ಕೆ ಕತ್ತರಿ: ಮೈಸೂರು ತಾಲೂಕಿನ ಉತ್ತನಹಳ್ಳಿಯ ರಿಂಗ್‌ರಸ್ತೆಯಿಂದ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಾಲಯದ ರಸ್ತೆ ಅಗಲೀಕರಣಕ್ಕೆ ರಸ್ತೆ ಬದಿಯಲ್ಲಿರುವ 23 ಮರಗಳ ತೆರವು ಮಾಡಲು ಗುರುತಿಸಲಾಗಿದೆ. ಕಡಕೊಳ ಪಟ್ಟಣ ಪಂಚಾಯ್ತಿ ವತಿಯಿಂದ ರಸ್ತೆ ಅಗಲೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಮರ ತೆರವಿಗೆ ಅನುಮತಿ ಕೋರಿ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದೆ.

ಗುಜರಾತ್ ಟೈಟನ್ಸ್, ಲಕ್ನೋ ಸೂಪರ್ ಜೈಂಟ್ಸ್‌ಗೆ ರೋಚಕ ಜಯ





ಅಹಮದಾಬಾದ್, ಜೈಪುರ, ಏ.19– ಜಾಸ್ ಬಟ್ಲರ್(97 ರನ್) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಗುಜರಾತ್ ಟೈಟನ್ಸ್ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದರೆ, ಐಡೆನ್ ಮಾರ್ಕ್ರಮ್ (66), ಆಯುಷ್ ಬದೋನಿ (50) ಅರ್ಧಶತಕ ಹಾಗೂ ಅವೇಶ್ ಖಾನ್(37ಕ್ಕೆ 3)ಚಮತ್ಕಾರಿ ಬೌಲಿಂಗ್ ಬಲದಿಂದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ 2 ರನ್‌ಗಳ ರೋಚಕ ಜಯ ಗಳಿಸಿತು.

ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 203 ರನ್ ಬಾರಿಸಿತು. 204ರನ್‌ಗಳ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ ಇನ್ನೂ 4 ಎಸೆತಗಳು ಬಾಕಿ ಇರುವಂತೆ 3 ವಿಕೆಟ್ ಕಳೆದುಕೊಂಡು ಭರ್ಜರಿ ಜಯ ಸಾಧಿಸಿತು. ಅಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿದ ಜಾಸ್ ಬಟ್ಲರ್ 97 ರನ್ ಸಿಡಿಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹಾಗೆಯೇ ಜೈಪುರದ ಸವಾಯಿ ಮಾನ್ಸಿಂಗ್ ಸ್ಟೇಡಿಯಂನಲ್ಲಿ 2ನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ 2 ರನ್‌ಗಳ ರೋಚಕ ಜಯ ಗಳಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್ ಕಲೆಹಾಕಿತು. 181 ರನ್‌ಗಳ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 178 ರನ್ ಗಳಿಸುವ ಮೂಲಕ 2 ರನ್‌ಗಳಿಂದ ಸೋಲು ಕಂಡಿತು.

ಮಾನಂದವಾಡಿ ರಸ್ತೆ ಅಗಲೀಕರಣಕ್ಕೆ 125 ಮರಗಳ ತೆರವಿಗೆ ಅರಣ್ಯ ಇಲಾಖೆಗೆ ಪ್ರಸ್ತಾವನೆ

ಪರಿಸರವಾದಿಗಳ ಆಕ್ರೋಶ

ಮೈಸೂರು, ಏ.19(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ 'ಮರ ಉಳಿಸಿ' ಕೂಗು ಗಟ್ಟಿಗೊಳ್ಳುತ್ತಿರುವ ಬೆನ್ನಲ್ಲೇ ಇದೀಗ ಮೈಸೂರಿನ ಮಾನಂದವಾಡಿ ರಸ್ತೆ ಅಗಲೀಕರಣಕ್ಕಾಗಿ 125 ಮರಗಳ ತೆರವಿಗೆ 'ಗುರುತು' ಮಾಡಲಾಗಿದ್ದು, ಈ ಪ್ರಯತ್ನ ಪರಿಸರವಾದಿಗಳ ಆಕ್ರೋಶಕ್ಕೆ ಎಡೆ ಮಾಡಿಕೊಟ್ಟಿದೆ.

ಮೈಸೂರಿನ ಹೈದರ್ ಅಲಿ ರಸ್ತೆಯಲ್ಲಿ ಎಸ್ಪಿ ಕಚೇರಿ ವೃತ್ತದಿಂದ ಕಾಳಿಕಾಂಭ ದೇವಾಲಯದವರೆಗೂ ರಸ್ತೆಯ ಎರಡೂ ಬದಿಯಲ್ಲಿದ್ದ 40ಕ್ಕೂ ಹೆಚ್ಚು ಮರಗಳ ಹನನ ವಿರೋಧಿಸಿ ಮೈಸೂರು ಮಾತ್ರವಲ್ಲದೆ ವಿವಿಧೆಡೆ ವ್ಯಾಪಕ ವಿರೋಧ ಕೇಳಿಬಂದಿದ್ದರೂ, ಮೈಸೂರಲ್ಲಿ ಮರಗಳ ಹನನ ಸದ್ದಿಲ್ಲದೆ ಮುಂದುವರೆಯುವ ಪ್ರಯತ್ನಗಳು ಕಂಡು ಬರುತ್ತಿದೆ. ರಸ್ತೆ ಅಗಲೀಕರಣದ ನೆಪದಲ್ಲಿ ರಿಂಗ್‌ರಸ್ತೆಯ ಜಂಕ್ಷನ್‌ನಿಂದ ಉದ್ಬೂರ್ ಗೇಟ್‌ವರೆಗೂ ಮಾನಂದವಾಡಿ ರಸ್ತೆಯ ಎರಡೂ ಬದಿಯಲ್ಲಿರುವ 125ಕ್ಕೂ ಹೆಚ್ಚು ಮರಗಳ ತೆರವಿಗೆ ಗುರುತು ಮಾಡಲಾಗಿದ್ದು, ಇವುಗಳ ತೆರವಿಗೆ ಅನುಮತಿಗಾಗಿ ಅರಣ್ಯ ಇಲಾಖೆಯ ಮೊರೆ ಹೋಗಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಇದರಿಂದ ಪರಿಸರವಾದಿಗಳಲ್ಲಿ ಆತಂಕ ಮನೆ ಮಾಡಿದ್ದು, ಯಾವುದೇ ಕಾರಣಕ್ಕೂ ಮರಗಳ ಹನನ ಮಾಡದಂತೆ ಹಕ್ಕೊತ್ತಾಯ ಮಾಡುತ್ತಿದ್ದಾರೆ.

ಎಲ್ಲಿಂದ ಎಲ್ಲಿಗೆ: ಮೈಸೂರಿಂದ ಹೆಚ್.ಡಿ. ಕೋಟೆ, ಸರಗೂರು, ಕೊಡಗಿನ ಕುಟ್ಟ, ಮಾನಂದವಾಡಿ ಸೇರಿದಂತೆ ಕೇರಳದ ವಿವಿಧ ನಗರಕ್ಕೆ ಸಂಪರ್ಕ ಕಲ್ಪಿಸುವ ಮಾನಂದವಾಡಿ ರಸ್ತೆಯನ್ನು ರಿಂಗ್‌ರಸ್ತೆಯ ಜಂಕ್ಷನ್‌ನಿಂದ ಉದ್ಬೂರ್ ಗೇಟ್‌ವರೆಗೂ ಅಗಲೀಕರಣ ಮಾಡಲು ಲೋಕೋಪಯೋಗಿ ಇಲಾಖೆ ನಿರ್ಧರಿಸಿದ್ದು, ಅದಕ್ಕಾಗಿ ರಸ್ತೆ ಬದಿಯಲ್ಲಿರುವ ಮರಗಳ ತೆರವಿಗಾಗಿ ಕಳೆದ 6 ತಿಂಗಳ ಹಿಂದೆಯೇ ಅರಣ್ಯ ಇಲಾಖೆಗೆ ಪತ್ರ ಬರೆದಿದೆ. ರಿಂಗ್ ರಸ್ತೆಯ ಜಂಕ್ಷನ್‌ನಿಂದ 300 ಮೀಟರ್‌ನಿಂದ ರಸ್ತೆಯ ಎರಡೂ ಬದಿಯಲ್ಲೂ ಮರಗಳಿದ್ದು, ಅವುಗಳನ್ನು ತೆರವು ಮಾಡಲು ಉದ್ದೇಶಿಸಿದೆ. ಅದಕ್ಕೆ ಅನುಮತಿ ನೀಡುವಂತೆ ಪತ್ರ ಬರೆದಿದ್ದು, ಅದನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿಲ್ಲ.

ಮರಗಳಿಗೆ ಮಾರ್ಕ್: ರಸ್ತೆ ಅಗಲೀಕರಣಕ್ಕಾಗಿ ತೆರವು ಮಾಡಬೇಕಾದ ಮರಗಳಿಗೆ ಲೋಕೋಪಯೋಗಿ ಇಲಾಖೆಯೇ ಗುರುತು ಮಾಡಿದೆ. ರಸ್ತೆ ಎರಡೂ ಬದಿಯಲ್ಲಿ ಕಳೆದ 3–4 ದಶಕಗಳ ಆಲ, ಅರಳಿ, ಹುಣಸೆ, ಬಸುರಿ, ಹಿಪ್ಪೆ, ಆಕಾಶ ಮಲ್ಲಿಗೆ, ಕಾಪರ್ ಪಾಡ್, ಛತ್ರಿ ಮರ ಸೇರಿದಂತೆ ಇನ್ನಿತರ ಪ್ರಭೇಧದ 150ಕ್ಕೂ ಹೆಚ್ಚು ಮರಗಳಿವೆ. ಅವುಗಳಲ್ಲಿ 125 ಮರಗಳಿಗೆ ಕೆಂಪು ಬಣ್ಣದಲ್ಲಿ ಮಾರ್ಕ್ ಮಾಡಲಾಗಿದೆ. ಎರಡೂ ಬದಿಯಲ್ಲಿ ಬೆಳೆದಿರುವ ಮರಗಳು ರಸ್ತೆಗೆ ಹಸಿರು ಚಪ್ಪರದಂತೆ ಭಾಸವಾಗಿ, ತಂಪಾದ ವಾತಾವರಣ ಕಲ್ಪಿಸಿವೆ. ಆದರೂ, ಮರಗಳ ತೆರವಿನ ನಿರ್ದಯಿ ಧೋರಣೆಗೆ ಪಿಡಬ್ಲ್ಯುಡಿ ಮುಂದಾಗಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ವಾಹನ ದಟ್ಟಣೆ ನೆಪ: ಇತ್ತೀಚಿನ ದಿನಗಳಲ್ಲಿ ಮಾನಂದವಾಡಿ ರಸ್ತೆಯಲ್ಲಿ ವಿವಿಧ ಖಾಸಗಿ ಬಡಾವಣೆಗಳು ಅಭಿವೃದ್ಧಿಯಾಗಿದ್ದು, ಭಾರಿ ಪ್ರಮಾಣದಲ್ಲಿ ಮನೆಗಳು ತಲೆಎತ್ತಲಾರಂಭಿಸಿವೆ. ಅಲ್ಲದೆ, ಕೇರಳ ಹಾಗೂ ಹೆಚ್.ಡಿ.ಕೋಟೆ, ಸರಗೂರು, ದಕ್ಷಿಣ ಕೊಡಗಿನ ಭಾಗದಿಂದ ಮೈಸೂರಿಗೆ ಬರುವ ವಾಹನಗಳು ಮಾನಂದವಾಡಿ ರಸ್ತೆಯನ್ನೇ ಅವಲಂಬಿಸಿರುವುದರಿಂದ ಈ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದೆ. ಅಲ್ಲದೆ, ಕಿರಿದಾದ ರಸ್ತೆಯಲ್ಲಿ ಸಣ್ಣಪುಟ್ಟ ಅಪಘಾತಗಳಾಗುತ್ತಿವೆ. ಇದನ್ನೆ ಮುಂದಿಟ್ಟುಕೊಂಡು ರಸ್ತೆ ಅಗಲೀಕರಣಕ್ಕೆ ಪಿಡಬ್ಲ್ಯುಡಿ ಮುಂದಾಗಿದೆ. ಅದಕ್ಕಾಗಿ ಮರಗಳ ತೆರವು ಅನಿವಾರ್ಯ ಎಂದು ಅರಣ್ಯ ಇಲಾಖೆಗೆ ಸಲ್ಲಿಸಿರುವ ಮನವಿಯಲ್ಲಿ ಪ್ರಸ್ತಾಪಿಸಿದೆ.

ಲೆಟರ್ ವಾಪಸ್: ಮರಗಳ ತೆರವಿಗಾಗಿ ಪಿಡಬ್ಲ್ಯುಡಿ ಸಲ್ಲಿಸಿದ ಒಂದು ಪತ್ರವನ್ನು ಆರ್‌ಎಫ್‌ಓ ಹಂತದಲ್ಲಿ ಪರಿಶೀಲನೆ ನಡೆಸಲಾಗಿದ್ದು, ಯಾವುದೇ ಪೂರಕ ದಾಖಲೆ ಸಲ್ಲಿಸದ ಕಾರಣ ಅರಣ್ಯ ಇಲಾಖೆಯ ಯಾವುದೇ ಪ್ರತಿಕ್ರಿಯೆ ನೀಡದೆ ಪತ್ರವನ್ನು ಪಿಡಬ್ಲ್ಯುಡಿಗೆ ವಾಪಸ್ ಕಳುಹಿಸಿದೆ.

ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ: 50ಕ್ಕಿಂತ ಹೆಚ್ಚು ಮರ ಕಡಿಯಬೇಕಾದರೆ ಸಾರ್ವಜನಿಕ ಅಭಿಪ್ರಾಯ ಪಡೆದುಕೊಳ್ಳುವ ನಿಯಮವಿದೆ. ಈ ಹಿನ್ನೆಲೆಯಲ್ಲಿ ಮಾನಂದವಾಡಿ ರಸ್ತೆಯ ಮರಗಳಿಗೆ ಸಂಬಂಧಿಸಿದಂತೆ ಯಾವುದೇ ನಿಲುವು ತಾಳುವ ಮುನ್ನ ಸಾರ್ವಜನಿಕರ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸುವಂತೆ ಪರಿಸರವಾದಿಗಳು ಆಗ್ರಹಿಸಿದ್ದಾರೆ. ಸಭೆ ಕರೆಯುವ ಸಂಬಂಧ ಸಾರ್ವಜನಿಕ ಪ್ರಕಟಣೆ ಹೊರಡಿಸಬೇಕು. ನಾಮಕಾವಸ್ಥೆಗೆ ಸಭೆ ಮಾಡಿ, ಕಣ್ಣೊರೆಸುವ ತಂತ್ರಗಾರಿಕೆ ಮಾಡದಂತೆ ಆಗ್ರಹಿಸಿದ್ದಾರೆ.

ಒತ್ತಡಕ್ಕೆ ಮಣಿಯಬಾರದು: ಮಾನಂದವಾಡಿ ರಸ್ತೆಯ ಅಗಲೀಕರಣದ ನೆಪದಲ್ಲಿ ಮರಗಳ ಬುಡಕ್ಕೆ ಕೊಡಲಿ ಹಾಕಲು ಅನುಮತಿ ಕೊಡಿಸುವಂತೆ ರಾಜಕಾರಣಿಗಳಿಂದ ಅರಣ್ಯ ಇಲಾಖೆ ಮೇಲೆ ಒತ್ತಡ ತರುವ ತಂತ್ರಗಾರಿಕೆಯೂ ನಡೆಯುತ್ತದೆ. ಅದಕ್ಕಾಗಿ ಆ ರಸ್ತೆಯಲ್ಲಿ ಸಂಚರಿಸುವ ಕೆಲವರನ್ನು ಪುಸಲಾಯಿಸಿ ರಸ್ತೆ ಅಗಲೀಕರಣ ಮಾಡುವಂತೆ ಒತ್ತಾಯ ಮಾಡಿಸಬಹುದಾಗಿದೆ. ಇಂತಹ ಒತ್ತಡಕ್ಕೆ ಅರಣ್ಯ ಇಲಾಖೆ ಮಣಿಯಬಾರದು ಎಂದು ಪರಿಸರವಾದಿಗಳು ಒತ್ತಾಯಿಸಿದ್ದಾರೆ.





ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ರಸ್ತೆ ಅಗಲೀಕರಣಕ್ಕೆ 125 ಮರಗಳ ತೆರವಿಗೆ ಗುರುತು ಮಾಡಿರುವುದು. ಮತ್ತೊಂದು ಚಿತ್ರದಲ್ಲಿ ಮಾನಂದವಾಡಿ ರಸ್ತೆಯಲ್ಲಿ ಹಸಿರು ಚಪ್ಪರದ ಹೊದಿಕೆ ನಿರ್ಮಿಸಿರುವ ಸಾಲು ಮರಗಳು.

ಪ್ರಸ್ತಾಪ ಬಂದರೂ ಅರಣ್ಯ ಇಲಾಖೆ ಅನುಮತಿ ನೀಡಿಲ್ಲ

ಮೈಸೂರು,ಏ.19(ಎಂಟಿವೈ)– ಮೈಸೂರು–ಮಾನಂದವಾಡಿ ರಸ್ತೆ, ದಟ್ಟಗಳ್ಳಿ ಹಾಗೂ ಉತ್ತನಹಳ್ಳಿ ರಸ್ತೆಯಲ್ಲಿ ಮರ ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿಲ್ಲ ಎಂದು ಡಿಸಿಎಫ್ ಡಾ.ಕೆ.ಎನ್.ಬಸವರಾಜ್ ಸ್ಪಷ್ಟಪಡಿಸಿದ್ದಾರೆ.

ರಸ್ತೆ ಅಗಲೀಕರಣ ಹಾಗೂ ಹೈಟೆನ್ಷನ್ ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ರಸ್ತೆ ಬದಿಯಲ್ಲಿರುವ ಮರಗಳನ್ನು ತೆರವು ಮಾಡಲು ಗುರುತಿಸಿರುವುದಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ರಿಂಗ್ ರಸ್ತೆಯ ಜಂಕ್ಷನ್‌ನಿಂದ ಉದ್ಬೂರ್ ಗೇಟ್‌ವರೆಗೂ ಮಾನಂದವಾಡಿ ರಸ್ತೆ ಅಗಲೀಕರಣಕ್ಕಾಗಿ ಲೋಕೋಪಯೋಗಿ ಇಲಾಖೆ ಮನವಿ ಸಲ್ಲಿಸಿದೆ. ಅದು ಇನ್ನು ಆರ್‌ಎಫ್‌ಓ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಮೈಸೂರಿನ ದಟ್ಟಗಳ್ಳಿಯ ಕೆಪಿಟಿಸಿಎಲ್ ವಿದ್ಯುತ್ ಸರಬರಾಜು ಘಟಕದಿಂದ ಹೊಸದಾಗಿ ಹೈಟೆನ್ಷನ್ ಲೈನ್ ಅಳವಡಿಕೆಗಾಗಿ ಕೆಪಿಟಿಸಿಎಲ್ 175 ಮರಗಳ ತೆರವಿಗೆ ಗುರುತು ಮಾಡಿ, ಅನುಮತಿ ನೀಡುವಂತೆ ಅರಣ್ಯ ಇಲಾಖೆಗೆ ಮನವಿ ಮಾಡಿದೆ. ಅದು ಸಹ ಇನ್ನು ಪರಿಶೀಲನೆ ಹಂತದಲ್ಲಿದೆ. ಕೆಪಿಟಿಸಿಎಲ್ ನೀಡಿದ ಅರ್ಜಿಯನ್ನು ಆರ್‌ಎಫ್‌ಓ ಮೊದಲು ಪರಿಶೀಲಿಸುತ್ತಾರೆ. ನಂತರ ಸ್ಥಳ ಪರಿಶೀಲನೆ ಮಾಡಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಿದ್ದಾರೆ. ಆ ಬಳಿಕವೂ ಗುರುತಿಸಲ್ಪಟ್ಟ ಮರಗಳನ್ನು ಪರಿಶೀಲಿಸಲಾಗುತ್ತದೆ. ಕೆಪಿಟಿಸಿಎಲ್ ಗುರುತಿಸಿರುವ ಎಲ್ಲಾ ಮರಗಳನ್ನು ತೆರವು ಮಾಡಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಉತ್ತನಹಳ್ಳಿಯ ದೇವಾಲಯದ ರಸ್ತೆ ಅಗಲೀಕರಣಕ್ಕೆ ಕೆಲ ಮರ ತೆರವು ಮಾಡುವಂತೆ ಅರ್ಜಿ ಸಲ್ಲಿಕೆಯಾಗಿದ್ದು, ಇನ್ನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಮೈಸೂರು ಮಿತ್ರ ಭಾನುವಾರ 20 ಏಪ್ರಿಲ್ 2025

ಸಿಎನ್‌ಸಿಯಿಂದ ಹಿರಿಯರಿಗೆ ಪುಷ್ಪ ನಮನ



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವ ನರಮೇಧದ ದೇವಟ್ ಪರಂಬು ಸ್ಮಾರಕ ಸ್ಥಳದಲ್ಲಿ ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿತು.

ಮಡಿಕೇರಿ,ಏ.19–ಕೊಡವ ಹೊಸ ವರ್ಷಾಚರಣೆ ಎಡ್ಮ್ಯಾರ್ ಒಂದ್‌ರ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವ ನರಮೇಧದ ದೇವಟ್ ಪರಂಬು ಸ್ಮಾರಕ ಸ್ಥಳದಲ್ಲಿ ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿತು.

ಟಿಪ್ಪುವಿನ ಆಕ್ರಮಣಗಳಿಂದ ಕೊಡವ ವೀರ ಯೋಧರು ರಾಜ್ಯವನ್ನು 32ಕ್ಕೂ ಹೆಚ್ಚು ಬಾರಿ ರಕ್ಷಿಸಿದರು. ತನ್ನ ಪುನರಾವರ್ತಿತ ಸೋಲುಗಳಿಗೆ ಸೇಡು ತೀರಿಸಿಕೊಳ್ಳುವ ಪ್ರಯತ್ನವಾಗಿ ಟಿಪ್ಪು ಶಾಂತಿಸಭೆಯ ಸಂಚು ಹೂಡಿ ಕೊಡವರ ನಾಶಕ್ಕೆ ಕಾರಣನಾದನು. ಇಂದು ಉಳಿದಿರುವ ಕೊಡವ ಜನಾಂಗದ ಸಮಗ್ರ ಸಬಲೀಕರಣಕ್ಕೆ ಮತ್ತು ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆಯನ್ನು ಪಡೆಯಲು ಹಿರಿಯರ ಆಶೀರ್ವಾದ ಪಡೆಯಲಾಯಿತು ದೇವಟ್ ಪರಂಬುವಿನಲ್ಲಿ ಅಂತರರಾಷ್ಟ್ರೀಯ ಕೊಡವ ನರಮೇಧದ ಸ್ಮಾರಕವನ್ನು ಸ್ಥಾಪಿಸಬೇಕೆಂದು ಸಿಎನ್‌ಸಿ ಅಧ್ಯಕ್ಷ ನಾಚಪ್ಪ ಒತ್ತಾಯಿಸಿದರು

ಕೊಡವ ನರಮೇಧದ ದೇವಟ್ ಪರಂಬುವಿನಲ್ಲಿ ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ಸ್ಮಾರಕಗಳನ್ನು ಸ್ಥಾಪಿಸಬೇಕು. ದೇವಟ್ ಪರಂಬು, ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ನಡೆದ ಕೊಡವ ಜನಾಂಗೀಯ ಸಮುದಾಯದ ಸದಸ್ಯರ ರಾಜಕೀಯ ಹತ್ಯೆಗಳನ್ನು ಅಂತರಾಷ್ಟ್ರೀಯ ಸ್ಮರಣೆಯ ಪಟ್ಟಿಯಲ್ಲಿ ಸೇರಿಸಬೇಕು ಎಂದು ಆಗ್ರಹಿಸಿದರು.

ಕಲಿಯಂಡ ಧನ್ವಿ, ಕಲಿಯಂಡ ವಿಹಾನ, ಹಿರಿಯರಾದ ಕಲಿಯಂಡ ಪ್ರಕಾಶ್, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಪುಟ್ಟಿಚಂಡ ಡಾನ್, ಮುಕ್ಕಾಟಿರ ಅಶ್ವತ್ಥ್, ಕಲಿಯಂಡ ತಿಮ್ಮಯ್ಯ ಮೊದಲಾದವರು ಪುಷ್ಪನಮನ ಸಲ್ಲಿಸಿದರು.


ಮುದ್ದಂಡ ಕಪ್ ಹಾಕಿ ಉತ್ಸವ; ಹಲವು ತಂಡಗಳ ಮುನ್ನಡೆ



ಮೇಚಿಯಂಡ–ಮಾದಂಡ ತಂಡದ ನಡುವಿನ ಹಣಾಹಣಿ.

ಮಡಿಕೇರಿ: ಮುದ್ದಂಡ ಕಪ್ ಹಾಕಿ ಉತ್ಸವದ ಏ.19ರಂದು ನಡೆದ ಪಂದ್ಯಾವಳಿಯಲ್ಲಿ ಚೆಪ್ಪುಡಿರ, ಮೇಚಿಯಂಡ, ಬೊಟ್ಟೋಳಂಡ, ಕೊಂಗೇಟಿರ, ನಾಳಿಯಂಡ, ನೆಲ್ಲಮಕ್ಕಡ, ಕೋಳೇರ, ಪರದಂಡ, ಕರವಂಡ, ಕಂಬೀರಂಡ, ಇಟ್ಟೀರ, ಕಾಂಡಂಡ, ಕುಪ್ಪಂಡ(ಕೈಕೇರಿ) ತಂಡಗಳು ಜಯ ಸಾಧಿಸಿ ಮುಂದಿನ ಹಂತ ಪ್ರವೇಶಿಸಿವೆ.

ಬಿರುನಾಣಿ ವ್ಯಾಪ್ತಿ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭ



ಹುಲಿ ಸೆರೆ ಆಗಮಿಸಿರುವ ಎರಡು ಸಾಕಾನೆಗಳ ಕಾರ್ಯಾಚರಣೆ.

ಗೋಣಿಕೊಪ್ಪ,ಏ.19–ಬಿರುನಾಣಿ ಗ್ರಾಮ ಪಂಚಾಯತಿ ವ್ಯಾಪ್ತಿಯ ತೆರಾಲು ಗ್ರಾಮದಲ್ಲಿ ಬಲಿ ಪಡೆಯುತ್ತಿರುವ ಹುಲಿ ಸೆರೆಗೆ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯರ ಮೇಲ್ವಿಚಾರಣೆಯಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ.


ಅರಣ್ಯ ಇಲಾಖೆಯ ಕ್ಷಿಪ್ರ ಕಾರ್ಯಪಡೆ (ಆರ್‌ಆರ್‌ಎಫ್) ಕಾಡಾನೆ ಕಾರ್ಯಪಡೆ (ಇಟಿಎಫ್) ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸೇರಿ 60ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ.

ಮೊದಲ ಹಂತದ ಕಾರ್ಯಾಚರಣೆಯಲ್ಲಿ ಹುಲಿಯ ಇರುವಿಕೆಯನ್ನು ಪತ್ತೆಹಚ್ಚುವುದಕ್ಕಾಗಿ ಹುಲಿಯ ಹೆಜ್ಜೆ ಗುರುತಿನ ಜಾಡನ್ನು ಹಿಡಿಯಲು ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ. ಸ್ಥಳೀಯ ಕಾರ್ಮಿಕರು 2 ದಿನಗಳ ಹಿಂದೆ ಒಂದು ದೊಡ್ಡ ಹುಲಿ ಹಾಗೂ ಅದರೊಂದಿಗೆ 3 ಮರಿಗಳು ಇರುವುದನ್ನು ಪ್ರತ್ಯಕ್ಷವಾಗಿ ಕಂಡಿರುವುದಾಗಿ ಕಾರ್ಯಾಚರಣೆ ತಂಡಕ್ಕೆ ನೇರವಾಗಿ ಮಾಹಿತಿ ನೀಡಿದರು. ಇದಲ್ಲದೆ ತೆರಾಲು ಗ್ರಾಮದಲ್ಲಿರುವ ದಿವಂಗತ ಅನಿಲ್ ಮಲ್ಹೋತ್ರ ಎಂಬವರ ಖಾಸಗಿ ಜಾಗದಲ್ಲಿ ಹುಲಿ ಇರುವ ಬಗ್ಗೆ ಶಂಕೆ ವ್ಯಕ್ತವಾಗಿದ್ದು, ಅವರ ಜಾಗದೊಳಗೆ ಕಾರ್ಯಾಚರಣೆ ಕೈಗೊಳ್ಳಲು ನಿರ್ಧರಿಸಲಾಗಿದೆ.

ಸುಮಾರು 300 ಎಕರೆ ಖಾಸಗಿ ಜಾಗದ ಕಾಡಿನಲ್ಲಿ ಹುಲಿ ಇರುವ ಶಂಕೆಯಿದ್ದು, ಇದೆ. ಈ ವ್ಯಾಪ್ತಿಯಲ್ಲಿ ಹುಲಿಯ ಚಲನವಲನ ಹಾಗೂ ಹೆಜ್ಜೆ ಗುರುತು ಸಿಕ್ಕಿದೆ. ಇದನ್ನು ಆಧರಿಸಿ ಹುಲಿ ಸೆರೆ ಕಾರ್ಯಚರಣೆ ಕೈಗೊತ್ತಿಕೊಳ್ಳಲಾಗಿದ್ದು, ಕಾರ್ಯಾಚರಣೆ ಯಶಸ್ವಿಯಾಗಲಿದೆ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಚರಣೆಯಲ್ಲಿ ಭಾಗವಹಿಸಿರುವ ಮಡಿಕೇರಿ ಇಲಾಖೆಯ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ನೆಹರು ಬಿರುನಾಣಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಆಮ್ಮತ್ತಿರ ರಾಜೇಶ್, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಟಿ.ಶೆಟ್ಟಿಗೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ತೀತಿರ ಪ್ರಭು, ಸ್ಥಳೀಯ ಪ್ರಮುಖರಾದ ಅಪ್ಪಚಂಗಡ ಮೋಟಯ್ಯ, ಮಚ್ಚಮಾಡ ರಂಜಿ ಹಾಗೂ ಶ್ರೀಮಂಗಲ ವಲಯ ಅರಣ್ಯಾಧಿಕಾರಿ ಸಂತೋಷ್ ಹೂಗಾರ್, ಉಪ ಅರಣ್ಯಾಧಿಕಾರಿ ಶ್ರೀಶೈಲಾ, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಚರಂಡಿಗೆ ಉರುಳಿದ ಟಿಪ್ಪರ್



ನಾಪೋಕ್ಲು:ಟಿಪ್ಪರ್ ಚರಂಡಿಗೆ ಬಿದ್ದು ಅಪಘಾತ ಸಂಭವಿಸಿದರೂ ಚಾಲಕ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಜರುಗಿದೆ. ಬಲಮುರಿ ಕಡೆಯಿಂದ ಮೂರ್ನಾಡು ಕಡೆಗೆ ತೆರಳುತ್ತಿದ್ದ ಟಿಪ್ಪರ್ ಚಾಲಕ ಕಾರಿಗೆ ಸೈಡ್ ಕೊಡಲೆತ್ನಿಸಿದಾಗ ರಸ್ತೆ ಬದಿಗೆ ಸರಿದು ಚರಂಡಿಗೆ ಬಿದ್ದಿದೆ.

ರಸ್ತೆಯ ಬದಿಯೇ ವಿಪರೀತ ಗಿಡಗಳು ಬೆಳೆದು ರಸ್ತೆಗೆ ಆವರಿಸಿರುವುದೇ ಅಪಘಾತಕ್ಕೆ ಕಾರಣವೆಂದು ಸಾರ್ವಜನಿಕರು ಆರೋಪಿಸಿದ್ದಾರೆ. ಸಂಬಂಧಿಸಿದವರು ಕೂಡಲೇ ತೆರವುಗೊಳಿಸುವಂತೆ ಒತ್ತಾಯಿಸಿದ್ದಾರೆ.

ವಿರಾಜಪೇಟೆಯಲ್ಲಿ ಯಶಸ್ವಿ ಮಕ್ಕಳ ಬೇಸಿಗೆ ಶಿಬಿರ



ವಿರಾಜಪೇಟೆ,ಏ.19–ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವಿರಾಜಪೇಟೆ ಸೇವಾ ಕೇಂದ್ರದ ವತಿಯಿಂದ ಮೂರು ದಿನಗಳ ಬೇಸಿಗೆ ಶಿಬಿರವು ಯಶಸ್ವಿಯಾಗಿ ನಡೆದು ಮಕ್ಕಳಲ್ಲಿ ಉತ್ಸಾಹ–ಉಲ್ಲಾಸ ತಂದಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿರಾಜಪೇಟೆಯ ವಕೀಲರಾದ ಶೃಂಗ ಸೋಮಣ್ಣ, ಧ್ಯಾನದ ಮಹತ್ವಿಕೆಯನ್ನು ತಿಳಿಸಿ ಅದರ ಅಭ್ಯಾಸ ಮಾಡಿಸಿದರು. ಗೋಣಿಕೊಪ್ಪ ಕೂರ್ಗ್ ಪಬ್ಲಿಕ್ ಸ್ಕೂಲ್‌ನ ಆಪ್ತ ಸಮಾಲೋಚಕಿ ಮುತ್ತಮ್ಮ ಮಕ್ಕಳಿಗೆ ಸ್ವಯಂ ರಕ್ಷಣೆ ಹೇಗೆ ಮಾಡಿಕೊಳ್ಳಬೇಕು ಮತ್ತು ಆತ್ಮವಿಶ್ವಾಸದ ಬಗ್ಗೆ ತಿಳುವಳಿಕೆ ಕೊಟ್ಟರು. ಚಿತ್ರ ಕಲೆಯಲ್ಲಿ ತಾವೇ ಮಂಡಲದ ಚಿತ್ರಗಳನ್ನು ತಂದು ಬಣ್ಣ ಹಚ್ಚುವುದನ್ನು ತಿಳಿಸಿಕೊಟ್ಟರು.

ಸತ್ಯತೆ ಇದ್ದಲ್ಲಿ ಸ್ವಚ್ಛತೆ ಇರುವುದು. ನಿಮ್ಮ ಮನಸ್ಸು ಸ್ವಚ್ಛವಾಗಿ ಇದ್ದರೆ ನಿಮ್ಮ ಕೆಲಸವೂ ಸ್ವಚ್ಛವಾಗಿ ಇರುವುದು. ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡರೆ ನಿಮಗೂ ಹಾಗೂ ಸಮಾಜಕ್ಕೂ ಆರೋಗ್ಯ ಎಂದು ಕೇಂದ್ರದ ಮುಖ್ಯ ಸಂಚಾಲಕಿ ಬಿ.ಕೆ. ಕೋಮಲ ಕಿವಿಮಾತು ಹೇಳಿದರು.

ಬ್ರಹ್ಮಾಕುಮಾರಿ ಶಿವಾನಿ ಮತ್ತು ಅದ್ವಿತೀಯ ವಿದ್ಯಾರ್ಥಿನಿಯರು ಶಿಬಿರದಲ್ಲಿ ನಿತ್ಯ ಪ್ರಾರ್ಥನೆ, ವ್ಯಾಯಾಮ, ಆಟೋಟ, ಹಾಡು, ನೃತ್ಯ ಮಾಡಿಸುವುದರ ಮೂಲಕ ಮಕ್ಕಳನ್ನು ಮನ ರಂಜಿಸಿದರು. ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಿಇಟಿ : ಜನಿವಾರ ತೆಗೆಸಿದ ಘಟನೆ ಖಂಡಿಸಿ ಬ್ರಾಹ್ಮಣ ಸಮಾಜ ಪ್ರತಿಭಟನೆ



ಕುಶಾಲನಗರ: ಸಿ.ಇ.ಟಿ ಪರೀಕ್ಷೆ ಬರೆಯಲು ಜನಿವಾರ ತೆಗೆದು ಬರಲು ತಿಳಿಸಿದ ಪ್ರಕರಣ ಖಂಡಿಸಿ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ ಪ್ರತಿಭಟನೆ ನಡೆಸಿತು.

ಪಟ್ಟಣದ ಗಣಪತಿ ದೇವಾಲಯ ಮುಂಭಾಗ ಪ್ರತಿಭಟಿಸಿದ ಸಮಾಜ ಬಾಂಧವರು, ಬೀದರ್ ಹಾಗೂ ಶಿವಮೊಗ್ಗದಲ್ಲಿ ನಡೆದಿರುವ ಘಟನೆ ಅಮಾನವೀಯ ಎಂದು ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಪರೀಕ್ಷಾ ಕೇಂದ್ರಕ್ಕೆ ಜನಿವಾರ ತೆಗೆದು ಒಳಬರಲು ವಿದ್ಯಾರ್ಥಿಗಳಿಗೆ ತಿಳಿಸಿದಲ್ಲದೆ ಮನಸ್ಸಿಗೆ ಆಘಾತವಾಗುವಂತೆ ಮಾತನಾಡುವ ಮೂಲಕ ಹಿಂದೂ ಧರ್ಮೀಯರ ನಂಬಿಕೆಗೆ ಅಪಮಾನ ಮಾಡಿದ್ದಾರೆ ಎಂದು ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್. ರಾಜಶೇಖರ್ ಆಪಾದಿಸಿದರು.

ಏ.26ರಂದು ರಾಜ್ಯಾದ್ಯಂತ ಈಡುಗಾಯಿ ಹೊಡೆಯುವ ಚಳುವಳಿ



ಈಡುಗಾಯಿಗಳನ್ನು ಒಡೆಯುವುದಾಗಿ ಕಾಯಿ ಹಿಡಿದು ತೋರಿಸುತ್ತಿರುವ ವಾಟಾಳ್ ನಾಗರಾಜ್

ಮಂಡ್ಯ,ಏ.19– ರಾಜ್ಯದಲ್ಲಿ ಪರಭಾಷಿಕರಿಂದ ಆಗುತ್ತಿರುವ ಅಪರಾಧ ಚಟುವಟಿಕೆಗಳು, ಕನ್ನಡಿಗರಿಗೆ ಉದ್ಯೋಗ ಕೊರತೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏ.26ರಂದು ರಾಜ್ಯಾದ್ಯಂತ ಈಡುಗಾಯಿ ಹೊಡೆಯುವ ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಪರ ಹೋರಾಟಗಾರ ಹಾಗೂ ಮಾಜಿ ಶಾಸಕ ವಾಟಾಳ್ ನಾಗರಾಜ್ ತಿಳಿಸಿದರು.

ಪತ್ರಕರ್ತರ ಭವನದ ಮುಂದೆ ಈಡುಗಾಯಿಗಳನ್ನು ತೋರಿಸುವ ಮೂಲಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ ದಿನ ಕನ್ನಡಿಗರು ಸರ್ಕಾರಿ ಕಚೇರಿ ಮುಂದೆ, ಮನೆಗಳಲ್ಲಿ, ರಸ್ತೆಗಳಲ್ಲಿ ಎಲ್ಲಿಯಾದರೂ ಸರಿಯೇ ಈಡುಗಾಯಿ ಹೊಡೆಯುವ ನಮ್ಮ ಹೋರಾಟವನ್ನು ಬೆಂಬಲಿಸಬೇಕು. ರಾಜ್ಯದಲ್ಲಿ ಆರೂವರೆ ಕೋಟಿ ಕನ್ನಡಿಗರಿದ್ದು, ಕನಿಷ್ಠ 2 ಕೋಟಿ ಜನರು ನಮ್ಮ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಎಂಇಎಸ್ ಪುಂಡಾಟಿಕೆ, ಉತ್ತರ ಕರ್ನಾಟಕ ಅಭಿವೃದ್ಧಿ, ಪರಭಾಷಿಕರ ದಬ್ಬಾಳಿಕೆ, ಪರಭಾಷೆ ಚಿತ್ರಗಳ ಬಹಿಷ್ಕಾರ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ, ಬಜೆಟ್‌ನಲ್ಲಿ ರಾಜ್ಯದ ಕಡೆಗಣನೆ ಸೇರಿದಂತೆ ಎಲ್ಲವನ್ನೂ ಖಂಡಿಸಿ ಹೋರಾಟಕ್ಕೆ ಕರೆ ನೀಡಲಾಗಿದೆ ಎಂದರು.

ಗಡಿ ನಾಡು ಪ್ರದೇಶಗಳಾದ ಕಾಸರಗೋಡು, ಹೊಸೂರು, ತಾಳವಾಡಿ, ಮಡಕಶಿರಾ, ಕೊಲ್ಲಾಪುರ ಈ ಪ್ರದೇಶಗಳು ಹೊರ ರಾಜ್ಯದಲ್ಲಿದ್ದರೂ ಹೆಚ್ಚಿನ ಕನ್ನಡಿಗರನ್ನು ಹೊಂದಿದ್ದು, ಆದರೆ ಕನ್ನಡಿಗರ ಮೇಲೆ ಅಲ್ಲಿನ ಸರ್ಕಾರಗಳು ದಬ್ಬಾಳಿಕೆ ಮಾಡುತ್ತಿವೆ. ರಾಜ್ಯ ಸರ್ಕಾರ ಕೂಡಲೇ ಮಂತ್ರಿಯೊಬ್ಬರನ್ನು ಕಳುಹಿಸಿ ಗಂಭೀರ ಪರಿಸ್ಥಿತಿಯಲ್ಲಿರುವ ಕನ್ನಡಿಗರ ರಕ್ಷಣೆಗೆ ಮುಂದಾಗಬೇಕು. ಅಲ್ಲಿನ ಕನ್ನಡ ಶಾಲೆಗಳನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ಬೆಳಗಾವಿಯಲ್ಲಿ ಎಂಇಎಸ್ ಉಪಟಳ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಲ್ಲಿನ ಮೂರು ಪಕ್ಷದ ರಾಜಕಾರಣಿಗಳಿಗೆ ಮರಾಠಿಗರ ಮೇಲಿನ ವ್ಯಾಮೋಹ ಹೆಚ್ಚಿದೆ. ಬೆಳಗಾವಿಯಲ್ಲಿ ಕನ್ನಡಪರ ಹೋರಾಟಗಾರರಿರುವ ಬದ್ಧತೆ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಮುಖಂಡರಿಗಿಲ್ಲ ಎಂದು ಕಿಡಿಕಾರಿದರು.

ಗೋಷ್ಠಿಯಲ್ಲಿ ಕನ್ನಡ ಸೇನೆ ಜಿಲ್ಲಾಧ್ಯಕ್ಷ ಎಚ್.ಸಿ.ಮಂಜುನಾಥ್, ಬೆಟ್ಟಹಳ್ಳಿ ಮಂಜುನಾಥ್ ಇದ್ದರು.

ವೃದ್ಧ ದಂಪತಿಗಳ ತೋಟದ ಮನೆಯಲ್ಲಿ ಚಿನ್ನಾಭರಣ ದೋಚಿ ಪರಾರಿ

ಕಿಕ್ಕೇರಿ: ಹೋಬಳಿಯ ಐಕನಹಳ್ಳಿ ಗ್ರಾಮದ ಹೊರವಲಯದ ತೋಟದ ಮನೆಗೆ ದುಷ್ಕರ್ಮಿಗಳು ನುಗ್ಗಿ ಒಡವೆ ದೋಚಿ ಪರಾರಿಯಾಗಿರುವ ಪ್ರಕರಣ ಗುರುವಾರ ಜರುಗಿದೆ.

ತೋಟದ ಮನೆಯಲ್ಲಿ ವೃದ್ಧ ದಂಪತಿಗಳಾದ ರಾಮೇಗೌಡ, ನಿಂಗಮ್ಮ ವಾಸವಾಗಿದ್ದರು. ಗುರುವಾರ ಮನೆಗೆ ನುಗ್ಗಿದ ದುಷ್ಕರ್ಮಿಗಳು ವೃದ್ಧ ದಂಪತಿಗಳ ಮೇಲೆ ಹಲ್ಲೆ ನಡೆಸಿ, ಬೆದರಿಸಿ ನಿಂಗಮ್ಮ ಕೊರಳಿನಲ್ಲಿದ್ದ 80ಗ್ರಾಂ.ನಷ್ಟು ಚಿನ್ನದ ಮಾಂಗಲ್ಯ ಸರ, ಓಲೆ, ಬಳೆ ಕಸಿದುಕೊಂಡು ಪರಾರಿಯಾಗಿದ್ದಾರೆ. ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಿಗರೇಟ್ ಬಂಡಲ್ ಕಳವು

ಕಿಕ್ಕೇರಿ: ಇಲ್ಲಿನ ರಾಜ್ಯ ಹೆದ್ದಾರಿಯಲ್ಲಿರುವ ಜೇಟುಸಿಂಗ್ ಚಿಲ್ಲರೆ ಅಂಗಡಿಯಲ್ಲಿ ದುಷ್ಕರ್ಮಿಯೊಬ್ಬ ಸಿಗರೇಟು ಪ್ಯಾಕ್‌ಗಳಿದ್ದ ಬಂಡಲ್ ಅನ್ನು ಹಾಡುಹಗಲಿನಲ್ಲಿ ಕಳವು ಮಾಡಿರುವ ಪ್ರಕರಣ ಜರುಗಿದೆ.

ಶುಕ್ರವಾರ ಅಂಗಡಿ ಮಾಲೀಕ ಜೇಟುಸಿಂಗ್ ತಮ್ಮ ಅಂಗಡಿಗೆ ಸಿಗರೇಟ್ ಬಂಡಲ್‌ಗಳನ್ನು ಇಳಿಸಿಕೊಳ್ಳುತ್ತಿದ್ದರು. ಶುಕ್ರವಾರ ಸಂತೆಯಾಗಿದ್ದ ಸಲುವಾಗಿ ಬೆಳಗಿನ ವೇಳೆ ವ್ಯಾಪಾರ ಹೆಚ್ಚಿತ್ತು. ಈ ವೇಳೆಯಲ್ಲಿ ದುಷ್ಕರ್ಮಿ ವಿಜಿ ಎನ್ನುವ ವ್ಯಕ್ತಿ ತಮ್ಮ ಅಂಗಡಿಯ ಸಿಗರೇಟು ಬಂಡಲ್ ಕಳವು ಮಾಡಿದ್ದಾನೆ ಎಂದು ಕಿಕ್ಕೇರಿ ಪೊಲೀಸರಿಗೆ ದೂರು ನೀಡಲಾಗಿದೆ. ಪ್ರಕರಣವನ್ನು ಕಿಕ್ಕೇರಿ ಪೊಲೀಸರು ದಾಖಲಿಸಿಕೊಂಡು ತನಿಖಾ ಕ್ರಮ ಕೈಗೊಂಡಿದ್ದಾರೆ.

ಬಡವರ ಬದಲು ಶ್ರೀಮಂತರ ಮೇಲೆ ಶೇ.40ರಿಂದ 50ರಷ್ಟು ತೆರಿಗೆ ಹಾಕಿ

ಹೋರಾಟಗಾರ, ಚಿತ್ರನಟ ಚೇತನ್ ಆಗ್ರಹ



ಪಾಂಡವಪುರ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮೆಮೋರಿಯಲ್ ಎಜುಕೇಷನ್ ಅಸೋಸಿಯೇಷನ್, ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆದ 'ಅಂಬೇಡ್ಕರ್ ಹಬ್ಬ–2025' ಸಮಾರಂಭವನ್ನು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಪಾಂಡವಪುರ: ಸರ್ಕಾರದ ಬೊಕ್ಕಸ ಹೆಚ್ಚಿಸುವುದಕ್ಕೆ ಜನಸಾಮಾನ್ಯರ ಮೇಲೆ ತೆರಿಗೆ ಹಾಕುವ ಬದಲು ಶ್ರೀಮಂತರ ಮೇಲೆ ಶೇ.40ರಿಂದ50ರಷ್ಟು ಪ್ರಗತಿಪರವಾದ ತೆರಿಗೆ ಹಾಕಿ ಜನಸಾಮಾನ್ಯರಿಗೆ ಮರುಹಂಚಿಕೆ ಮಾಡಬೇಕು ಎಂದು ಹೋರಾಟಗಾರ, ಚಿತ್ರನಟ ಚೇತನ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಮೆಮೋರಿಯಲ್ ಎಜುಕೇಷನ್ ಅಸೋಸಿಯೇಷನ್, ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಅಂಗವಾಗಿ 'ಅಂಬೇಡ್ಕರ್ ಹಬ್ಬ–2025' ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸರಕಾರಗಳಿಂದ ಉತ್ತಮ ಶಿಕ್ಷಣ, ಆರೋಗ್ಯ ನಿರೀಕ್ಷಿಸಲು ಸಾಧ್ಯವಿಲ್ಲ. ಶೋಷಿತ ಸಮುದಾಯಗಳು ಸಂಘಟಿತರಾಗಿ ರಾಜಕೀಯ ಪ್ರಜ್ಞೆ ಮೂಡಿಸಿಕೊಂಡು ತಮಗೆ ಬೇಕಿರುವ ಯೋಜನೆ, ನೀತಿ, ಕಾನೂನುಗಳನ್ನು ರಚಿಸಿಕೊಳ್ಳಬೇಕಾಗಿದೆ. ಸರಕಾರ ಬೊಕ್ಕಸದಲ್ಲಿ ಹಣವಿಲ್ಲವೆಂದು ಸಾರಿಗೆ, ಜಿಎಸ್‌ಟಿ, ದಿನಬಳಕೆ ವಸ್ತುಗಳ ಮೇಲಿನ ತೆರಿಗೆ ಹೆಚ್ಚಿಸುವ ಬದಲು ಸಮಾಜದಲ್ಲಿ ಇರುವ ಶ್ರೀಮಂತರಿಗೆ ಶೇ.40ರಿಂದ 50ರಷ್ಟು ಪ್ರಗತಿಪರವಾದ ತೆರಿಗೆ ಹೆಚ್ಚಿಸಿ ಅದನ್ನು ಸಮಾಜಕ್ಕೆ ಮರುಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ದೇಶದಲ್ಲಿ 3 ಸಾವಿರ ರಾಜಕೀಯ ಪಕ್ಷಗಳು ಚುನಾವಣಾ ಆಯೋಗದಲ್ಲಿ ನೋಂದಣಿ ಮಾಡಿಕೊಂಡಿವೆ. ಇದರಲ್ಲಿ ಯಾವ ರಾಜಕೀಯ ಪಕ್ಷಗಳು ಸಹ ಸಂವಿಧಾನವನ್ನು ಎತ್ತಿಹಿಡಿಯುವ ಕೆಲಸ ಮಾಡುತ್ತಿಲ್ಲ. ವೈಜ್ಞಾನಿಕತೆಯನ್ನು ಅಂಕಿ–ಅಂಶಗಳು, ದಾಖಲೆಗಳ ಮೂಲಕ ತೀರ್ಮಾನಿಸಬೇಕೆ ಹೊರತು ವೌಢ್ಯ, ಮೂಢನಂಬಿಕೆಗಳಿಂದಲ್ಲ. ಈ ಹಿಂದೆ ಆಳ್ವಿಕೆ ನಡೆಸಿರುವವರು ತಮ್ಮ ಮೂಗಿನ ನೇರಕ್ಕೆ ಇತಿಹಾಸವನ್ನು ತಿಳಿಸುವ ಕೆಲಸ ಮಾಡಿದ್ದಾರೆ. ನಮ್ಮ ಮಕ್ಕಳಿಗೆ ನಾವು ನಿಜವಾದ ಇತಿಹಾಸವನ್ನು ತಿಳಿಸುವ ಕೆಲಸ ಮಾಡಬೇಕು, ಚಳುವಳಿಗಳು ಮೂಲಕ ಅರಿವು ಮೂಡಿಸಬೇಕು, ಮಕ್ಕಳಿಗೆ ಅಂಬೇಡ್ಕರ್ ಅವರ ಪ್ರತಿಜ್ಞೆ, ಸಂಪುಟಗಳನ್ನು ಓದಿಸಬೇಕು ಎಂದು ತಿಳಿಸಿದರು.

ಪ್ರಾಧ್ಯಾಪಕ ಡಾ.ಡಿ.ಉಮಾಶಂಕರ್ ಮತ್ತು ಮೈಸೂರು ವಿವಿ ಅಂಬೇಡ್ಕರ್ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕಿ ಡಾ.ಎಚ್.ಕೆ. ಕಲಾವತಿ ಮಾತನಾಡಿದರು.

ಇದಕ್ಕೂ ಮುನ್ನ ಅಂಬೇಡ್ಕರ್ ಅವರ ಭಾವಚಿತ್ರವನ್ನು ಪಟ್ಟಣದ ಐದು ದೀಪದ ವೃತ್ತದಿಂದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಸಂಘಟನೆಯ ನೂರಾರು ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು. ಸಮಾರಂಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮೆಮೋರಿಯಲ್ ಎಜುಕೇಷನ್ ಅಸೋಸಿಯೇಷನ್ ಅಧ್ಯಕ್ಷ ಜೆ.ಅಂಕಯ್ಯ, ಕಾರ್ಯದರ್ಶಿ ದೊಡ್ಡವೆಂಕಟಯ್ಯ, ಉಪಾಧ್ಯಕ್ಷ ಟಿ.ಎಸ್.ಹಾಳಯ್ಯ(ಸೊಸೈಟಿ), ಖಜಾಂಚಿ ವೆಂಕಟೇಶ್, ನಿರ್ದೇಶಕರಾದ ಪ್ರಾಕಾಶ್‌ಬ್ಯಾಡರಹಳ್ಳಿ, ದೇವರಾಜು, ಪಾಪಯ್ಯ, ಎಚ್.ಪಿ.ಜವರಯ್ಯ, ಬಾಲಕೃಷ್ಣ, ಮುಖಂಡರಾದ ಕಣಿವೆರಾಮು, ಬೊಮ್ಮರಾಜು, ಕಣಿವೆ ಯೋಗೇಶ್, ಜಿ.ಬಿ.ಸುರೇಶ್, ನಲ್ಲಹಳ್ಳಿ ಸುರೇಶ್, ಬೇವಿನಕುಪ್ಪೆ ದೇವರಾಜು, ಡಿ.ಕೆ.ಅಂಕಯ್ಯ, ಹಾರೋಹಳ್ಳಿ ಸೋಮಶೇಖರ್, ಮೂರ್ತಿ, ಬನ್ನಂಗಾಡಿ ಯೋಗೇಶ್, ಮಂಜು ಮಂಡಿ ಬೆಟ್ಟಹಳ್ಳಿ ಸೇರಿದಂತೆ ಹಲವರು ಹಾಜರಿದ್ದರು.

ಏ.30 ರಂದು ವಿಶ್ವಗುರು ಬಸವೇಶ್ವರರ ಜಯಂತಿ

ಮಂಡ್ಯ, ಏ.19– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಸಂಸ್ಕೃತಿ ಇಲಾಖೆ ಜಿಲ್ಲಾ ಬಸವ ಜಯಂತಿ ಸಮಿತಿ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ವತಿಯಿಂದ ಶ್ರೀ ವಿಶ್ವಗುರು ಬಸವೇಶ್ವರರ ಜಯಂತಿ ಕಾರ್ಯಕ್ರಮವನ್ನು ಏ.30 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳ ಮಠದ ಡಾ.ತ್ರಿನೇತ್ರ ಮಹಂತಶಿವಯೋಗಿ ಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಬಿ.ಜಿ.ಪುರ ಹೊರಮಠದ ಶ್ರೀ ಚಂದ್ರಶೇಖರ ಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಮ್ಮುಖ ವಹಿಸಲಿದ್ದಾರೆ. ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳ ಕಿರುಕುಳ; ಪ್ರತಿಭಟನೆ



ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಬಿಳಿಗಿರಿರಂಗನ ಬೆಟ್ಟದ ಗ್ರಾಮಸ್ಥರು ಪ್ರತಿಭಟನೆ ನಡೆಸಿದಾಗ ಪೋಲೀಸರು ಮನವಿ ಆಲಿಸಿದರು.

ಯಳಂದೂರು, ಏ.19–ಅರಣ್ಯ ಇಲಾಖೆ ಅಧಿಕಾರಿಗಳು ನೀಡುತ್ತಿರುವ ಕಿರುಕುಳ ವಿರೋಧಿಸಿ ಬಿಳಿಗಿರಿರಂಗನ ಬೆಟ್ಟದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ನೂರಾರು ವರ್ಷಗಳಿಂದ ಬಿಳಿಗಿರಿರಂಗನ ಬೆಟ್ಟದಲ್ಲಿ ವಾಸ ಮಾಡುತ್ತಿದ್ದರೂ ಅರಣ್ಯ ಇಲಾಖೆಯವರು ವಿನಾಕಾರಣ ದಾಖಲಾತಿ ನೀಡುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ಗ್ರಾಪಂ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್ ಆರೋಪಿಸಿದರು.


ಅರಣ್ಯ ಇಲಾಖೆಯಿಂದ ಈವರೆಗೂ ಯಾವುದೇ ಅರಣ್ಯ ಪ್ರದೇಶವನ್ನ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಹಾಗೂ ವ್ಯವಸಾಯ ಮಾಡುತ್ತಿರುವ ಬಗ್ಗೆ ಯಾವುದೇ ವ್ಯಾಜ್ಯ ಇರುವುದಿಲ್ಲ. ಅರಣ್ಯ ಇಲಾಖೆ ನಮಗೆ ಯಾವುದೇ ನೋಟಿಸ್ ನೀಡದೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವುದಾಗಿ ನೋಟಿಸ್ ನೀಡಲಾಗಿದೆ ಎಂದು ದೂರಿದರು.

ಬಿಳಿಗಿರಿರಂಗನಾಥ ಸ್ವಾಮಿ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸರ್ವೆ ನಂಬರ್ 4ರಲ್ಲಿ ಹಂತ ಹಂತವಾಗಿ 130 ಎಕರೆ ಭೂಮಿ ಮಂಜೂರು ಮಾಡಿ, ಉಳಿದ ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಲಾಗಿರುತ್ತದೆ ಇತ್ತೀಚಿನ ದಿನಗಳಲ್ಲಿ ತುಳಸಮ್ಮ ಕೊಂ ಮುತ್ತಯ್ಯನ ರಂಗ ಮತ್ತು ಶಕುಂತಲಮ್ಮ ಕೋಂ ಮಲ್ಲರಾಜು ವಿಜಯಲಕ್ಷ್ಮಿ ಅವರುಗಳ ಜಮೀನುಗಳಿಗೆ ಸರ್ವೆ ನಂಬರ್ ಎರಡರಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವ ಬಗ್ಗೆ ಮಾಲೀಕತ್ವದ ಹಕ್ಕನ್ನು ಸಾಬೀತು ಪಡಿಸಲು ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಕಾನೂನು ಕ್ರಮಜರುಗಿಸಲಾಗುವುದೆಂದು ನೋಟಿಸ್ ನೀಡಿದ್ದಾರೆ ಎಂದು ಕಿಡಿಕಾರಿದರು.

ಮುಖಂಡ ಶ್ರೀನಿವಾಸ್ ನಾಯಕ ಮಾತನಾಡಿದರು. ಪುಟ್ಟಮ್ಮ, ಮೀನಾಕ್ಷಿ, ಲಕ್ಷ್ಮಿ, ಪುಷ್ಪ, ಗಾಯತ್ರಿ, ನಾಗರಾಜು, ರಂಗಮ್ಮ, ಸಾಕಮ್ಮ, ಜಯಮ್ಮ, ಶಾಂತಮ್ಮ, ಮಹಾದೇವಮ್ಮ ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಾಹಿತಿ ಪ್ರಕಾಶ್ ಪುಟ್ಟಪ್ಪ ಕೃತಿಗೆ ರಾಜ್ಯಮಟ್ಟದ ಪ್ರಶಸ್ತಿ

ಕೃತಿ ಬಿಡುಗಡೆಗೂ ಮುನ್ನವೇ ಪ್ರಶಸ್ತಿಗೆ ಭಾಜನ



ಬಿಡುಗಡೆಗೆ ಸಿದ್ಧವಾಗಿರುವ ಗಾಂಧಿ ಜೋಡಿನ ಮಳಿಗೆ ಕೃತಿ

ಕೊಳ್ಳೇಗಾಲ: ಶಿಕ್ಷಕ ಹಾಗೂ ಸಾಹಿತಿ ಪ್ರಕಾಶ್ ಪುಟ್ಟಪ್ಪ ವಿರಚಿತ ಗಾಂಧಿ ಜೋಡಿನ ಮಳಿಗೆ ಕಥಾ ಸಂಕಲನ ಬಿಡುಗಡೆಗೂ ಮುನ್ನವೇ ರಾಘವೇಂದ್ರ ಪಾಟೀಲ ಕಥಾ ಪ್ರಶಸ್ತಿಗೆ ಭಾಜನವಾಗಿದೆ.

ಸಾಹಿತಿ ಪ್ರಕಾಶ್ ಪುಟ್ಟಪ್ಪ ಪೊನ್ನಾಚಿ ಗ್ರಾಮದವರಾಗಿದ್ದು ವೃತ್ತಿಯಲ್ಲಿ ಶಿಕ್ಷಕರಾಗಿ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಹೊರಹೊಮ್ಮಿದ್ದಾರೆ.

ಇವರ 2ನೇ ಕೃತಿ 14 ಕಥೆಗಳನ್ನು ಒಳಗೊಂಡಿರುವ ಕಥಾ ಸಂಕಲನವಾಗಿದ್ದು, ವಿಶೇಷವಾಗಿ ಜಿಲ್ಲೆಯ ಭಾಷೆಯನ್ನು ಬಳಸಿ ಕಥೆಗಳನ್ನು ರಚಿಸಲಾಗಿದೆ. ಧಾರವಾಡದಲ್ಲಿ ಏ.20ರಂದು ಜರುಗುವ ರಾಘವೇಂದ್ರ ಪಾಟೀಲ ಕಥಾ ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಕಥಾ ಸಂಕಲನ ಬಿಡುಗಡೆಯಾಗಲಿದೆ. ಅಮೂಲ್ಯ ಪ್ರಕಾಶನ ಗಾಂಧಿ ಜೋಡಿನ ಮಳಿಗೆ ಕಥಾ ಸಂಕಲವನ್ನು ಪ್ರಕಟಿಸಿದೆ.

ಟಿಎಪಿಸಿಎಂಎಸ್‌ನಲ್ಲಿ 1.30 ಕೋಟಿ ರೂ. ಹಗರಣ: ಬಾಲರಾಜು

ಯಳಂದೂರು: ಕಳೆದ ಅವಧಿಯಲ್ಲಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್)ದಲ್ಲಿ 1,30,30,320 ರೂ. ಹಗರಣ ನಡೆದಿದೆ ಎಂದು ಸಂಘದ ಹಾಲಿ ಅಧ್ಯಕ್ಷರಾಗಿರುವ ಮಾಜಿ ಶಾಸಕ ಎಸ್.ಬಾಲರಾಜು ಆರೋಪಿಸಿದ್ದಾರೆ.

ಸಂಘದ ಪ್ರಭಾರ ಕಾರ್ಯದರ್ಶಿಯಾಗಿದ್ದ ಮಲಾರಪಾಳ್ಯ ಮಹೇಶ್ 1,25,30,320 ರೂ. ಹಾಗೂ ಅಧ್ಯಕ್ಷರಾಗಿದ್ದ ವಡಗೆರೆ ದಾಸ್ 5 ಲಕ್ಷ ರೂ. ಹಗರಣ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಸಹಕಾರ ಇಲಾಖೆ ಉಪನಿಬಂಧಕ ಕಚೇರಿಯಲ್ಲಿ ಜು.24 ರಂದು ದಾವೆಯನ್ನು ಹೂಡಲಾಗಿದೆ ಯಳಂದೂರು ಠಾಣೆಯಲ್ಲೂ ಇದೇ ಮಾ.30 ರಂದು ವಂಚನೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ನಮ್ಮ ಸಂಘದ ವತಿಯಿಂದ ವಿವಿಧ ಸಂಸ್ಥೆಗಳಿಗೆ 1,35,07,761 ರೂ. ಹಣವನ್ನು ಪಾವತಿಸಬೇಕಾಗಿದೆ. ಇಲ್ಲಿ ಒಟ್ಟು 12 ಜನರು ಸದಸ್ಯರಿದ್ದಾರೆ. ಈವರೆಗೆ ಒಟ್ಟು 4 ಬಾರಿ ಸಭೆಯನ್ನು ಕರೆದಿದ್ದೇನೆ. ಆದರೆ ಕೆಲ ಸದಸ್ಯರು ಬೇಕೆಂತಲೇ ಗೈರಾಗುತ್ತಿದ್ದಾರೆ. ಸಭೆಯ ಸಾಮಾನ್ಯ ಸಭೆಯನ್ನು ಕರೆದು ಹೊಸ ನಿರ್ಣಯ ಮಾಡಲು ಕೂಡ ಸಾಧ್ಯವಾಗುತ್ತಿಲ್ಲ. ಕೇವಲ 6 ಜನರು ಮಾತ್ರ ಸಭೆಗೆ ಹಾಜರಾಗುತ್ತಿರುವುದರಿಂದ ಕೋರಂ ಕೊರತೆಯಾಗುತ್ತಿದೆ ಎಂದರು.

1949ರಲ್ಲಿ ಆರಂಭಗೊಂಡಿರುವ ಜಿಲ್ಲೆಯ ಅತಿ ಹಳೆಯ ಸಹಕಾರ ಸಂಘ. ಇದು ಲಾಭದಲ್ಲಿತ್ತು. 20 ವರ್ಷಗಳ ಹಿಂದೆ ನಿರ್ದೇಶಕನಾಗಿ ಆಯ್ಕೆಯಾದ ಬಳಿಕ ನನಗೆ ರಾಜಕೀಯ ಹುಟ್ಟು ಕೊಟ್ಟ ಸಂಸ್ಥೆಯನ್ನು ಉಳಿಸಿಕೊಳ್ಳುವ ಉದ್ದೇಶದಿಂದ ನಿರ್ದೇಶಕನಾಗಿ, ಅಧ್ಯಕ್ಷನಾಗಿ ಆಯ್ಕೆಯಾದೆ. ಆದರೆ ಇಲ್ಲಿನ ಕೆಲ ನಿರ್ದೇಶಕರು ಸಭೆಗೂ ಬಾರದೆ ರಾಜಕೀಯ ಮಾಡುತ್ತಿದ್ದಾರೆ ಎಂದು ದೂರಿದರು.

ಗುಂಡ್ಲುಪೇಟೆ ಅಭಿವೃದ್ಧಿಗೆ ಸಾರ್ವಜನಿಕರ ಮುಕ್ತ ಸಲಹೆ ಅಗತ್ಯ



ನಾಗರಿಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಶಾಸಕ ಗಣೇಶ್ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ: ಪಟ್ಟಣದ ಅಭಿವೃದ್ಧಿ ಮತ್ತು ಕುಂದುಕೊರತೆಗಳ ನಿವಾರಣೆಗೆ ಸಾರ್ವಜನಿಕರು ಮುಕ್ತ ಸಲಹೆ ನೀಡಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಶಿಕ್ಷಣ ಇಲಾಖೆಯ ಜ್ಞಾನ ಭವನದಲ್ಲಿ ಆಯೋಜಿಸಿದ್ದ ನಾಗರಿಕರೊಂದಿಗೆ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮಾಂತರ ಪ್ರದೇಶಗಳಿಗೆ ಹೋಲಿಸಿದರೆ ಪಟ್ಟಣದಲ್ಲಿ ಕಸ ವಿಲೇವಾರಿ, ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸಮಸ್ಯೆಗಳಿವೆ. ಪುರಸಭೆ ವ್ಯಾಪ್ತಿಯಲ್ಲಿ 7500 ನಲ್ಲಿ ಸಂಪರ್ಕಕ್ಕೆ ಅವಕಾಶ ನೀಡಲಾಗಿದೆ. ಹೊಸ ಹೊಸ ಬಡಾವಣೆಗಳಲ್ಲಿ ಮನೆಗಳು ನಿರ್ಮಾಣವಾಗುತ್ತಿದ್ದು ಎಲ್ಲಾ ಕಡೆಗಳಿಗೂ ಮೂಲ ಸೌಕರ್ಯ ಕಲ್ಪಿಸಬೇಕಾಗಿದೆ. ನಂಜನಗೂಡಿನಲ್ಲಿ ಮಾಡಿರುವಂತೆ ವಾಹನಗಳ ಪಾರ್ಕಿಂಗ್ ಸೇರಿದಂತೆ ಎಲ್ಲಾ ಆಹಾರ ಪದಾರ್ಥ ಗಳೂ ಒಂದೆಡೆ ಸಿಗುವಂತೆ ಮಾಡಬೇಕಾಗಿದ್ದು ಸಾರ್ವಜನಿಕರು ಇದಕ್ಕೆ ಸೂಕ್ತ ಸ್ಥಳವನ್ನು ಸಲಹೆ ಮಾಡಬಹುದು ಎಂದರು.

ನಿವೃತ್ತ ಶಿಕ್ಷಕ ಬ್ರಹ್ಮಾನಂದ ಮಾತನಾಡಿ ಪಟ್ಟಣದ ದೊಡ್ಡ ಬಡಾವಣೆಯಾದ ಕೆ.ಎಸ್.ನಾಗರತ್ನಮ್ಮ ಬಡಾವಣೆಗೆ ರಸ್ತೆ, ಚರಂಡಿ, ಕಸವಿಲೇವಾರಿ ಮುಂತಾದ ಮೂಲಭೂತ ಸೌಕರ್ಯಗಳಿಲ್ಲ ಎಂದು ದೂರಿದರು. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ನಿಧಿಯಿಂದ ಹೆಚ್ಚಿನ ಅನುದಾನ ತಂದು ಬಡಾವಣೆಯನ್ನು ಅಭಿವೃದ್ಧಿಗೊಳಿಸುವುದಾಗಿ ಶಾಸಕ ಗಣೇಶ್ ಪ್ರಸಾದ್ ಉತ್ತರಿಸಿದರು.

ಮಹಿಳಾ ಸಂತ್ವನ ಸಂಘಟನೆಯ ಮುಖ್ಯಸ್ಥೆ ಸರಸ್ವತಿ ಮಾತನಾಡಿ, ಪಟ್ಟಣದ ಮುಖ್ಯರಸ್ತೆ ಹಾಗೂ ನಾನಾ ಬಡಾವಣೆಗಳಲ್ಲಿ ಅನಧಿಕೃತ ಪಾರ್ಕಿಂಗ್ ಹಾಗೂ ರಸ್ತೆಗಳನ್ನು ಅತಿಕ್ರಮಿಸಿ ವರ್ಕ್ ಶಾಪ್ ಮಾಡಿಕೊಂಡಿದ್ದಾರೆ. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಪಟ್ಟಣಕ್ಕೆ ಮತ್ತೊಂದು ಸಂಚಾರಿ ಪೊಲೀಸ್ ಠಾಣೆ ಆರಂಭಿಸಲು ಕ್ರಮಕೈಗೊಳ್ಳಿ ಎಂದಾಗ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಶೀಘ್ರವೇ ಆರಂಭಿಸಲಾಗುವುದು. ಸಂಚಾರ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರಿಗೆ ಸಹಕರಿಸಿ ಎಂದು ಮನವಿ ಮಾಡಿದರು.

ವರ್ತಕರ ಸಂಘದ ಅಧ್ಯಕ್ಷ ಅಂಗಡಿ ಶಿವಕುಮಾರ್ ಮಾತನಾಡಿ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿ ಎಲ್ಲಾ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದು ಕಿರಿದಾದ ರಸ್ತೆಯಲ್ಲಿ ವಾಹನಗಳ ಪಾರ್ಕಿಂಗ್‌ನಿಂದ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ವಾಣಿಜ್ಯೋದ್ಯಮಿಗಳಿಗೆ ಪ್ರತ್ಯೇಕ ಸ್ಥಳ ಗುರ್ತಿಸಿ ಒದಗಿಸುವ ಮೂಲಕ ವರ್ತಕರು ಮತ್ತು ಗ್ರಾಹಕರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದಾಗ ಹೆದ್ದಾರಿಯಲ್ಲಿ ಬ್ಯಾಂಕುಗಳ ಮುಂದೆ ಹಾಗೂ ರಸ್ತೆ ಬದಿಗಳಲ್ಲಿ ವಾಹನಗಳ ನಿಲುಗಡೆ ಮಾಡದಂತೆ ಪ್ರತಿ ದಿನವೂ ಎಚ್ಚರಿಕೆ ನೀಡಲಾಗುತ್ತಿದೆ. ಸದ್ಯದಲ್ಲಿಯೇ ಬೋರ್ಡ್ ಅಳವಡಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಇಂಥಾ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳ ಮಾಲೀಕರಿಗೆ ದಂಡ ವಿಧಿಸಲಾಗುವುದು ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್ ತಿಳಿಸಿದರು.

ಸಭೆಯಲ್ಲಿ ಪುರಸಭೆ ಅಧ್ಯಕ್ಷ ಮಧುಸೂಧನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮುಖ್ಯಾಧಿಕಾರಿ ವಸಂತಕುಮಾರಿ, ಸದಸ್ಯರಾದ ಶಶಿಧರ, ಕಪ್ಪಣ್ಣ, ಕುಮಾರ್, ರಾಜಗೋಪಾಲ್, ಕಿರಣ್ ಬಿಇಒ ಸ್ವಾಮಿ ಸೇರಿದಂತೆ ಹಲವರು ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 20-04-2025


ಶ್ರದ್ಧಾಂಜಲಿ

'ಮೈಸೂರು ಮಿತ್ರ' 46ನೇ ವಾರ್ಷಿಕೋತ್ಸವ ಕಥಾಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ



ಬಿ.ಆರ್.ನಾಗರತ್ನ

ಮೊ: 9731999313



ಆಫೀಸಿನಿಂದ ಮನೆಗೆ ಬಂದ ಚಂದ್ರು ಫ್ರೆಶ್ ಅಪ್ ಆಗಿ ಸೋಫಾದ ಮೇಲೆ ಕುಳಿತು ಅವತ್ತಿನ ಪೇಪರ್ ಕೈಗೆತ್ತಿಕೊಂಡ. ಒಂದು ಕೈಯಲ್ಲಿ ಒಗ್ಗರಣೆ ಹಾಕಿದ್ದ ಪುರಿ ಇದ್ದ ತಟ್ಟೆ ಮತ್ತೊಂದರಲ್ಲಿ ನೀರಿನ ಲೋಟದೊಂದಿಗೆ ಬಂದಳು ಚಂದ್ರುವಿನ ಮಡದಿ ಸುಮ. ಅದನ್ನು ಅವನ ಮುಂದಿನ ಟೀಪಾಯಿಯ ಮೇಲಿಟ್ಟು "ತಿನ್ನುತ್ತಿರಿ, ನಾನು ಕಾಫಿ ಬೆರೆಸಿಕೊಂಡು ತರುತ್ತೇನೆ" ಎಂದು ಒಳ ನಡೆದಳು.

ಹೆಂಡತಿ ಕೊಟ್ಟ ಪುರಿಯನ್ನು ತಿಂದು ಮುಗಿಸಿ ನೀರು ಕುಡಿಯುತ್ತಿರುವಷ್ಟರಲ್ಲಿ ಕಾಫಿ ತಂದುಕೊಟ್ಟು ಅವನಿಗೆದುರಾಗಿದ್ದ ಕುರ್ಚಿಯಲ್ಲಿ ಕುಳಿತಳು. ಅದೂ ಇದೂ ಮಾತನಾಡುತ್ತಾ ಏನೋ ನೆನಪಿಸಿಕೊಂಡವಳಂತೆ "ರೀ..ನಿಮ್ಮ ಗೆಳೆಯ ಕೃಷ್ಣಪ್ಪ ಬಂದಿದ್ದರು. ನಾನು ನೀವಿನ್ನೂ ಆಫೀಸಿನಿಂದ ಬಂದಿಲ್ಲ ಎಂದುದಕ್ಕೆ ಹೌದೇ.. ಹಾಗಾದರೆ ಪೇಟೆಯಲ್ಲಿ ನನಗೆ ಸ್ವಲ್ಪ ಕೆಲಸವಿದೆ, ಅದನ್ನು ಮುಗಿಸಿ ಬರುತ್ತೇನೆ. ಸಾಹೇಬರಿಗೆ ತಿಳಿಸಿಬಿಡಿ, ಮರೆಯಬೇಡಿ ಎಂದು ಉತ್ತರಕ್ಕೂ ಕಾಯದೇ ಹೊರಟು ಹೋದರು" ಎಂದು ಹೇಳಿದಳು ಸುಮ.

ಹೆಂಡತಿ ಹೇಳಿದ ಮಾತುಗಳು 'ಮತ್ತೆ ಬರುತ್ತಾರಂತೆ ಕೃಷ್ಣಪ್ಪ' ಎಂದದ್ದು ಚಂದ್ರುವನ್ನು ಚಿಂತೆಗೀಡುಮಾಡಿತು. ಇವನ್ಯಾಕೆ ಮತ್ತೆ ನನ್ನನ್ನು ನೋಡಲು ಬರುತ್ತಾನೆ? ಅವನ ವಸ್ತುವನ್ನು ನಾನವತ್ತೇ ಕೊಟ್ಟಾಯಿತಲ್ಲಾ! ಮತ್ಯಾವ ಸಮಸ್ಯೆಯನ್ನು ಹೊತ್ತು ತರುತ್ತಿದ್ದಾನಪ್ಪಾ, ಫೋನ್ ಮಾಡಿ ತಿಳಿಸಬಹುದಿತ್ತಲ್ಲಾ, ನೇರವಾಗಿ ನನ್ನ ಬಳಿ ಮಾತನಾಡುವಂತದ್ದೇನಿತ್ತು? ಮತ್ಯಾವದಕ್ಕಾದರೂ ಮಧ್ಯಸ್ಥಿಕೆ ವಹಿಸಿ ಎಂದು ಕರೆದರೆ ಖಂಡಿತ ಒಪ್ಪಿಕೊಳ್ಳುವುದಿಲ್ಲ. ಅವತ್ತೇನೋ ಮಾನವೀಯತೆಯ ದೃಷ್ಟಿಯಿಂದ ಹೋಗಿ ಪಡಬಾರದ ಭಂಗಪಟ್ಟು ಬಂದದ್ದಾಯಿತು, ನೋಡಬಾರದ್ದನ್ನು ನೋಡಿ, ಕೇಳಬಾರದಂತಹ ಮಾತುಗಳನ್ನು ಕೇಳಿಸಿಕೊಂಡದ್ದಾಯಿತು. ಈಗೇಕೆ ಮತ್ತೆ? ಅದೇನು ಜನಗಳೋ, ಕನಿಷ್ಠ ನಡವಳಿಕೆಯೂ ಇಲ್ಲದವರು. ನಾನೂ ಸರಿ ಅವನು ಕರೆದಾಂತ ಪುಂಗಿನಾದಕ್ಕೆ ತಲೆದೂಗುವ ನಾಗಪ್ಪನಂತೆ ಅವನ್ನು ಹಿಂಬಾಲಿಸಿ ಹೋಗಿಬಿಟ್ಟೆ ಹೀಗೆಂದುಕೊಳ್ಳುತ್ತಾ ಆಗ್ಗೆ ಸುಮಾರು ಇಪ್ಪತ್ತೈದು ದಿನಗಳ ಹಿಂದೆ ನಡೆದ ಪ್ರಕರಣವನ್ನು ನೆನಪಿಸಿಕೊಂಡ. ಎಲ್ಲ ದೃಶ್ಯಗಳೂ ಕಣ್ಮುಂದೆ ಮರುಕಳಿಸಿದಂತಾಯಿತು.

ಚಂದ್ರು ಮಾಗಡಿ ತಾಲೂಕು ಕಚೇರಿಯಲ್ಲಿ ಅಕೌಂಟೆಂಟಾಗಿ ಕೆಲಸ ಮಾಡುತ್ತಿದ್ದ. ಅಲ್ಲಿಗೆ ತಮ್ಮೂರಿಗೆ ಸಂಬಂಧಿಸಿದ ಹಲವಾರು ಕೆಲಸಗಳಿಗಾಗಿ ಸುಮಾರು ಇಪ್ಪತ್ತೈದು ಕಿ.ಮೀ. ದೂರದಲ್ಲಿದ್ದ ಹರಸೂರಿನಿಂದ ರೈತಾಪಿ ಕುಟುಂಬದ ವ್ಯಕ್ತಿ ಕೃಷ್ಣಪ್ಪ ಬರುತ್ತಿದ್ದ. ಆತನು ಅದೇ ಊರಿನ ಪ್ರಾಥಮಿಕ ಶಾಲೆಯಲ್ಲಿಯೇ ಶಿಕ್ಷಕನಾಗಿದ್ದ. ಇತರೆ ವ್ಯವಹಾರದಲ್ಲೂ ಬುದ್ಧಿವಂತ. ತನ್ನ ಹಳ್ಳಿಯ ಜನರ ಕೆಲಸಗಳಿಗಾಗಿ ತಮ್ಮೂರಿಗೂ ಮಾಗಡಿಗೂ ಆಗಿಂದಾಗ್ಗೆ ಎಡತಾಕುತ್ತಿದ್ದ. ಇದರಿಂದಾಗಿ ಇವನ ಪರಿಚಯ ಚಂದ್ರುವಿಗಾಗಿತ್ತು. ಒಳ್ಳೆಯ ಸ್ವಭಾವನಾದ್ದರಿಂದ ಪರಸ್ಪರ ಆತ್ಮೀಯತೆಯೂ ಬೆಳೆದಿತ್ತು. ಕೃಷ್ಣಪ್ಪನ ಜೊತೆಯಲ್ಲಿ ಹುಟ್ಟಿದ ಸಹೋದರರೂ ತಕ್ಕಮಟ್ಟಿಗೆ ವಿದ್ಯಾವಂತರಾಗಿದ್ದರು. ಅವನ ಹಿರಿಯಣ್ಣ ಅವರೂರಿನ ಪಕ್ಕದ ಹಳ್ಳಿಯಲ್ಲಿ ಶಾಲಾ ಮಾಸ್ತರನಾದರೆ, ಕಿರಿಯವನು ಊರಿನಲ್ಲಿಯೇ ಚಿಕ್ಕದೊಂದು ಅಂಗಡಿಯಿಟ್ಟು ವ್ಯಾಪಾರ ಮಾಡುತ್ತಿದ್ದ. ಜೊತೆಗೆ ಮನೆಯಲ್ಲಿ ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದ. ತಂದೆಯವರು ತೀರಿಕೊಂಡಿದ್ದರು. ತಾಯಿ ಹಿರಿಯರಿಂದ ತಮಗೆ ಬಂದಿದ್ದ ಮನೆಯಲ್ಲಿ ಪಾಲಿಗಿದ್ದ ಜಮೀನಿನ ಕಾರುಬಾರು ನಿಭಾಯಿಸಿಕೊಂಡು ವಾಸವಾಗಿದ್ದರು. ಯಾರ ಜೊತೆಯಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಪ್ರತ್ಯೇಕವಾಗಿ ತಮ್ಮ ಬದುಕನ್ನು ನಡೆಸಿಕೊಂಡಿದ್ದರು. ಇವನ್ನೆಲ್ಲ ಚಂದ್ರುವಿನ ಬಳಿ ಕೃಷ್ಣಪ್ಪನೇ ಹೇಳಿಕೊಂಡಿದ್ದ ಹಾಗೂ ಆಗೀಗ ವೈಯಕ್ತಿಕ ಕಷ್ಟಸುಖಗಳ ಬಗ್ಗೆ ಕೂಡ ವಿಚಾರ ವಿನಿಮಯ ನಡೆಯುತ್ತಿತ್ತು.

ಒಂದು ದಿನ ಕೃಷ್ಣಪ್ಪ ಮನೆಗೆ ಧಾವಿಸಿ ಬಂದವನೇ "ಸಾರ್, ನಮ್ಮ ತಾಯಿಯ ಆರೋಗ್ಯ ಸರಿಯಿಲ್ಲ, ಹಠಾತ್ತನೆ ಸುಸ್ತಾಗಿಬಿಟ್ಟಿದ್ದಾರೆ. ಅವರನ್ನು ಇಲ್ಲಿನ ಆಶಾ ನರ್ಸಿಂಗ್ ಹೋಮಿಗೆ ಸೇರಿಸಿದ್ದೇನೆ. ಅಲ್ಲಿನ ಡಾಕ್ಟರು ಮಧುಕರ್ ತಮಗೆ ತುಂಬ ಪರಿಚಯದವರು ಎಂದು ಕೇಳಿದೆ. ದಯವಿಟ್ಟು ತಾವು ಬಂದು ಅವರಿಗೊಂದು ಮಾತು ಹೇಳಿದರೆ ಮುತುವರ್ಜಿ ವಹಿಸುತ್ತಾರೆ. ಪ್ಲೀಸ್ ಬನ್ನಿ ಸಾರ್" ಎಂದು ಅಂಗಲಾಚಿದ. ಅವನ ಮುಖದ ಛಾಯೆ ದಯನೀಯವಾಗಿತ್ತು ಅದನ್ನು ಕಂಡು ಮನಸ್ಸು ಕರಗಿತು. ಅವನೊಡನೆ ನರ್ಸಿಂಗ್ ಹೋಮಿಗೆ ಹೋದ ಚಂದ್ರು, ವಾರ್ಡಿನ ಎದುರಿಗೇ ಸಿಕ್ಕಿದರು ಡಾ.ಮಧುಕರ್. ಚಂದ್ರು ಮಾತನಾಡಲು ಬಾಯಿ ತೆರೆಯುವ ಮುನ್ನವೇ ಅವರೇ "ಸಾರಿ ಕೃಷ್ಣಪ್ಪಾ, ಷಿ ಈಸ್ ನೋ ಮೋರ್. ವಿ ಟ್ರೈಡ್ ಅವರ್ ಬೆಸ್ಟ್, ಬಟ್ ನೋ ಯೂಸ್" ಎಂದು ನಿಸ್ಸಹಾಯಕರಾಗಿ ನುಡಿದರು. ಕೃಷ್ಣಪ್ಪನಿಗೆ ಏನೂ ಸಹಾಯ ಮಾಡಲಾಗಲಿಲ್ಲವಲ್ಲಾ ಎಂದು ಚಂದ್ರುವಿಗೆ ಮನಸ್ಸು ಪಿಚ್ಚೆಂದಿತು. ಅವನು ಬೇಸರ ಮಾಡಿಕೊಂಡದ್ದು ಕಂಡು ಕೃಷ್ಣಪ್ಪನೇ "ನಾನೇ ತಡವಾಗಿ ಕರೆದುಕೊಂಡು ಬಂದೆನೇನೋ, ನೀವೇನೂ ಮನಸ್ಸು ಚಿಕ್ಕದು ಮಾಡಿಕೊಳ್ಳಬೇಡಿ ಸಾರ್" ಎಂದು ಸಮಾಧಾನ ಹೇಳಿದ.

"ಸರಿಯಪ್ಪ ಮುಂದಿನ ಕೆಲಸ ನೋಡು, ದೇಹವನ್ನು ಊರಿಗೆ ಸಾಗಿಸಲು ವ್ಯವಸ್ಥೆ ಮಾಡು" ಎಂದು ಚಂದ್ರುವೇ ಹೇಳಿದ. ನರ್ಸಿಂಗ್‌ಹೋಮಿನವರು ಬಾಡಿಯನ್ನು ನೀಟಾಗಿ ಪ್ಯಾಕ್ ಮಾಡಿಸಿ ತಯಾರು ಮಾಡಿದರು. ಅದು ಹೊಸದಾದ ಆಸ್ಪತ್ರೆಯಾದದ್ದರಿಂದ ಆಂಬುಲೆನ್ಸ್ ವ್ಯವಸ್ಥೆಯಿರಲಿಲ್ಲ. ಖಾಸಗಿ ವಾಹನದವರಾರೂ ಶವವನ್ನು ಸಾಗಿಸಲು ಸಿದ್ಧರಿರಲಿಲ್ಲ. ಖಾಸಗಿ ಆಂಬುಲೆನ್ಸ್ ಸಂಸ್ಥೆಯವರು ಕೇಳಿದ ದುಬಾರಿ ದರವನ್ನು ಕೊಡಲಾಗದೆ ಖಾಸಗಿ ವಾಹನಗಳನ್ನು ವಿಚಾರಿಸಿದ ಕೃಷ್ಣಪ್ಪ. ಒಬ್ಬ ಖಾಸಗಿ ಟ್ಯಾಕ್ಸಿಯವನು ಬರಲೊಪ್ಪಿಕೊಂಡ. ಆದರೆ ಒಂದು ಷರತ್ತು. ಬಾಡಿಯನ್ನು ಡಿಕ್ಕಿಯೊಳಗಡೆ ಇರಿಸಬೇಕು. ಗಾಡಿಯೊಳಗಲ್ಲ. ಗತ್ಯಂತರವಿಲ್ಲದೆ. "ಇನ್ನೇನು ವ್ಯವಸ್ಥೆಯಾಯಿತಲ್ಲ ಹುಷಾರಾಗಿ ಹೋಗಪ್ಪಾ, ನಾನು ಮನೆಗೆ ಹೋಗುತ್ತೇನೆ. ಏನಾದರೂ ಹಣಕಾಸು ಬೇಕಿದ್ದರೆ ಕೇಳು" ಎಂದ ಚಂದ್ರು, "ಇಲ್ಲಾ ಸಾರ್, ಅದೆಲ್ಲ ಏನೂ ಬೇಡ ಆದರೆ ನನಗೆ ತಾಯಿಯನ್ನು ಟ್ರೀಟ್‌ಮೆಂಟಿಗೆಂದು ಕರೆತಂದು ಈಗ ನೋಡಿದರೆ.. ಮುಂದೇನೋ.. ಒಬ್ಬನಿಗೇ ದಿಕ್ಕೇ ತೋಚುತ್ತಿಲ್ಲ ಸಾರ್. ಜೊತೆಗೊಬ್ಬರಿದ್ದರೆ ಸ್ವಲ್ಪ ಧೈರ್ಯ ಬರುತ್ತೆ. ನನ್ನ ಕೈಬಿಡಬೇಡಿ ಸಾರ್. ಊರಿನವರೆಗೆ ನನ್ನ ಜೊತೆಯಲ್ಲಿ ಬನ್ನಿ" ಎಂದು ಕಣ್ಣೀರು ಸುರಿಸುತ್ತಾ ಬೇಡಿಕೊಂಡ.

ಚಂದ್ರುವಿಗೂ ಏನು ಮಾಡಲೂ ತೋಚಲಿಲ್ಲ. ಎಂತಹ ಸಂದಿಗ್ಧತೆಯಲ್ಲಿ ಸಿಕ್ಕಿ ಹಾಕಿಕೊಂಡೆ. ಪಾಪ ಕೃಷ್ಣಪ್ಪ ಏನೋ ಆಸೆಯಿಂದ ತಾಯಿಯನ್ನು ಕರೆತಂದು ಹೀಗಾಗಿ ಹೋಯ್ತಲ್ಲ. ಎಂತಹ ಆಘಾತ. ಅವನು ಹೇಳಿದಂತೆ ಹೆಣದ ಜೊತೆಯಲ್ಲಿ ಪ್ರಯಾಣ ಒಬ್ಬಂಟಿಯಾಗಿ ಕಷ್ಟಕರವಾದದ್ದೇ. ಏನೋ ಅನ್ನಿಸಿತು, ಮನೆಗೆ ಫೋನ್ ಮಾಡಿ ತಾನು ತಡವಾಗಿ ಬರುತ್ತೇನೆ ಎಂದು ತಿಳಿಸಿ ಕೃಷ್ಣಪ್ಪನೊಡನೆ ಹೊರಟೇ ಬಿಟ್ಟ ದಾರಿಯಲ್ಲಿ ಹೆಣವನ್ನು ಗ್ರಾಮದೊಳಕ್ಕೆ ಅಥವಾ ಮನೆಗಾಗಲಿ ತೆಗೆದುಹೋಗುವಂತಿಲ್ಲ. ಇದನ್ನು ಕೃಷ್ಣಪ್ಪನಿಂದ ಕೇಳಿದಾಗ ಮುನ್ನೆಚ್ಚರಿಕೆಯಾಗಿ ದಾರಿಯಲ್ಲಿದ್ದ ಒಂದು ಅಂಗಡಿಯಲ್ಲಿ ಒಂದು ಟಾರ್ಚು ಮತ್ತು ಕೆಲವು ಬಾಳೆಹಣ್ಣು ಒಂದು ಪ್ಯಾಕೆಟ್ ಬಿಸ್ಕಟ್, ಒಂದು ದೊಡ್ಡ ನೀರಿನ ಬಾಟಲಿಯನ್ನು ತೆಗೆದಿಟ್ಟುಕೊಂಡ ಚಂದ್ರು, ಕೃಷ್ಣಪ್ಪ ಪ್ರಯಾಣದ ವೇಳೆಯಲ್ಲಿ ಯಾರಾರಿಗೋ ಫೋನ್ ಮಾಡುತ್ತಿದ್ದ. ತನ್ನಲ್ಲೇ ಏನೋ ಗುಣಗುಣಿಸುತ್ತಿದ್ದ. ಚಿಂತಾಕ್ರಾಂತನಾಗಿದ್ದ. ಅದು ಸಹಜವೇ ಅನ್ನಿಸಿತು ಚಂದ್ರುವಿಗೆ.

"ಸಾರ್, ನೋಡಿ ನನ್ನ ಅಣ್ಣ ತಮ್ಮಂದಿರು, ವಿಷಯ ತಿಳಿಸೋಣವೆಂದರೆ ಆ ನನ್ನ ಮಕ್ಕಳು ಒಬ್ಬನೂ ಫೋನ್ ಎತ್ತುತ್ತಲೇ ಇಲ್ಲ. ಹೋದಮೇಲೆ ಏನಾದರೂ ಗಲಾಟೆ ಮಾಡಿದರೆ ಎಂಬ ಆತಂಕ. ಏನು ಮಾಡಬೇಕೆಂಬುದೇ ಹೊಳೆಯುತ್ತಿಲ್ಲ. ಊರಿನ ಹೊರಗಡೆ ಇರಿಸಲು ಅವರು ಏನಾದರೂ ಏರ್ಪಾಡು ಮಾಡುತ್ತಾರೆಂದರೆ ಅವರ ವರ್ತನೆ ನೋಡಿದರೆ ಏನಾಗುತ್ತದೋ ಎಂಬ ಭಯ ಕಾಡುತ್ತಿದೆ. ಏಕಾದರೂ ಅಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆನೋ ಅನ್ನಿಸುತ್ತಿದೆ" ಎಂದು ಹಲುಬಿದ. ಅದನ್ನು ನೋಡಿ ನಾನೇಕೆ ಇವನ ಜೊತೆ ಬರಲೊಪ್ಪಿ ಸಮಸ್ಯೆಗೆ ಸಿಕ್ಕಿ ಹಾಕಿಕೊಂಡೆನೋ ಎಂದೆನ್ನಿಸಿತು ಚಂದ್ರುವಿನ ಒಳ ಮನಸ್ಸು.

"ಛೇ ಛೇ ಬಿಡು ಅನ್ನಿ, ನೀವೇನು ತಪ್ಪು ಮಾಡಿಲ್ಲ. ತಾಯಿಯನ್ನು ಕರೆತರದಿದ್ದರೆ ತಪ್ಪಾಗುತ್ತಿತ್ತು. ನಿಮ್ಮ ಕರ್ತವ್ಯ ನೀವು ಮಾಡಿದ್ದೀರಿ. ಆದರೆ ವಿಧಿಯ ಮುಂದೆ ನಾವೆಲ್ಲ ಎಷ್ಟರವರು. ಚಿಂತೆಮಾಡಬೇಡಿ. ಹೇಗಿದ್ದರೂ ಊರಿನಲ್ಲಿಯೇ ಇರುವ ಇನ್ನೊಬ್ಬ ನಿಮ್ಮ ಸೋದರನ ಮನೆಗೇ ಹೋಗಿ ನೀವೇ ಹೇಳಿ ಬರುವಿರಂತೆ. ಅಣ್ಣನೂ ಅಲ್ಲೇ ಇದ್ದಾರಲ್ಲ, ನಿಮ್ಮ ಮನೆಯೂ ಅಲ್ಲಿಯೇ ಇದೆಯಲ್ಲವೇ? ಅವರ ಮನೆಯವರು ಮಕ್ಕಳು ಇದ್ದೇ ಇರುತ್ತಾರೆ" ಎಂದು ಸಮಾಧಾನ ಹೇಳಿದ ಚಂದ್ರು.

"ಏನಂತ ಹೇಳಲಿ ಸಾರ್, ನನ್ನ ಮನೆಯವರು, ಮಕ್ಕಳು ತವರಿನ ಕಡೆಯವರೊಡನೆ ಒಂದು ಮದುವೆಗೇಂತ ಹೋಗಿದ್ದಾರೆ. ಈಗ ಸುದ್ದಿ ತಿಳಿದರೂ ಅವರೆಲ್ಲ ಬೆಳಗ್ಗೇನೇ ಬರಲಿಕ್ಕಾಗುವುದು" ಎಂದು ಪರಿತಪಿಸಿದ ಕೃಷ್ಣಪ್ಪ.

"ಹೇಗೋ ಆಗುತ್ತೆ ಬಿಡಿ ಕೃಷ್ಣಪ್ಪ, ನಿಭಾಯಿಸೋಣ" ಎಂದು ಅಭಯವಿತ್ತು ಮೌನಕ್ಕೆ ಜಾರಿದ ಚಂದ್ರು.

ಅಂತೂ ಇಂತೂ ನಿಧಾನವಾಗಿ ಸಾಗಿ ಊರನ್ನು ತಲುಪಿದ್ದಾಯಿತು. ಅಷ್ಟೊತ್ತಿಗೆ ಕತ್ತಲಾವರಿಸುತ್ತಿತ್ತು. ಊರ ಹೊರಗಿನ ಪಾಳುಬಿದ್ದ ಮಂಟಪವೊಂದರಲ್ಲಿ ಬಾಡಿ ಇಳಿಸಿ ತನ್ನ ಬಾಡಿಗೆ ಪಡೆದು ಟ್ಯಾಕ್ಸಿವಾಲಾ ಹೊರಟುಹೋದ. ಸುತ್ತಮುತ್ತ ಒಂದು ನರಪಿಳ್ಳೆಯೂ ಕಾಣಿಸಲಿಲ್ಲ. ಕತ್ತಲು ದಟ್ಟವಾಗತೊಡಗಿತು. ಸ್ವಲ್ಪ ದೂರದಲ್ಲಿ ಒಬ್ಬ ಬೀಡಾಡಿ ವ್ಯಕ್ತಿ ಅವರಿದ್ದಲ್ಲಿಗೆ ಓಡಿಬಂದ. ಅವನಿಗೆ ಪರಿಸ್ಥಿತಿಯ ಅರಿವಾಗದಿದ್ದರೂ ಸುತ್ತಮುತ್ತಲೂ ಬಿದ್ದಿದ್ದ ಕಡ್ಡಿ, ಪುಳ್ಳೆ, ಸೊಪ್ಪುಸೆದೆ ಒಟ್ಟುಗೂಡಿಸಿ ಅದಕ್ಕೆ ಬೆಂಕಿಹಚ್ಚಿದ. ತನಷ್ಟಕ್ಕೆ ತಾನೇ ಏನೋ ಗೊಣಗೊಣ ಅಂದುಕೊಂಡು ನಕ್ಕ. ಅಲ್ಲೇ ಮಲಗಿಸಿದ್ದ ಹೆಣವನ್ನು ಹತ್ತಿರ ಹೋಗಿ ಬಗ್ಗಿ ನೋಡಿ ಸಮೀಪವೇ ಕುಳಿತುಕೊಂಡ.

ಅವನನ್ನು ನೋಡಿ ಕೃಷ್ಣಪ್ಪ "ಈತ ಯಾವುದೋ ಊರಿನಿಂದ ಬಂದವನು. ಬುದ್ಧಿ ಸ್ಥಿಮಿತವಿಲ್ಲ. ಹಾಗೆಂದು ಯಾರ ತಂಟೆಗೂ ಹೋಗುವುದಿಲ್ಲ ಅಪಾಯಕಾರಿಯಲ್ಲ ಯಾರಾದರೂ ಏನನ್ನಾದರೂ ಕೊಟ್ಟರೆ ತಿನ್ನುತ್ತಾನೆ. ಇಲ್ಲಿ ಮಲಗಿರುತ್ತಾನೆ. ಇದೇ ಅವನ ಖಾಯಂ ಜಾಗ, ಆದರೆ ಒಂದು ಅಚ್ಚರಿಯ ಸಂಗತಿ, ಒಂದುದಿನವೂ ಸ್ನಾನ ಮಾಡುವುದನ್ನು ತಪ್ಪಿಸುವುದಿಲ್ಲ. ಅದೆಲ್ಲಿ ನೀರಿನ ಜಾಗ ಹುಡುಕಿಕೊಂಡು ಹೋಗುತ್ತಾನೋ ಗೊತ್ತಿಲ್ಲ. ಬಂದನಂತರ ಮುರಿದು ಹೋಗಿರೋ ಒಂದು ಮೂರ್ತಿ ಇಟ್ಟುಕೊಂಡಿದ್ದಾನೆ. ಅದಕ್ಕೆ ಸಿಕ್ಕಿದ ಹೂಪತ್ರೆ ಸಿಕ್ಕಿಸುತ್ತಾನೆ. ಅದೇ ಅವನ ಪೂಜೆ. ಅರ್ಥವಾಗುವುದಿಲ್ಲ, ನಿರುಪದ್ರವಿ ಪ್ರಾಣಿ" ಎಂದು ಹೇಳಿದ ಕೃಷ್ಣಪ್ಪ.

"ಸರಿ ಕೃಷ್ಣಪ್ಪ, ಈಗಲಾದರೂ ನಿಮ್ಮ ಕಡೆಯವರನ್ನು ಸಂಪರ್ಕಿಸಿ ಕರೆತನ್ನಿ, ಈ ನಿರ್ಜನ ಪ್ರದೇಶದಲ್ಲಿ" ಎನ್ನುತ್ತಿದ್ದ ಚಂದ್ರುವಿನ ಮಾತಿಗೆ ಅಡ್ಡ ಬಾಯಿಹಾಕಿ "ನಾನು ಹೀಗೆ ಹೇಳೀನಿ ಅಂತ ಬೇಸರಪಟ್ಟುಕೊಳ್ಬೇಡಿ ಸಾರ್. ಫೋನಿಗೆ ಸಿಕ್ತಿಲ್ಲ. ನಾನೇ ಊರೊಳಗೆ ಹೋಗಿ ಕರೆತರುತ್ತೇನೆ. ಅಲ್ಲಿಯವರೆಗೆ." ಎಂದು ರಾಗವೆಳೆದ ಕೃಷ್ಣಪ್ಪ.

ಅವನು ಮಾತು ಕೇಳಿ ಚಂದ್ರುವಿಗೆ ಒಂದು ಕ್ಷಣ ಎದೆ ಝಲ್ ಎಂದಿತು. ಸಾವರಿಸಿಕೊಂಡು ಮೊಂಡು ಧೈರ್ಯಮಾಡಿ "ಆಯ್ತು ಹೋಗಿ ಬೇಗ ಬನ್ನಿ, ತಡಮಾಡಬೇಡಿ" ಎಂದು ಅವನನ್ನು ಕಳಿಸಿಕೊಟ್ಟ.

ಕೃಷ್ಣಪ್ಪ ಅತ್ತ ಹೋಗುತ್ತಿದ್ದಂತೆ ಚಂದ್ರು ಎದುರಿಗೆ ಕುಳಿತಿದ್ದ ಅಪರಿಚಿತ ವ್ಯಕ್ತಿಯ ಕಡೆಗೆ ಕಣ್ಣು ಹಾಯಿಸಿದ. ಊಹುಂ ಆತ ಬಾಹ್ಯ ಪ್ರಪಂಚದ ಅರಿವೇ ಇಲ್ಲದಂತೆ ಹೆಣದ ಪಕ್ಕದಲ್ಲಿ ಕುಳಿತು ಅದನ್ನೇ ನೋಡುತ್ತಿದ್ದ. ಹಚ್ಚಿದ್ದ ಬೆಂಕಿ ಆರುತ್ತ ಬಂದಿದ್ದರಿಂದ ಮತ್ತಷ್ಟು ಮಳ್ಳೆ ಕಡ್ಡಿ ಗಳನ್ನು ಆರಿಸಿ ತಂದು ಒಟ್ಟಿದ ಅವತ್ತು ಬೆಳಗ್ಗೆ ಕಛೇರಿಗೆ ರಜೆ ಇದ್ದದ್ದರಿಂದ ನಿಧಾನವಾಗಿ ಎದ್ದು ಸ್ನಾನಪೂಜೆಗಳನ್ನು ಮಾಡಿ ನಿಧಾನವಾಗಿಯೇ ತಿಂಡಿತಿಂದಿದ್ದ. ಹಾಗೆಯೇ ಮಧ್ಯಾಹ್ನದ ಊಟವೂ ಲೇಟಾಗಿಯೇ ಆಗಿತ್ತು ಆದರೀಗ ತಿಂದದ್ದೆಲ್ಲ ಕರಗಿದಂತಾಗಿ ಹೊಟ್ಟೆ ಚುರುಗುಟ್ಟತೊಡಗಿತು. ಗಾಳಿ ಬೀಸುತ್ತಿದ್ದರಿಂದ ಥಂಡಿಕೂಡ ಹೆಚ್ಚಾಗುತ್ತಿತ್ತು. ಉರಿಯುತ್ತಿದ್ದ ಬೆಂಕಿಯ ಹತ್ತಿರಕ್ಕೆ ಸರಿದು ಕುಳಿತುಕೊಂಡ. ಸುಮಾರು ಹೊತ್ತಾದರೂ ಕೃಷ್ಣಪ್ಪನ ಸುಳಿವೇ ಇಲ್ಲ. ಬಾಯಾರಿದಂತಾಯಿತು. ಇಟ್ಟುಕೊಂಡಿದ್ದ ಬಾಟಲಿಯಿಂದ ನೀರು ಕುಡಿದ. ಬಾಳೇಹಣ್ಣು ಬಿಸ್ಕತ್ತು ನೆನಪಾದರೂ ತಿನ್ನಲು ಏಕೋ ಮನಸ್ಸು ಬರಲಿಲ್ಲ. ಚೀಲದಿಂದ ಅವನ್ನು ತೆಗೆಯದೇ ಹಾಗೇ ಕುಳಿತ. ಯಾರೋ ಕರೆದಂತಾಗಿ ತಲೆಯೆತ್ತಿ ನೋಡಿದ ಎದುರಿಗೆ ಆ ಮರುಳು ಮನುಷ್ಯ ತನ್ನ ಕೈಯಲ್ಲಿ ಏನನ್ನೋ ಹಿಡಿದು ಚಂದ್ರುವಿಗೆ ಕೊಡಲು ಕೈಚಾಚಿದ. ಅಲ್ಲಿ ಕಂಡದ್ದೇನು" ಕಪ್ಪಗೆ ತಲೆಕೂದಲಿನ ಬಣ್ಣಕ್ಕೆ ತಿರುಗಿದ್ದ ಎರಡು ಬಾಳೇಹಣ್ಣಿದ್ದವು. ಬೇಡವೆಂದರೂ ಒತ್ತಾಯಮಾಡಿ ಅವನ ಕೈಯಲ್ಲಿಟ್ಟು ತಿನ್ನುವಂತೆ ಸಂಜ್ಞೆ ಮಾಡಿದ ಮರುಳ, ಭಯದಿಂದ ತೆಗೆದುಕೊಂಡು ಸಿಪ್ಪೆ ಸುಲಿದು ತಿಂದು ಮತ್ತೊಮ್ಮೆ ನೀರು ಕುಡಿದ ಚಂದ್ರು, ಅದನ್ನು ನೋಡಿ ಆ ಮರುಳ ಚಪ್ಪಾಳೆ ತಟ್ಟಿ ನಕ್ಕ. ಮತ್ತೆ ಹೆಣದ ಮುಂದೆ ಹೋಗಿ ಕುಳಿತುಕೊಂಡ. ಮರುಳನೆಂದು ಜನರು ಕರೆದರೂ ಮನುಷ್ಯತ್ವದಿಂದ ತನ್ನೊಡನೆ ನಡೆದುಕೊಂಡ. ಬುದ್ಧಿ ಇದ್ದವರನ್ನು ಕರೆ ತರಲು ಹೋದವ ಇನ್ನೂ ಬರಲಿಲ್ಲವಲ್ಲಾ ಎಂದುಕೊಳ್ಳುತ್ತಿದ್ದಂತೆ ದೂರದಲ್ಲಿ ಕೃಷ್ಣಪ್ಪ ಬರುತ್ತಿರುವುದು ಕಾಣಿಸಿತು. ಆದರೆ ಅವನ ಜೊತೆಯಲ್ಲಿ ಯಾರೂ ಕಾಣಿಸಲಿಲ್ಲ. ಬಂದವನೇ "ಸಾರಿ ಸಾರ್, ತಡವಾಯ್ತು ಎಂದು ಹೇಳಿ ತಾನು ತಂದಿದ್ದ ಚಿನ್ನಾ ಚಾರಿಯ ಇಕ್ಕುಳದಿಂದ ಡೆಡ್‌ಬಾಡಿಯ ಹತ್ತಿರ ಹೋದ. ಹೆಣದ ಮೂಗಿನಲ್ಲಿದ್ದ ಚಿನ್ನದ ನತ್ತನ್ನು ಬಿಡಿಸಿ ತೆಗೆದು ತನ್ನ ಪ್ಯಾಂಟಿನ ಜೇಬಿಗಿಳಿಸಿದ. ಮತ್ತೇನನ್ನೋ ತೆಗೆದು ಎರಡನ್ನೂ ಒಂದು ಕರವಸ್ತ್ರದಲ್ಲಿ ಕಟ್ಟಿ ಚಂದ್ರುವಿನ ಬಳಿಗೆ ಬಂದು "ಸಾರ್ ಇದು ನಮ್ಮ ತಾಯಿಯ ಕಿವಿಯ ಓಲೆಗಳು ಮತ್ತು ಮೂಗುಬೊಟ್ಟು ಈ ಗಂಟು ನಿಮ್ಮ ಜೇಬಿನಲ್ಲಿರಲಿ. ನಾನು ಕೇಳುವವರೆಗೂ ಕೊಡಬೇಡಿ" ಎಂದು ಹೇಳಿದ ಕೃಷ್ಣಪ್ಪ. ಚಂದ್ರುವಿಗೆ ಇಂತಹ ಸಮಯದಲ್ಲಿ ಅವನ ಕೃತ್ಯ ಅಸಹ್ಯವೆನಿಸಿತು. ವಿಧಿಯಿಲ್ಲ ಕರವಸ್ತ್ರವನ್ನು ತನ್ನ ಜೇಬಿಗಿಳಿಸಿದ.

"ಕೃಷ್ಣಪ್ಪನೋರೆ ನಿಮ್ಮ ಸೋದರರಾರೂ ಸಿಗಲಿಲ್ಲವೇ? ಒಬ್ಬರೇ ಬಂದ್ರಲ್ಲಾ" ಕೇಳಿದ ಚಂದ್ರು

"ಸಾರ್ ನೀವ್ಯಾವ ಕಾಲದಲ್ಲಿದ್ದೀರಿ, ನಮ್ಮ ತಾಯಿಯನ್ನು ಯಾರೂ ನೋಡಿಕೊಳ್ಳುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ನಾನೇ ಹೋಗಿ ನೋಡುತ್ತಿದ್ದದ್ದು. ಅವರ ಕಿವಿಯಲ್ಲಿನ ಓಲೆಗಳು ಮೂಗುಬೊಟ್ಟು ನನಗೇ ಸೇರಬೇಕು. ಅದಕ್ಕೇ ನಾನೀಗ ನನ್ನಮ್ಮನ ಮನೆಗೆ ಹೋಗಿದ್ದೆ. ಅಲ್ಲಿದ್ದ ರಾಗಿ ತುಂಬಿದ್ದ ಗೂಡೆಯಲ್ಲಿ ಓಲೆಗಳು ಸಿಕ್ಕಿದವು. ಹಾಗೇ ಮೂಗುಬೊಟ್ಟು ತೆಗೆಯಲು ಅಕ್ಕಸಾಲಿಗನ ಮನೆಗೆ ಹೋಗಿ ಇಕ್ಕಳ ತೆದುಕೊಂಡು ಬಂದೆ. ಎರಡನ್ನೂ ಈಗ ನನ್ನ ಬಳಿ ಬಂದೋಬಸ್ತು ಮಾಡಿಕೊಂಡೆ. ಬೆಳಗ್ಗೆಯಾದರೆ ಮುಗೀತು, ಏನೂ ಸಿಕ್ಕುತ್ತಿರಲಿಲ್ಲ. ನಮ್ಮಮ್ಮ ರಾಗಿ ಗೂಡೆಯಲ್ಲಿ ಓಲೆಗಳನ್ನಿಡುವುದನ್ನು ಕಂಡಿದ್ದೆ. ಅದಕ್ಕೇ ಈಗಲೇ ಹೋಗಿದ್ದು ಹುಡುಕಿ ತರಲು. ಇನ್ನು ಚಿಂತೆಯಿಲ್ಲ. ಜಮೀನು ಮನೆ ಮೂರೂ ಜನಕ್ಕೆ ಸೇರಿದ್ದು." ಇನ್ನು ಏನೋ ಹೇಳುತ್ತಿದ್ದುದನ್ನು ಕಂಡು ಚಂದ್ರುವಿಗೆ ನಖಶಿಖಾಂತ ಸಿಟ್ಟುಬಂದು "ರೀ ಕೃಷ್ಣಪ್ಪಾ ನಿಮ್ಮ ಪ್ರವರ ನಿಲ್ಲಿಸಿ, ನಿಮ್ಮ ಕಡೆಯವರಾರೂ ಸಿಗಲಿಲ್ಲವೇ? ಅವರೇನೆಂದರು?" ಎಂದು ಏರು ದನಿಯಲ್ಲಿ ಕೇಳಿದ.

"ಓ ಆ ವಿಷಯಾನಾ, ದೊಡ್ಡಣ್ಣನ ಮನೆಗೆ ಹೋದೆ. ಅವನಿಗೆ ವಿಷಯ ತಿಳಿಸುತ್ತಿದ್ದಂತೆ ಅವನು ಸಿಟ್ಟಿಗೆದ್ದು ಅಮ್ಮನ್ನ ಕರೆದುಕೊಂಡು ಹೋಗೂಂತ ನಿನಗೆ ಯಾರೋ ಹೇಳಿದ್ದು? ಸಾಯಿಸಿ ಕರೆತಂದ್ಯಾ, ನಾನು ಬರಲ್ಲಾ, ನೀನೇ ಹೆಣ ಕಾಯಿ? ಎಂದು ಮುಖಕ್ಕೆ ಹೊಡೆದ ಹಾಗೆ ಹೇಳಿ ಬಾಗಿಲನ್ನು ನನ್ನ ಮುಖದ ಮೇಲೆ ರಪ್ಪೆಂದು ಹಾಕಿಬಿಟ್ಟ, ಎರಡನೆಯವನು ವಿಷಯ ಕೇಳಿ "ಏನು ಅಮ್ಮ ಸತ್ತೋದಳೇ" ಆಸ್ಪತ್ರೆಗೆ ಯಾಕೋ ಕರೆದುಕೊಂಡು ಹೋದೆ. ಇಲ್ಲೇ ಇನ್ನು ಸ್ವಲ್ಪ ದಿನ ಇದ್ದಿದ್ದರೆ ಇಲ್ಲೇ ತೀರಿಹೋಗಿದ್ದಳು. ಸುಮ್ಮನೆ ವೃಥಾ ಖರ್ಚು, ಅದೆಲ್ಲ ನಾನಂತೂ ಕೊಡಲ್ಲ. ಸರಿಯಾಗಿ ಕೇಳಿಸಿಕೋ, ಆಸ್ತಿಭಾಗ ಆಗೋತನಕ ಹೆಣ ಎತ್ತಲಿಕ್ಕೆ ನಾನು ಬಿಡಲ್ಲ. ಸಂಸ್ಕಾರ ಹೇಗೆ ಮಾಡ್ತೀಯೋ ನಾನೂ ನೋಡ್ತೀನಿ." ಎಂದು ಅಬ್ಬರಿಸಿ ಬಾಗಿಲು ಹಾಕಿಕೊಂಡ ಇದೇಸಾರ್ ನಡೆದದ್ದು ಬೇಗ್ಗೆ ಬರ್ತೀನಿ. ನಖರಾ ಗಿಖರಾ ಮಾಡಿದ್ರೆ ಹುಟ್ಟಲಿಲ್ಲಂತ ಅನ್ನಿಸಿಬಿಡ್ತೀನಿ ಅಂತ ಮುಚ್ಚಿದ ಬಾಗಿಲಿನ ಹಿಂದಿನಿಂದ ಕೂಗಿ ಹೇಳಿದ ಸಾರ್ ಎಂದ ಕೃಷ್ಣಪ್ಪ

"ಹುಂ ನಿಮ್ಮ ಹಣೆಯಬರಹಕ್ಕೆ ನಾನೇ ಹೊಣೆ. ನನಗೂ ಬಂತಲ್ಲ ಹೆಣ ಕಾಯೋ ಗತಿ. ಹಿಂದೆಮುಂದೆ ನೋಡದೆ ನಿಮ್ಮ ಜೊತೆ ಬಂದಿದ್ದಕ್ಕೆ ನನ್ನ ಕರ್ಮ" ಎಂದು ಬೈದುಕೊಂಡು ಬೆಂಕಿಯ ಮುಂದೆ ಹೋಗಿ ಕುಳಿತುಕೊಂಡ ಚಂದ್ರು.

ಇನ್ನೇನು ಹೇಳುತ್ತಿದ್ದನೋ ನಿಲ್ಲಿಸಿ ಕೃಷ್ಣಪ್ಪ ಚೀಲದಿಂದ ಬಿಸ್ಕತ್ತು ಬಾಳೇಹಣ್ಣುಗಳನ್ನು ತೆಗೆದು ಚಂದ್ರುವಿನ ಮುಂದಿಟ್ಟು "ತಿನ್ನಿ ಸಾರ್, ತೊಗೊಳ್ಳಿ ಮನೆಯಿಂದ ಒಂದೆರಡು ಕಂಬಳಿ ತಂದಿದ್ದೇನೆ ಹೊದೆಯಿರಿ" ಎಂದು ಹೇಳಿದ.

"ಕೃಷ್ಣಪ್ಪಾ ನನಗೇನೂ ತಿನ್ನಬೇಕೆಂದು ಅನ್ನಿಸುತ್ತಿಲ್ಲ. ನಿಮ್ಮ ಆ ಮರುಳು ಮನುಷ್ಯ ನನಗೆ ಆಗಲೇ ಎರಡು ಬಾಳೆಹಣ್ಣು ತಂದು ಕೊಟ್ಟಿದ್ದ. ತಿಂದಿದ್ದೇನೆ. ನೀವು ಬೇಕಾದರೆ ತಿನ್ನಿ" ಎಂದು ಒಂದು ಕಂಬಳಿ ತೆಗೆದುಕೊಂಡು ಹೊದ್ದುಕೊಂಡು ಕುಳಿತ ಚಂದ್ರಪ್ಪ, ಅವರಮ್ಮನ ಹೆಣ ಮುಂದಿಟ್ಟುಕೊಂಡು ಕೃಷ್ಣಪ್ಪನ ಸೋದರರು ನಡೆದುಕೊಂಡ ರೀತಿಕೇಳಿ ಹೇಸಿಗೆಯಾಯಿತು. ಇಂಥ ಮಕ್ಕಳನ್ನು ಹೆತ್ತ ತಾಯಿಗೆ ಈ ದುರ್ಗತಿ ಸಹಜವೇ. ಬಂದಿದ್ದಾಗಿದೆ ಇನ್ನೇನು ಮಾಡಲಿಕ್ಕಾಗದು. ಬೆಳಗಾದ ಕೂಡಲೇ ಈ ಸ್ಥಳದಿಂದ ಪೇರಿ ಕೀಳಬೇಕೆಂದು ನಿರ್ಧರಿಸಿ ಕಣ್ಮುಚ್ಚಿದ. ಜೊಂಪು ಆವರಿಸಿತು.

ಚೆನ್ನಾಗಿ ಕಣ್ತೆರೆದಾಗ ಅಬ್ಬರದ ಕೂಗಾಟ ಕೇಳಿಸಿತು. ಆಗಲೇ ಬೆಳಕು ಹರಿದಿತ್ತು. ಊರಿನ ಕೆಲವು ಜನರೊಂದಿಗೆ ಬೀಸುಕಾಲಾಕುತ್ತಾ ಮಾತನಾಡಿಕೊಂಡು ಬರುತ್ತಿದ್ದವರನ್ನು ಗುರುತಿಸಿದ. ಅವರೇ ಕೃಷ್ಣಪ್ಪನ ಸೋದರರು. ರಾತ್ರಿ ನಡೆದ ಅವಾಂತರಗಳೆಲ್ಲ ನೆನಪಾಯಿತು. ಊರಿನ ಮುಖಂಡರೊಡನೆ ಬಂದಿದ್ದ ಅವರುಗಳು ತಮ್ಮ ವಾಗ್ಯುದ್ಧವನ್ನು ಮುಗಿಸಿ ಸಂಸ್ಕಾರ ಕಾರ್ಯಕ್ಕೆ ಮುಂದಾದರು. ಅದು ಮುಗಿಯುವುದಕ್ಕಾಗಿ ಕಾಯುತ್ತಿದ್ದ ಚಂದ್ರು ಮತ್ಯಾರಕಡೆಗೂ ನೋಡದೆ ಊರುಬಿಟ್ಟು ಬಸ್‌ಸ್ಟ್ಯಾಂಡಿಗೆ ನಡೆದು ಸಿಕ್ಕಿದ ಮೊದಲ ಬಸ್ಸಿನಲ್ಲಿ ಊರಿನ ಕಡೆಗೆ ಪ್ರಯಾಣಿಸಿದ ಕೃಷ್ಣಪ್ಪನಿಂದ ಎಷ್ಟೋ ಫೋನ್ ಕಾಲ್‌ಗಳು ಬಂದಿದ್ದವು. ಉತ್ತರಿಸುವ ಗೋಜಿಗೇ ಹೋಗಲಿಲ್ಲ.

ಎಂದಿನಂತೆ ದಿನ ನಿತ್ಯದ ಕೆಲಸ ಕಾರ್ಯಗಳಲ್ಲಿ ಮಗ್ನನಾದ ಚಂದ್ರಪ್ಪ ನಾಲ್ಕಾರು ದಿನಗಳ ನಂತರ ಕೃಷ್ಣಪ್ಪನ ಸವಾರಿ ಮನೆಗೆ ಬಂತು. ಮತ್ತೆ ಆಸ್ತಿ ಹಂಚಿಕೆ, ಮನೆ ಪಾಲುದಾರಿಕೆ ಬಗ್ಗೆ ಕೋರೆಯದೇ "ಸಾರ್ ಈಗೆಲ್ಲ ಸರಿಯಾಗಿದ್ದಾರೆ. ಹನ್ನೊಂದನೆಯ ದಿನದ ಕಾರ್ಯವಿದೆ ದಯವಿಟ್ಟು ಬರಬೇಕು" ಎಂದು ಕರೆದ.

ಎಲ್ಲವನ್ನೂ ಕೇಳಿದ ಚಂದ್ರು ನಿಮಗೆ ಒಳ್ಳೆಯದಾಗಲಿ ಎನ್ನುತ್ತಾ ತನಗೆ ಆದಿನ ಕೊಟ್ಟಿದ್ದ ಕರವಸ್ತ್ರದಲ್ಲಿ ಕಟ್ಟಿದ್ದ ಓಲೆಗಳು ಮತ್ತು ಮೂಗುಬೊಟ್ಟಿನ ಗಂಟನ್ನು ಕೃಷ್ಣಪ್ಪನಿಗೆ ಕೊಟ್ಟು ಕಳುಹಿಸಿದ. ಕಾರ್ಯಕ್ಕೆ ಹೋಗಲಿಲ್ಲ. ಈಗ ನೋಡಿದರೆ ಮತ್ತೆ ಕೃಷ್ಣಪ್ಪ ಬಂದಿದ್ದಾನೆ ಎಂದು ಆಲೋಚಿಸುತ್ತಿದ್ದಂತೆ "ಸಾರ್ ಯಾಕೆ ಸಾರ್, ಮುಂದಿನ ಬಾಗಿಲು ಹಾರುಹೊಡೆದು ಹೀಗೆ ಕುಳಿತಿದ್ದೀರಿ" ಎಂದು ಭುಜ ಹಿಡಿದು ಅಲ್ಲಾಡಿಸಿದಾಗಲೇ ಚಂದ್ರು ವಾಸ್ತವಕ್ಕೆ ಬಂದಿದ್ದು.

"ಓ ಕೃಷ್ಣಪ್ಪ ಬನ್ನಿ ಎಂದು ನನ್ನಾಕೆ ಪಕ್ಕದ ಮನೆಯವರೊಂದಿಗೆ ಮಾತನಾಡಲು ಬಾಗಿಲು ತೆರೆದು ಹೋಗಿರಬೇಕು. ನಾನಿಲ್ಲೇ ಇದ್ದೆನಲ್ಲ ಎಂಬ ಧೈರ್ಯ ಎಂದು ಹೇಳಿ" ಏನು ಬಂದದ್ದು ವಿಷಯ ಎಂದು ವಿಚಾರಿಸಿದ


"ಏನಿಲ್ಲ ಸಾರ್ ಮುಂದಿನ ವಾರ ನಮ್ಮ ತಾಯಿಯ ತಿಂಗಳ ತಿಥಿ, ಅದಕ್ಕೆ ತಮ್ಮನ್ನು ಕರೆಯಲು ಬಂದೆ ನಮ್ಮಮ್ಮನ ಹೆಣದೊಟ್ಟಿಗೆ ನನ್ನೊಡನೆ ಕಾಯುತ್ತಾ ಕುಳಿತಿದ್ದಿರಿ. ಶ್ರಾದ್ಧದ ದಿನ ಬಂದು ಧೂಪ ಹಾಕಿ ಅವರಿಗೆ ಶ್ರದ್ಧಾಂಜಲಿ ಕೋರಿದರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದಂತೆ. ನಮ್ಮ ನಂಬಿಕೆ ಸಾರ್" ಎಂದು ಹೇಳಿದ ಕೃಷ್ಣಪ್ಪ.

ಕೊನೆಯ ಮಾತನ್ನು ಒತ್ತುಕೊಟ್ಟು ಹೇಳಿದ್ದು ಕೇಳಿ ಚಂದ್ರುವಿಗೂ ಹೋಗಿ ಬರುವುದೇ ಸರಿಯೆನ್ನಿಸಿತು. "ಆಗಲಿ ಕೃಷ್ಣಪ್ಪ ಬರುತ್ತೇನೆ" ಎಂದು ಅವನನ್ನು ಬೀಳ್ಕೊಟ್ಟ.

ಕೃಷ್ಣಪ್ಪ ಹೇಳಿದ್ದ ದಿವಸಕ್ಕೆ ಸರಿಯಾಗಿ ಅವರೂರಿಗೆ ಹೋದ ಚಂದ್ರು, ಕೃಷ್ಣಪ್ಪನ ಸೋದರರು, ಬಂಧುಗಳೆಲ್ಲರೂ ಚಂದ್ರುವನ್ನು ಗೌರವಾದರಗಳಿಂದ ಬರಮಾಡಿಕೊಂಡರು. ಇಂತಹ ಮೂರು ಮಕ್ಕಳಿಗೆ ಜನ್ಮಕೊಟ್ಟು ಪೋಷಿಸಿದ ತಾಯಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಸರಿಯಾದದ್ದು ಎಂದುಕೊಂಡ. ಧೂಪ ಹಾಕಿ ಕೈಮುಗಿದು ಗತಿಸಿದವರ ಆತ್ಮಕ್ಕೆ ಶಾಂತಿಕೋರಿ ಭೋಜನ ಮುಗಿಸಿ ಮನೆಯಿಂದ ಹೊರಬಂದ ಚಂದ್ರು.

ಮಾಗಡಿಯ ಬಸ್ಸು ಹಿಡಿಯಲು ಹೊರಟವನ ಮನಸ್ಸಿನಲ್ಲಿ ಆ ದಿನದ ನೆನಪುಗಳು ಮರುಕಳಿಸಿದವು. ಕೃಷ್ಣಪ್ಪ ಓಲೆ ಮೂಗುಬೊಟ್ಟಿಗಾಗಿ ಅಪರಾತ್ರಿಯಲ್ಲಿ ಇಕ್ಕಳ ತಂದದ್ದು ಅವನ ಸೋದರರು ಆಸ್ತಿ ಪಾಲಾಗುವವರೆಗೂ ಹೆಣವನ್ನು ಸಂಸ್ಕಾರ ಮಾಡಲು ಬಿಡುವುದಿಲ್ಲ ಎಂದು ನಿಷ್ಠೂರವಾಗಿ ಹೇಳಿದ್ದು, ತಿಂಗಳೊಳಗೆ ಆಸ್ತಿ ಭಾಗವೆಲ್ಲವೂ ಸಮಸ್ಯೆಯಿಲ್ಲದಂತೆ ಬಗೆಹರಿಯಿತೇ? ಎಂಬ ಸಂದೇಹ, ಎಲ್ಲ ಪ್ರಶ್ನೆಗಳೂ ಒಂದರ ಮೇಲೊಂದು ಸುತ್ತಿಸುತ್ತಿ ಬರತೊಡಗಿದವು. ಬಸ್ಸಿನಲ್ಲಿ ಕುಳಿತಾಗ ನನಗೇಕೆ ಅಸಂಗತ ವಿಷಯಗಳ ಗೊಡವೆ. ಈಗೆಲ್ಲವೂ ಮುಗಿದಿದೆ. ಆಕೆಯೂ ಒಬ್ಬ ತಾಯಿ, ಅವಳ ಶವದೊಡನೆ ಕಾವಲು ಕುಳಿತದ್ದು ಅನಿವಾರ್ಯವಾಗಿತ್ತು ಅದೊಂದು ಮಾನವೀಯತೆಯ ಕೆಲಸ ಈ ದಿನ ಆಕೆಯ ಆತ್ಮಕ್ಕೆ ಶಾಂತಿಕೋರಿ ಶ್ರದ್ಧಾಂಜಲಿ ಸಲ್ಲಿಸಿದ್ದೇನೆ. ಉಳಿದ ವಿಚಾರಗಳು ನನಗೆ ಸಂಬಂಧಿಸಿದ್ದಲ್ಲ ಎಂದುಕೊಂಡು ನಿರಾಳವಾಗಿ ಊರಿನ ಕಡೆಗೆ ಪ್ರಯಾಣಿಸಿ ಮನೆ ಸೇರಿಕೊಂಡ ಚಂದ್ರು

> ದಾರಿಯಲ್ಲಿ ಹೆಣವನ್ನು ಗ್ರಾಮದೊಳಕ್ಕೆ ಅಥವಾ ಮನೆಗಾಗಲಿ ತೆಗೆದುಹೋಗುವಂತಿಲ್ಲ. ಇದನ್ನು ಕೃಷ್ಣಪ್ಪನಿಂದ ಕೇಳಿದಾಗ ಮುನ್ನೆಚ್ಚರಿಕೆಯಾಗಿ ದಾರಿಯಲ್ಲಿದ್ದ ಒಂದು ಅಂಗಡಿಯಲ್ಲಿ ಒಂದು ಟಾರ್ಚು ಮತ್ತು ಕೆಲವು ಬಾಳೆಹಣ್ಣು, ಒಂದು ಪ್ಯಾಕೆಟ್ ಬಿಸ್ಕಟ್, ಒಂದು ದೊಡ್ಡ ನೀರಿನ ಬಾಟಲಿಯನ್ನು ತೆಗೆದಿಟ್ಟುಕೊಂಡ ಚಂದ್ರು, ಕೃಷ್ಣಪ್ಪ ಪ್ರಯಾಣದ ವೇಳೆಯಲ್ಲಿ ಯಾರಾರಿಗೋ ಫೋನ್ ಮಾಡುತ್ತಿದ್ದ. ತನ್ನಲ್ಲೇ ಏನೋ ಗುಣಗುಣಿಸುತ್ತಿದ್ದ. ಚಿಂತಾಕ್ರಾಂತನಾಗಿದ್ದ.



ವಾರಭವಿಷ್ಯ

20.04.2025 ರಿಂದ 26.04.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಮಕರ, ಕುಂಭ, ಮೀನ, ಕುಜ-ಕಟಕ, ಬುಧ - ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.

ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಹೊಸ ಉದ್ಯೋಗ ಆರಂಭಿಸಲು ಅಥವಾ ಹೊಸ ಉದ್ಯೋಗಕ್ಕೆ ಸೇರಲು ಸಮಯ ಪ್ರಶಸ್ತವಾಗಿದೆ. ವಾರದ ಪೂರ್ವಾರ್ಧದಲ್ಲಿ ಚಂದ್ರ ಸಂಚಾರ ಶುಭವಿದ್ದು ಇಷ್ಟಾರ್ಥ ಸಿದ್ಧಿಯನ್ನು ಹೊಂದುವಿರಿ. ವ್ಯಾಪಾರ ವ್ಯವಹಾರಗಳ ಮಂದಗತಿಯಲ್ಲಿ ಸಾಗಿದರೂ ಲಾಭವನ್ನು ನಿರೀಕ್ಷಿಸಬಹುದು. ವ್ಯಯಸ್ಥಾನದಲ್ಲಿ ಪಂಚಗ್ರಹಗಳು ಇರುವ ಕಾರಣ, ದುಡುಕಿನ ಮಾತು, ನಿಮಗೆ ತಿರುಗುಬಾಣವಾದೀತು.

ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕೃಷಿಕರಿಗೆ ನಿರೀಕ್ಷಿತ ಬೆಳೆ ಬರುವುದು. ಪಶುಪಾಲಕರಿಗೆ ಆದಾಯಕ್ಕೆ ಕೊರತೆ ಇರುವುದಿಲ್ಲ. ವಾರದ ಆದಿಗೆ ಆಪ್ತೇಷ್ಟರ ಮಿಲನ. ಅವರ ಸತ್ಕಾರಕ್ಕೆ ಧಾರಾಳ ಹಣ ವ್ಯಯ. ಕೆಲವರಿಗೆ ವೃತ್ತಿ ಬದಲಾವಣೆ ಆಗುವುದು. ಆರೋಗ್ಯದಲ್ಲಿ ವ್ಯತ್ಯಯ. ವೈದ್ಯಕೀಯ ಖರ್ಚುಗಳು, ವಾಹನ ರಿಪೇರಿ ಖರ್ಚುಗಳೂ ಬರುವುದು. ವಾರದ ಅಂತ್ಯಕ್ಕೆ ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವೈಯಕ್ತಿಕ ಕೆಲಸಗಳಲ್ಲಿ ವಿಘ್ನಗಳು ಉಂಟಾದರೂ ಗುರಿ ಮುಟ್ಟುವಿರಿ. ಹಿರಿಯರ ಸಲಹೆ ಗೌರವಿಸಿದರೆ ಶುಭವಾಗುವುದು. ಖಾಸಗಿ ಉದ್ಯೋಗಿಗಳಿಗೆ ಹೆಚ್ಚಿನ ಜವಾಬ್ದಾರಿಯೊಂದಿಗೆ ವರಮಾನದಲ್ಲಿ ಹೆಚ್ಚಳ. ಟ್ರಾವೆಲ್ಸ್ ಸಂಸ್ಥೆಗಳಿಗೆ ಹೆಚ್ಚಿನ ದೂರ ಪ್ರಯಾಣಗಳು ಹಾಗೂ ಆದಾಯದಲ್ಲಿ ಹೆಚ್ಚಳ. ಹೊರಗಡೆ ಹೋದಾಗ ಆಹಾರ-ವಿಹಾರಗಳಲ್ಲಿ ಸಂಯಮವಿರಲಿ. ಕುಟುಂಬ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಿ.

ಶ್ರೀ ಅಷ್ಟಾಕ್ಷರಿ ಮಂತ್ರ ಪಠಿಸಿ. ಶುಭ ಸಂಖ್ಯೆ-1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಉದ್ಯೋಗ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಪ್ರೀತಿ ಪಾತ್ರರ ಮಿಲನದಿಂದ ಹರ್ಷಿತರಾಗುವಿರಿ. ಧನಾತ್ಮಕವಾಗಿ ಚಿಂತಿಸಿದರೆ ಸಾಧನೆಯ ಮಾರ್ಗ ಗೋಚರಿಸುವುದು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮ ವಿಶ್ವಾಸದಿಂದ ಎದುರಿಸಿ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವುದು. ವಾರದ ಕಡೆಗೆ ಅನಿರೀಕ್ಷಿತ ಖರ್ಚುಗಳು ಎದುರಾಗುವುದು. ಮಕ್ಕಳಿಗೆ ಅಭ್ಯುದಯ.

ಶ್ರೀ ದುರ್ಗಾ ಪರಮೇಶ್ವರಿ ದರ್ಶನ. ಶುಭ ಸಂಖ್ಯೆ-8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿತ್ಯ ಜೀವನದ ಘಟನೆಗಳು ನಿಮಗೆ ಅನುಕೂಲಕರವಾಗಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂದೆ ಬೀಳದಿರಿ. ವಿಶ್ವಾಸಪಾತ್ರ ವ್ಯಕ್ತಿಯಿಂದ ಮಹತ್ವದ ಯೋಜನೆ ಸಫಲವಾಗುವುದು. ಉನ್ನತ ಶಿಕ್ಷಣಾರ್ಥಿಗಳಿಗೆ ಸುಸಮಯವಾಗಿದೆ. ಡ್ರೈವಿಂಗ್ ಮಾಡುವಾಗ ಸಂಚಾರಿ ನಿಯಮ ಪಾಲಿಸಿ, ಮುಂದಾಗುವ ಅನಾಹುತಗಳಿಂದ ಪಾರಾಗಿ. ವಾರದ ಕಡೆಗೆ ಪಿಕ್‌ನಿಕ್ ಜೊತೆಗೆ ಧರ್ಮಕ್ಷೇತ್ರ ಸಂದರ್ಶನ, ನದಿ ಸ್ನಾನ.

ಶ್ರೀ ಗಣಪತಿ ಅರ್ಚನೆ, ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಮನೆಯಲ್ಲೂ, ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಐಹಿಕ ಸುಖ ಭೋಗಗಳು ನಿಮ್ಮನ್ನು ಅರಸಿ ಬರಲಿದೆ. ಮಕ್ಕಳ ಸಾಧನೆಯಿಂದ ಹರ್ಷ. ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸು ಲಭಿಸುವುದು. ನೂತನ ವಾಹನ ಕೊಳ್ಳುವ ಕನಸು ನನಸಾಗಲಿದೆ. ಪ್ರೇಮ ಪ್ರಸಂಗಗಳಲ್ಲಿ ಸಂತಸ ದೊರೆಯುವುದು. ವಿವಾಹ ಯೋಗ್ಯರಿಗೆ ನಿಶ್ಚಿತಾರ್ಥ ಆಗುವ ಸಂಭವವಿದೆ. ದೂರ ಪ್ರವಾಸಗಳು ಉಂಟಾಗಲಿದೆ.

ಶ್ರೀ ಶ್ರೀನಿವಾಸಸ್ವಾಮಿ ದರ್ಶನ. ಶುಭ ಸಂಖ್ಯೆ-3

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಆರ್ಥಿಕ ಸ್ಥಿರತೆಯನ್ನು ಸಾಧಿಸಲು ದೈವಬಲ ಬೇಕೆಂದರೆ ಪುರುಷ ಪ್ರಯತ್ನವೂ ಬೇಕು. ನಿಮ್ಮ ಕೆಲಸದಲ್ಲಿ ಆತ್ಮವಿಶ್ವಾಸದ ಕೊರತೆ ಅಡ್ಡಿಯಾಗಬಹುದು. ವೃತ್ತಿಪರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವನ್ನು ಹೊಂದುವಿರಿ. ಆಧ್ಯಾತ್ಮ ಅಧ್ಯಯನದ ಬಗ್ಗೆ ಒಲವನ್ನು ತೋರುವಿರಿ. ಲೆಕ್ಕ ಪರಿಶೋಧಕರಿಗೆ ಹೆಚ್ಚಿನ ಕಕ್ಷಿದಾರರು ದೊರೆತು ಕೈ ತುಂಬಾ ಕೆಲಸವೂ ಧನ ಸಂಪಾದನೆಯೂ ಆಗುವುದು.

ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಗುರುಕೃಪೆಯಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆಯೇನೂ ಆಗದು. ಶುಭ ಕಾರ್ಯಕ್ಕೆ ಪ್ರೇರಣೆ ಆಗುವುದು. ಅಧಿಕಾರಿಗಳ ಭೇಟಿಯಿಂದ ನಿಮ್ಮ ಬಹು ನಿರೀಕ್ಷಿತ ಕೆಲಸ ಅನುಕೂಲವಾಗಿ ಸಂಪನ್ನವಾಗುವುದು. ವಾರ ಮಧ್ಯೆ ಜೀವನ ಸ್ವಲ್ಪ ಒತ್ತಡಭರಿತವಾಗುತ್ತದೆ. ಅನವಶ್ಯಕ ಸಂಚಾರಗಳು ಸಂಚಕಾರ ತರುವುದು. ಆಸ್ತಿ ವಿಚಾರಗಳು ಇತ್ಯರ್ಥವಾಗದೆ ಮಾನಸಿಕ ಬೇಸರ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-4

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಬಂಧು-ಮಿತ್ರರ ಸಹಾಯದಿಂದ ಕೌಟುಂಬಿಕ ಸಮಸ್ಯೆಗೆ ಪರಿಹಾರ ದೊರಕುವುದು. ಮುಖ್ಯ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಪೂರೈಸಿಕೊಳ್ಳಿ. ಉದ್ಯಮಪತಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ವ್ಯಾಪಾರ ಕುಂಠಿತವಾಗುವುದು. ಸ್ವಯಂಕೃತ ಅಪರಾಧಗಳಿಂದ ಚಿಂತೆಗೀಡಾಗುವಿರಿ. ಕೆಲವರು ತೆರೆಮರೆಯ ಕೆಲಸಗಳಿಂದ ತಲೆ ಬಿಸಿಯಾಗುವುದು. ಸಪ್ತಾಹದ ಕಡೆಗೆ ದೇವತಾ ಉತ್ಸವಾದಿಗಳಲ್ಲಿ ಭಾಗಿಯಾಗುವಿರಿ.

ಶ್ರೀ ರಾಘವೇಂದ್ರ ಪೂಜಿಸಿ. ಶುಭ ಸಂಖ್ಯೆ-2

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಸಾಡೇ ಸಾತಿ ಶನಿಕಾಟ ಮುಕ್ತಾಯವಾಗಿದೆ. ಸದ್ಯ ಗುರುಬಲವೂ ಇದೆ. ಅಂದುಕೊಂಡಿದ್ದನ್ನು ಸಾಧಿಸಲು ಸುಸಮಯವಾಗಿದೆ. ಧನ-ದಾನ-ಲಾಭ, ಸುಖ ಭೋಜನ, ಉತ್ತಮ ಸ್ತ್ರೀ ಸಂಗಗಳು ದೊರೆಯಲಿದೆ. ಹೊಸ ಉದ್ಯಮ ಸ್ಥಾಪನೆಯ ಪ್ರಯತ್ನದಲ್ಲಿ ಪ್ರಗತಿಯನ್ನು ಕಾಣುವಿರಿ. ಧರ್ಮಾರ್ಥಗಳಿಗಾಗಿ ಹಣ ಸಂದಾಯವಾಗುವುದು. ಮಹತ್ವದ ಕೆಲಸಗಳಿಗೆ ಕಾನೂನು ಸಲಹೆ ಪಡೆದು ಮುಂದುವರೆಯಿರಿ.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ದೇಹಸೌಖ್ಯ, ಕೆಲವರಿಗೆ ಆಸ್ಪತ್ರೆಯಿಂದ ಬಿಡುಗಡೆ. ವಿವಿಧ ಮೂಲಗಳಿಂದ ಹಣ ದೊರೆತು ಕಾರ್ಯಾನುಕೂಲ. ಭವಿಷ್ಯದ ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು. ಉತ್ತಮ. ಸಂದರ್ಭೋಚಿತ ಮಾತಿನಿಂದ ನಿಮ್ಮ ಕೆಲಸ ಹಗುರವಾಗುವುದು. ಯಾರಲ್ಲಿಯೂ ದ್ವೇಷಸಾಧನೆ ಮಾಡಬೇಡಿ. ಫ್ಯಾನ್ಸಿ ಪದಾರ್ಥ ಹಾಗೂ ಉಡುಗೊರೆ ಪದಾರ್ಥ ವ್ಯಾಪಾರಸ್ಥರಿಗೆ ಭರಪೂರ ವ್ಯಾಪಾರವಾಗುವುದು.

ಶ್ರೀ ಲಿಂಗಕ್ಕೆ ಬಿಲ್ವಪತ್ರೆ ಸಮರ್ಪಣೆ, ಶುಭ ಸಂಖ್ಯೆ-1

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಚಂದ್ರಗ್ರಹ ಸಂಚಾರ ಶುಭವಿದೆ. ಸಾಮಾಜಿಕ ಗೌರವಾದರಗಳಿಗೆ ಪಾತ್ರರಾಗುವಿರಿ. ವ್ಯಾಪಾರ, ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡುಬರುವುದು. ಹಾಗೂ ಹೇರಳ ಧನಲಾಭವಾಗುವುದು. ನಂಬಿಕಸ್ಥ ಹಿರಿಯ ವ್ಯಕ್ತಿಯಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಮನೋರಂಜನ ಹಾಗೂ ಪ್ರಸಾಧನ ವಸ್ತು ವೆಚ್ಚಗಳು ಹೆಚ್ಚಾಗುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನ ನೀರಿನ ಹತ್ತಿರ ಹುಡುಗಾಟ ಸಲ್ಲದು.

ಶ್ರೀ ವೆಂಕಟೇಶ್ವರ ಅರ್ಚನೆ. ಶುಭ ಸಂಖ್ಯೆ-7

ಮೈಸೂರು ಮಿತ್ರ ಭಾನುವಾರ 20 ಏಪ್ರಿಲ್ 2025

ಮುಖ್ಯ ಕಾಲುವೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಸಿ ಕ್ಷೇತ್ರದ ಋಣ ತೀರಿಸಿರುವೆ

ಹುಣಸೂರಿನ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹೇಳಿಕೆ

ಹುಣಸೂರು, ಏ.19– ಕ್ಷೇತ್ರದ ಜನತೆಗೆ ಕೊಟ್ಟ ಮಾತಿನಂತೆ ತಾಲೂಕಿನ ರೈತರ ಒತ್ತಾಸೆಯಾದ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಳ ಅಭಿವೃದ್ಧಿ ಕಾಮಗಾರಿಗೆ ಸರ್ಕಾರದ ಮೇಲೆ ಒತ್ತಡ ತಂದು ಅನುದಾನ ಬಿಡುಗಡೆ ಮಾಡಿಸುವ ಮೂಲಕ ನನ್ನ ಋಣವನ್ನು ತೀರಿಸಿದ್ದೇನೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಪತ್ರಿಕಾ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಅವಧಿಯಲ್ಲಿ ಕ್ಷೇತ್ರದ ಜನತೆಗೆ ಮತ್ತು ರೈತಾಪಿ ಜನರಿಗೆ ನೀಡಿದ ಭರವಸೆಯಂತೆ ಎಲ್ಲ ಕೆಲಸಗಳನ್ನು ಮಾಡಿದ್ದು, ತಾಲೂಕಿನ ನೀರಾವರಿಯ ಎಲ್ಲ ಜಲ ಮೂಲಗಳನ್ನು ಅಭಿವೃದ್ಧಿಪಡಿಸುವುದಾಗಿ ಮಾತು ನೀಡಿದ್ದೆ. ಅದರಂತೆ ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಸರ್ಕಾರದ ಮೇಲೆ ಒತ್ತಡ ಹಾಕಿ ಕಾವೇರಿ ನೀರಾವರಿ ನಿಗಮದಿಂದ ಇಂದು ತಾಲೂಕಿನ ಪ್ರಮುಖ ನೀರಾವರಿ ಮೂಲದ ಕಾಲುವೆಗಳ ಅಭಿವೃದ್ಧಿಗಾಗಿ ರೂ.139.85 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿಸಿದ್ದೇನೆ. ಈ ಮೂಲಕ ಕ್ಷೇತ್ರದ ಜನತೆಗೆ ನಾನು ಕೊಟ್ಟ ಮಾತಿನಂತೆ ಕಟ್ಟಕಡೆಯ ಋಣವನ್ನು ತೀರಿಸಿದ್ದೇನೆ ಎಂದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್.

ತಾಲೂಕಿನ ಕಟ್ಟೆಮಳಲವಾಡಿ ಕಾಲುವೆ ಅಭಿವೃದ್ಧಿಗೆ 49.85 ಕೋಟಿ ರೂ., ವಡಕೆ ಕಟ್ಟೆ ಮರೂರು ಕಾವಲ್ ಕಾಲುವೆ ಅಭಿವೃದ್ಧಿಗೆ ರೂ.49.85 ಕೋಟಿ ರೂ. ಸೇರಿದಂತೆ ಒಟ್ಟು 139.86 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿಸಿದ್ದೇನೆ. ತಾಲೂಕಿನ ಯಾವುದೇ ಅಭಿವೃದ್ಧಿ ಕೆಲಸಗಳಿಗೆ ನಾನು ತಡೆ ಒಡ್ಡಿಲ್ಲ, ಬದಲಾಗಿ ಕ್ಷೇತ್ರದ ಜನತೆ ಅನುಕೂಲವಾಗುವಂತಹ ಅನೇಕ ಜನಪರ ಕೆಲಸಗಳನ್ನು ಮಾಡಿದ್ದೇನೆ ಎಂದರು.

ಹೈಟೆಕ್ ಆಸ್ಪತ್ರೆ ಮತ್ತು ಅರಸು ಭವನ ಉದ್ಘಾಟನೆ ಮತ್ತು ಉಳಿದ ಕಾಮಗಾರಿಗಳ ವಿಳಂಬದ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ನನ್ನ ಅವಧಿಯಲ್ಲಿ ಹೈಟೆಕ್ ಆಸ್ಪತ್ರೆ ಉಳಿದ ಕಾಮಗಾರಿಗೆ 2 ಕೋಟಿ ಕ್ರಿಯಾ ಯೋಜನೆ ಕಳುಹಿಸಿದ್ದು, ತಾಂತ್ರಿಕ ಕಾರಣಗಳಂದ ಅನುಮೋದನೆ ಸಿಗಲಿಲ್ಲ. ನಂತರ 1.92 ಕೋಟಿ ರೂ.ಗೆ ಕಳುಹಿಸಿದಾಗ ಅನುಮೋದನೆ ಸಿಕ್ಕಿತ್ತು. ಆದರೆ ಅಷ್ಟರಲ್ಲಿ ಚುನಾವಣೆ ಬಂದು ಕಾಮಗಾರಿಗಳು ವಿಳಂಬವಾಯ್ತು. ಅದರೆ ಈಗ ಸಾಕಷ್ಟು ಅನುದಾನ ಬಂದಿದೆ. ಕಾಮಗಾರಿಯು ಸಹ ನಡೆಯುತ್ತಿದೆ. ಜೊತೆಗೆ ಅರಸು ಭವನದ ಕಾಮಗಾರಿಯು ನಡೆಯುತ್ತಿದ್ದು, ಸದ್ಯದಲ್ಲೆ ಪೂರ್ಣಗೊಳ್ಳಲಿದೆ. ಇಲಾಖೆಯ ತಾಂತ್ರಿಕ ವಿಳಂಬಕ್ಕೆ ನನ್ನ ಮೇಲೆ ಗೂಬೆ ಕೂರಿಸಬಾರದು ಎಂದರು.

ಅರಸು ಭವನಕ್ಕೆ ಸ್ಥಳಾಂತರ: ತಾಲೂಕು ಕಚೇರಿಯ ಮಿನಿ ವಿಧಾನಸೌದ ಕಟ್ಟಡ ಶಿಥಿಲಗೊಂಡಿದ್ದು, ಸದರಿ ಕಟ್ಟಡದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಕಚೇರಿಗಳನ್ನು ಖಾಸಗಿ ಕಟ್ಟಡಗಳಿಗೆ ಸ್ಥಳಾಂತರಿಸಿ ಬಾಡಿಗೆ ಕಟ್ಟುವ ಬದಲು ಎರಡು ವರ್ಷಗಳ ಅವಧಿಗೆ ಅರಸು ಭವನಕ್ಕೆ ಸ್ಥಳಾಂತರಿಸಿ ಶಿಥಿಲಗೊಂಡಿರುವ ತಾಲೂಕು ಕಚೇರಿಯ ಮಿನಿ ವಿಧಾನಸೌಧ ಕಟ್ಟಡವನ್ನು ಕೆಡವಿ ಹೊಸದಾದ ಬೃಹತ್ ಕಟ್ಟಡವನ್ನು ನಿರ್ಮಿಸಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬ್ಲಾಕ್ ಅಧ್ಯಕ್ಷ ಟಿ.ವಿ.ನಾರಾಯಣ್, ಕಾರ್ಯಾಧ್ಯಕ್ಷ ಪುಟ್ಟರಾಜು, ಮಾಜಿ ಜಿ.ಪಂ ಸದಸ್ಯ ಡಿ.ಕೆ.ಕುನ್ನೇಗೌಡ, ಚಿಕ್ಕಸ್ವಾಮಿ, ಸಿಬಿಟಿ ಕಾಲೋನಿ ಸೊಸೈಟಿಯ ಅಧ್ಯಕ್ಷ ಕುಪ್ಪುಸ್ವಾಮಿ ಬಾಗವಹಿಸಿದರು.

ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಇಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬ ಆಚರಣೆ



ತಿ.ನರಸೀಪುರ, ಏ.19– ರಾಜ್ಯ ಕಂಡ ಧೀಮಂತ ನಾಯಕರು ಹಾಗೂ ಕ್ಷೇತ್ರದ ಶಾಸಕರು, ಸಮಾಜ ಕಲ್ಯಾಣ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬವನ್ನು ಭಾನುವಾರ(ಏ.20) ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮಹದೇವಪ್ಪರವರು ರಾಜ್ಯ ಕಂಡ ಧೀಮಂತ ನಾಯಕರು, ಕ್ಷೇತ್ರ ಹಾಗೂ ರಾಜ್ಯದಲ್ಲಿ ಅಭಿವೃದ್ಧಿ ಪರ್ವವನ್ನೇ ಮಾಡಿರುವ ಅವರಿಗೆ ನಾಳೆ(ಏ.20) ಹುಟ್ಟುಹಬ್ಬದ ಸಂಭ್ರಮ. ಹಾಗಾಗಿ ನಾಳೆ ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಮುಖಂಡರು ಸೇರಿ ಅವರ ಹುಟ್ಟುಹಬ್ಬ ಆಚರಿಸಲು ನಿರ್ಧರಿಸಿದ್ದಾರೆ ಎಂದರು.

ಮೊದಲಿಗೆ ಪಟ್ಟಣದ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಚಿವರ ಹೆಸರಿನಲ್ಲಿ ಅಭಿಷೇಕದೊಂದಿಗೆ ವಿಶೇಷ ಪೂಜೆ ಮಾಡಿ ಆಯಸ್ಸು ವೃದ್ಧಿಗೆ ಪ್ರಾರ್ಥಿಸಲಾಗುತ್ತದೆ. ನಂತರ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಹೊರರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ ನಂತರ ಕಾಂಗ್ರೆಸ್ ಕಚೇರಿಯಲ್ಲಿ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬವನ್ನು ಆಚರಿಸಲಾಗುತ್ತದೆ, ಈ ವೇಳೆ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.


ತಿ.ನರಸೀಪುರ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಸೋಸಲೆ ಪಿಎಸಿಸಿ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿದರು.

ಎಸ್‌ಸಿ/ಎಸ್‌ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ ಮಾತನಾಡಿ, ನಂಜನಗೂಡು ತಾಲೂಕು ಹದಿನಾರು ಗ್ರಾಮದಲ್ಲಿ ಜನಿಸಿದ ಮಹದೇವಪ್ಪರವರ ರಾಜಕೀಯ ಜೀವನವೇ ವರ್ಣಮಯ, ರಾಜಕೀಯ ರಂಗಕ್ಕೆ ಕಾಲಿರಿಸಿದ ನಂತರ 2ನೇ ಬಾರಿಗೆ ಗೆದ್ದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಟಿ.ನರಸೀಪುರದಲ್ಲಿ ಹೆಂಚಿನ ಮನೆಯಂತಿದ್ದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಮೂಲಕ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ದೊರಕಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಎರಡನೇ ಬಾರಿ ಗ್ರಾಮೀಣಾಭಿವೃದ್ಧಿ ಸಚಿವರಾದ ವೇಳೆ ಎಸ್‌ಸಿಪಿ/ಟಿಎಸ್‌ಪಿ ಕಾನೂನು ಜಾರಿಗೊಳಿಸಿ ದಲಿತರ ಬೀದಿಗಳನ್ನು ಕಾಂಕ್ರೀಟಿಕರಣ ಮಾಡಿದ್ದು, 3ನೇ ಬಾರಿ ಪಿಡಬ್ಲ್ಯೂಡಿ ಸಚಿವರಾಗಿ ಇಡೀ ರಾಜ್ಯದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ರಸ್ತೆರಾಜ ಎಂಬ ಬಿರುದು ಪಡೆದು ವಿರೋಧ ಪಕ್ಷದವರಿಂದಲೂ ಮೆಚ್ಚುಗೆ ಪಡೆದುಕೊಂಡಿದ್ದ ಸಚಿವರು ಸಮಾಜ ಕಲ್ಯಾಣ ಸಚಿವರಾದ ನಂತರ ಎಲ್ಲ ಶಾಲೆಗಳಲ್ಲಿ ಸಂವಿಧಾನ ಪೀಠಿಕೆ ಅಳವಡಿಸಿದ್ದು, ಸದಾಕಾಲ ರಾಜ್ಯದ ಅಭಿವೃದ್ಧಿ ಕಡೆ ಚಿಂತನೆ ಮಾಡುವ ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ದೊರಕಿ ರಾಜ್ಯದಲ್ಲಿ ಮತ್ತಷ್ಟು ಸೇವೆ ಮಾಡುವಂತಾಗಲಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಗ್ರಾಪಂ. ಮಾಜಿ ಅಧ್ಯಕ್ಷ ಕನ್ನಳ್ಳಿ ಲಕ್ಷ್ಮಣ, ಕಲಿಯೂರು ಗ್ರಾಪಂ ಸದಸ್ಯ ಶಿವಣ್ಣ ಹಿಂದುಳಿದ ವರ್ಗಗಳ ಅಧ್ಯಕ್ಷ ಕೇತಹಳ್ಳಿ ಸಿದ್ದಶೆಟ್ಟಿ, ಮುಖಂಡರಾದ ಸಿದ್ದರಾಜು, ಶಿವರಾಜ್ ಹಾಜರಿದ್ದರು.

ಬನ್ನೂರಲ್ಲಿ ಎಸ್‌ಬಿಐ ವಿರುದ್ಧ ರೈತರ ಪ್ರತಿಭಟನೆ

ಬನ್ನೂರು: ಪಟ್ಟಣದ ರೈತರು ಆಭರಣದ ಮೇಲೆ ಕೃಷಿ ಸಾಲ ಪಡೆದಿದ್ದು, ಸಾಲದ ಅವಧಿ ಮುಗಿದಿರುವ ರೈತರಿಗೆ ಶಾಖೆಯಲ್ಲಿ ಬಡ್ಡಿ ಕಟ್ಟಿಸಿಕೊಂಡು ಹೊಸ ಸಾಲವಾಗಿ ನವೀಕರಣ ಮಾಡಿಕೊಡುತ್ತಿದ್ದರು, ಆದರೆ ಈಗ ಅಸಲು–ಬಡ್ಡಿ ಸೇರಿಸಿ ಕಟ್ಟಬೇಕೆಂದು ಎಸ್‌ಬಿಐ ನೋಟೀಸ್ ನೀಡಿ ರೈತರಿಗೆ ಕಿರುಕುಳ ನೀಡುತ್ತಿದ್ದು ತುಂಬಾ ಸಮಸ್ಯೆಯಾಗುತ್ತಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಬನ್ನೂರು ಗ್ರಾಮಾಂತರ ಘಟಕದ ಪದಾಧಿಕಾರಿಗಳು ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಎಸ್‌ಬಿಐ ಬ್ಯಾಂಕ್ ಶಾಖೆ ಮುಂದೆ ಶನಿವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದ ಬನ್ನೂರು ಗ್ರಾಮಾಂತರ ಘಟಕದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಬ್ಯಾಂಕ್ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ರೈತರಿಗೆ ಯಾವುದೇ ಸಂಬಳ ಬರುವುದಿಲ್ಲ, ಮಾಸಿಕ ಹಾಗೂ ತ್ರೈಮಾಸಿಕ ಆದಾಯ ಬರುವುದಿಲ್ಲ, ಅಲ್ಲದೆ ಬರಗಾಲ, ಅತಿವೃಷ್ಟಿ, ಅನಾವೃಷ್ಟಿ ಹಾಗೂ ಹವಾಮಾನ ವೈಪರೀತ್ಯದಿಂದ ಬೆಳೆ ಬೆಳದರೂ ಕೈಗೆ ಸಿಗದಂತಾಗಿದ್ದು, ರೈತರು ಹಲವಾರು ಸಮಸ್ಯೆಗಳಿಗೆ ಸಿಲುಕಿ ಜೀವನ ನಿರ್ವಹಣೆ ನಡೆಸುವುದೇ ಕಷ್ಟವಾಗಿದೆ ಎಂದು ತಿಳಸಿದರು.



ಬನ್ನೂರು ಎಸ್‌ಬಿಐ ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸುತ್ತಿರುವ ರೈತರು.

ಬ್ಯಾಂಕ್‌ನ ಈ ರೀತಿಯ ಕಿರುಕುಳದಿಂದ ರೈತರು ಆತ್ಮಹತ್ಯೆ ದಾರಿ ಹಿಡಿಯುವಂತಾಗಿದೆ ಆದ್ದರಿಂದ ಬಂಗಾರದ ಅಭರಣಗಳ ಸಾಲದ ಮೇಲೆ ಹಾಗೂ ಇತರೆ ಸಾಲಗಳ ಮೇಲಿನ ಬಡ್ಡಿ ಕಟ್ಟಿಸಿಕೊಂಡು ರಿನಿವಲ್ ಮಾಡಿಕೊಡುವಂತೆ ಒತ್ತಾಯಿಸಿ ಮನವಿ ಪತ್ರವನ್ನು ಬನ್ನೂರಿನ ಬ್ಯಾಂಕ್ ಶಾಖೆ ವ್ಯವಸ್ಥಾಪಕರಿಗೆ ಸಲ್ಲಿಸಿ ಉಪ ಪ್ರಧಾನ ವ್ಯವಸ್ಥಾಪಕರು ಮೈಸೂರು ಇವರಿಗೆ ಸಲ್ಲಿಸುವಂತೆ ತಿಳಿಸಿದರು.

ತಾಲೂಕು ಉಪಾಧ್ಯಕ್ಷ ಹೆಗ್ಗೂರು ರಂಗರಾಜು, ಬನ್ನೂರು ಗ್ರಾಮಾಂತರ ಘಟಕದ ಮುಖಂಡರುಗಳಾದ ಅತ್ತಹಳ್ಳಿ ಸಿ ಲಿಂಗಣ್ಣ, ಅತ್ತಹಳ್ಳಿ ಅರುಣ್ ಕುಮಾರ್, ಬನ್ನೂರು ಸೂರಿ, ಪಿ ಚೇತನ್, ಎ.ಎಂ.ರಾಮಕೃಷ್ಣ, ಕುಂತನಹಳ್ಳಿ ಕುಳ್ಳೆಗೌಡ, ರಾಮ, ಎ.ಪಿ.ನವೀನ, ಹೊನ್ನಯ್ಯ, ಚಾಮನಹಳ್ಳಿ ನಿಂಗಣ್ಣ, ಕರಿಯಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ನಂಜನಗೂಡು, ಏ.19– ಕಡಕೊಳ, ಆಯರಳ್ಳಿ, ವಾಜಮಂಗಲ ಮಾರ್ಗ ಮಧ್ಯ ಗೋಪುರ ಅಳವಡಿಸುವ ಕಾರ್ಯ ಇರುವುದರಿಂದ ಏ.21, 23, 25 ರಂದು ತಾಲೂಕಿನ ತುಂನೇರಳೆ, ಹೊಸಕೋಟೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳು ಮತ್ತು ಹದಿನಾರು ಗ್ರಾಪಂನ ಹದಿನಾರು, ಹದಿನಾರುಮೊಳೆ, ಮಲ್ಲರಾಜನಹುಂಡಿ, ಗ್ರಾಮಗಳು, ನಂದಿಗುಂದಪುರ, ಮರಡಿಹುಂಡಿ ಕುರಟ್ಟಿಕಾವಲ್ ಪ್ರದೇಶಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಪರಿಚಿತ ಮಹಿಳೆ ಶವ ಪತ್ತೆ

ನಂಜನಗೂಡು: ತಾಲೂಕಿನ ಕನಕನಗರ ಬಳಿ ಇರುವ ಕಪಿಲಾ ನದಿಯಲ್ಲಿ ಅಪರಿಚಿತ ಹೆಂಗಸಿನ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸುಮಾರು 55 ರಿಂದ 60 ವರ್ಷ, 5 ಅಡಿ ಎತ್ತರ, ಬಿಳಿ ಕಪ್ಪು ತಲೆ ಕೂದಲು, ಹೂವಿನ ಚಿತ್ರವಿರುವ ಗುಲಾಬಿ ಬಣ್ಣದ ಸೀರೆ ಮತ್ತು ರವಿಕೆ ಇರುತ್ತದೆ, ವಾರಸುದಾರರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ 08221–226259ಗೆ ಸಂಪರ್ಕಿಸಲು ಕೋರಲಾಗಿದೆ.

ದುಗ್ಗಹಳ್ಳಿ ಗ್ರಾಮದಲ್ಲಿ ರೈತ ಸಂಘ, ಹಸಿರು ಸೇನೆ ಉದ್ಘಾಟನೆ



ದುಗ್ಗಹಳ್ಳಿ ಗ್ರಾಮದಲ್ಲಿ ರೈತ ಸಂಘ ಹಾಗೂ ಹಸಿರು ಸೇನೆಯ ನೂತನ ಗ್ರಾಮ ಘಟಕವನ್ನು ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಉದ್ಘಾಟಿಸಿದರು.

ನಂಜನಗೂಡು: ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ ಸಾಲ ಮಾಡಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದಿದೆ. ಒಂದೇ ಬೆಳೆಯನ್ನು ಬೆಳೆಯುತ್ತಿರುವುದರಿಂದ ಭೂಮಿ ಫಲವತ್ತತೆ ಕಳೆದುಕೊಳ್ಳುತ್ತಿದೆ. ಆದ್ದರಿಂದ ವೈವಿಧ್ಯ ಬೆಳೆಗಳನ್ನು ಬೆಳೆಯಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ತಿಳಿಸಿದರು.

ತಾಲೂಕಿನ ದುಗ್ಗಹಳ್ಳಿ ಗ್ರಾಮದಲ್ಲಿ ಶನಿವಾರ ರೈತ ಸಂಘ ಹಾಗೂ ಹಸಿರು ಸೇನೆಯ ನೂತನ ಗ್ರಾಮ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತ ಸಂಘದ ಕಾರ್ಯಕರ್ತರು ಹಸಿರು ಶಾಲುಗಳನ್ನು ಹಾಕಿಕೊಂಡು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಾರದು, ಪ್ರಾಮಾಣಿಕವಾಗಿ ಹೋರಾಟ ಮಾಡಿದರೆ ಸತ್ಯಕ್ಕೆ ಜಯ ಸಿಕ್ಕೇ ಸಿಗುತ್ತದೆ ಎಂದರು. ರೈತ ಕುಟುಂಬಕ್ಕೆ ಅನ್ಯಾಯವಾದರೆ ಎಲ್ಲರೂ ಕೂಡಿ ಹೋರಾಟ ಮಾಡಬೇಕು. ಪ್ರೊ.ನಂಜುಂಡಸ್ವಾಮಿಯವರ ಆದರ್ಶಗಳನ್ನು ಪಾಲಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಮಂಜುಕಿರಣ್, ಷಡಕ್ಷರಿ, ಗೌಡಿಕೆ ಕೆಂಪಣ್ಣ, ವರಕೂಡು ಕೃಷ್ಣೇಗೌಡ. ದುಗ್ಗಹಳ್ಳಿ ಸತೀಶ್, ಶಿರಮಳ್ಳಿ ರತ್ನಮ್ಮ, ಸೂರಳ್ಳಿ ಮಹೇಶ್, ಕಣೆನೂರು ರಾಜಣ್ಣ, ಕೇಬಲ್ ಬಸಪ್ಪ ಬಿ. ಎಂ. ಬಸವಣ್ಣ ದೇವೇಂದ್ರ ಪ್ರಕಾಶ್ ಉಪಸ್ಥಿತರಿದ್ದರು.

ಹುಟ್ಟುಹಬ್ಬ ಆಚರಣೆ...


ಹುಣಸೂರಿನ ಕನಕ ಭವನದಲ್ಲಿ ಉದ್ಯೋಗ ಮೇಳ, ಆರೋಗ್ಯ ಹಾಗೂ ಬೃಹತ್ ರಕ್ತದಾನ ಶಿಬಿರ ನಡೆಸುವ ಮೂಲಕ ಉದ್ಯಮಿ ಹಾಗೂ ಯುವನಾಯಕ ನಾಡಪ್ಪನಹಳ್ಳಿ ರಾಜು ಶಿವರಾಜೇಗೌಡ ಅವರ 48ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ಈ ವೇಳೆ ಶುಭಕೋರಿದರು.

ವಿವೇಕಾನಂದ ಆಸ್ಪತ್ರೆ ವೈದ್ಯರಿಂದ ಯಶಸ್ವಿ ಸ್ಪೈನ್ ಸರ್ಜರಿ

ಸರಗೂರು: ವಿವೇಕಾನಂದ ಸ್ಮಾರಕ ಆಸ್ಪತ್ರೆ ಹಾಗೂ ದಿ ಸ್ಪೈನ್ ಫೌಂಡೇಷನ್ (ಟಿಎಸ್‌ಎಫ್) ಮುಂಬೈ, ಸಂಯುಕ್ತಾಶ್ರಯದಲ್ಲಿ ಬೆನ್ನುಹುರಿ (ಸ್ಪೈನ್ ಸರ್ಜರಿ) ಶಸ್ತ್ರಚಿಕಿತ್ಸೆಯನ್ನು ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಹಲವು ತಿಂಗಳು ಮತ್ತು ವರ್ಷಗಳಿಂದ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದ ಮಾಚನಾಯ್ಕನಹಳ್ಳಿ ಗ್ರಾಮದ ನಿವಾಸಿ ಪ್ರೇಮ, ಮತ್ತು ಸರಗೂರು ತಾಲೂಕಿನ ತೊರವಳ್ಳಿ ಗ್ರಾಮದ ನಿವಾಸಿ ಚಲುವನಾಯ್ಕ ಮತ್ತು ಬೀರಂಬಳ್ಳಿ ಗ್ರಾಮದ ನಿವಾಸಿ ಅಪ್ಪಾಜಿ ಇವರುಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಲು ಇವರ ಬಳಿ ಹಣವಿಲ್ಲದ ಕಾರಣ ಯಶಸ್ವಿನಿ ಯೋಜನೆಯ ಮೂಲಕ ವಿವೇಕಾನಂದ ಸ್ಮಾರಕ ಆಸ್ಪತ್ರೆಯು ಶಸ್ತ್ರಚಿಕಿತ್ಸೆ ನೀಡಿತು.



ಆಸ್ಪತ್ರೆಯ ಆಡಳಿತ ಮಂಡಳಿಯು ಮುಂದಿನ ದಿನಗಳಲ್ಲಿ ಬೆನ್ನುಹುರಿ ತಪಾಸಣಾ ಶಿಬಿರವನ್ನು ಮಾಡುವ ಯೋಜನೆಯನ್ನು ಹಮ್ಮಿಕೊಳ್ಳುವ ಮೂಲಕ ಇನ್ನು ಹೆಚ್ಚಿನ ಜನರಿಗೆ ಶಸ್ತ್ರಚಿಕಿತ್ಸೆಯ ಸೇವಾ ಸೌಲಭ್ಯವನ್ನು ನೀಡಲು ಬಯಸುತ್ತಿದ್ದೇವೆ. ಸಾರ್ವಜನಿಕರು ಈ ಶಿಬಿರದ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಆಸ್ಪತ್ರೆಯ ನಿರ್ದೇಶಕರಾದ ಡಾ.ರವೀಂದ್ರನಾಥ್ ಶ್ರಾಫ್ ಮತ್ತು ಉಪ ನಿರ್ದೇಶಕರಾದ ಡಾ.ಶಂಕರ್ ಹೆಚ್.ಕೆ ತಿಳಿಸಿರುತ್ತಾರೆ.

ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳು ಮತ್ತು ಪೋಷಕರು ವಿವೇಕಾನಂದ ಸ್ಮಾರಕ ಆಸ್ಪತ್ರೆ ಮತ್ತು ಸ್ಪೈನ್ ಫೌಂಡೇಶನ್ ವೈದ್ಯರುಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಕುಟುಂಬದ ಪರವಾಗಿ ಎಲ್ಲರಿಗೂ ಕೃತಜ್ಞತೆಯನ್ನು ಹೇಳಿ ಧನ್ಯವಾದಗಳನ್ನು ತಿಳಿಸಿದರು.

ಈ ಯಶಸ್ವಿ ಶಸ್ತ್ರಚಿಕಿತ್ಸೆಯಲ್ಲಿ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ನರ್ಸಿಂಗ್ ಸಿಬ್ಬಂದಿಗಳಾದ ಶ್ರೀಪಾಲ್, ರೋಷನ್, ಮಧುಶ್ರೀ ಸಂಗೀತ ಮತ್ತು ಪುಟ್ಟಮ್ಮ ಮತ್ತು ಆಸ್ಪತ್ರೆಯ ಇತರೆ ಸಿಬ್ಬಂದಿವರ್ಗದವರು ಭಾಗವಹಿಸಿದ್ದರು.

ವಸತಿ ಗೃಹ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ


ಮೂಗೂರಿನಲ್ಲಿ ವಸತಿ ಗೃಹ ಕಾಮಗಾರಿ ತ್ವರಿತವಾಗಿ ಆರಂಭಿಸಲು ಅಧಿಕಾರಿಗಳ ತಂಡ ಗ್ರಾಮದಲ್ಲಿ ಸ್ಥಳ ಪರಿಶೀಲಿಸಿತು. ಈ ವೇಳೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮುಖಂಡರಾದ ಎಂ.ಡಿ.ಬಸವರಾಜು, ಅರ್ಚಕ ಸುಂದರಪ್ಪ ಹಾಜರಿದ್ದರು.

ಶಿಷ್ಟಾಚಾರ ಪಾಲಿಸದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಕೆ.ಆರ್.ನಗರ ಪಟ್ಟಣದ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪುರಸಭೆ ಸದಸ್ಯ ಉಮೇಶ್ ಮಾತನಾಡಿದರು. ಈ ವೇಳೆ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಸಂತೋಷ್‌ಗೌಡ, ಕೆ.ಎಲ್.ಜಗದೀಶ್ ಇದ್ದರು.

ಕೆ.ಆರ್.ನಗರ: ಪುರಸಭೆ ವತಿಯಿಂದ ಅಮೃತ್ 2.0 ಯೋಜನೆಯ ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗೆ ಬುಧವಾರ ಚಾಲನೆ ನೀಡಲಾಗಿದ್ದು ಸರ್ಕಾರದ ನಿಯಮಾನುಸಾರ ಶಿಷ್ಟಾಚಾರ ಪಾಲನೆ ಮಾಡಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪುರಸಭೆ ಜೆಡಿಎಸ್ ಸದಸ್ಯ ಉಮೇಶ್ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಕರೆಯಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಡಿ.ರವಿಶಂಕರ್ ಅವರ ಆಣತಿಯಂತೆ ಶಂಕುಸ್ಥಾಪನೆ ನೆರವೇರಿಸಲಾಗಿದ್ದು ಕೇಂದ್ರ ಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಮತ್ತು ಸ್ಥಳೀಯ ವಿಧಾನಪರಿಷತ್ ಸದಸ್ಯರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇರುವುದರ ಜತೆಗೆ ಕಾಂಗ್ರೆಸ್ ಪಕ್ಷದ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರನ್ನು ಕರೆದಿಲ್ಲ ಎಂದರು.

ಈ ವಿಚಾರವನ್ನು ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ನೋಟೀಸ್ ನೀಡಿ ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ನೀಡಬೇಕೆಂದು ಕೋರಿದ್ದಲ್ಲದೆ ಇದು ಪುನರಾವರ್ತನೆಯಾದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜೆಡಿಎಸ್ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನ್ಯಾಷನಲ್ ಹೆರಾಲ್ಡ್ ಹಗರಣ: ಸೋನಿಯಾ, ರಾಹುಲ್ ರಾಜೀನಾಮೆಗೆ ಬಿಜೆಪಿ ಆಗ್ರಹ


ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ಬಿಜೆಪಿ ಮುಖಂಡರುಗಳು.

ತಿ.ನರಸೀಪುರ, ಏ.19– ನ್ಯಾಷನಲ್ ಹೆರಾಲ್ಡ್ ಹಗರಣದಲ್ಲಿ ಭಾಗಿಯಾಗಿರುವ ಗಂಭೀರ ಆರೋಪ ಹೊತ್ತಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನೈತಿಕ ಹೊಣೆ ಹೊತ್ತು ಕೂಡಲೇ ಸಂಸದೀಯ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್ ಸುಂದರೇಶನ್ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಇಂದು ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಇದು ಕೇವಲ ಆರ್ಥಿಕ ಅಕ್ರಮದ ಪ್ರಕರಣವಲ್ಲ. ಸಂಸ್ಥೆಗಳು, ಸಾರ್ವಜನಿಕ ನಿಧಿಗಳು ಮತ್ತು ರಾಷ್ಟ್ರೀಯ ಪರಂಪರೆಯನ್ನು ಖಾಸಗಿ ಆಸ್ತಿಯಾಗಿ ಪರಿಗಣಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಇದು ಪ್ರತೀಕಾರದ ಕ್ಷಣವಾಗಿದೆ. ಗಾಂಧಿ ಕುಟುಂಬವು ಕಾಂಗ್ರೆಸ್ ಪಕ್ಷದ ಮೂಲ ಸೌಕರ್ಯವನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ವೈಯಕ್ತಿಕ ಸಂಪತ್ತನ್ನು ಹೇಗೆ ನಿರ್ಮಿಸಿತು ಮತ್ತು ಪ್ರಜಾಪ್ರಭುತ್ವದ ಪ್ರತಿಪಾದಕರಂತೆ ವೇಷ ಧರಿಸಿ ಖಾಸಗಿ ಲಾಭ ಗಳಿಸುವ ವಾಹನವಾಗಿ ಅದನ್ನು ಹೇಗೆ ಬಳಸಿಕೊಂಡಿತು ಎಂಬುದನ್ನು ಜಾರಿ ನಿರ್ದೇಶನಾಲಯದ ಕ್ರಮವು ತೋರಿಸುತ್ತದೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಧುರಾಜ್, ವಿವಿ, ಜಿಲ್ಲಾ ಉಪಾಧ್ಯಕ್ಷ ಬಿಳುಗಲಿ ಮಂಜು, ಕಾರ್ತಿಕ್, ಮಂಡಲ ಅಧ್ಯಕ್ಷ ಪೃಥ್ವಿ, ಮನೋಜ್, ಸಿದ್ದರಾಜು, ರಾಘವೇಂದ್ರ, ಸ್ವಾಮಿ, ಪ್ರವೀಣ್, ಅವಿನಾಶ್, ನಂದೀಶ್, ಮಹೇಶ್, ಚಮ್ಮ ಹಾಗೂ ಇತರರು ಇದ್ದರು.

ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಿಸಿಲು–ಮಳೆಯಲ್ಲಿ ಹಾಳಾಗುತ್ತಿರುವ ರಥ

ಭಕ್ತಾದಿಗಳ ಆಕ್ರೋಶ, ಸೂಕ್ತ ಸ್ಥಳಾವಕಾಶ ಕಲ್ಪಿಸಲು ಆಗ್ರಹ

ಹೆಚ್.ಡಿ.ಕೋಟೆ: ಶ್ರೀ ಲಕ್ಷ್ಮೀ ವರದರಾಜಸ್ವಾಮಿ ದೇವಸ್ಥಾನದ ಲಕ್ಷಾಂತರ ರೂ. ಬೆಲೆಬಾಳುವ ರಥ ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಿಸಿಲು–ಮಳೆಗೆ ಸಿಲುಕಿ ಹಾಳಾಗುತ್ತಿದೆ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಮೊದಲನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀವರದರಾಜಸ್ವಾಮಿ ದೇವಸ್ಥಾನ ಇತ್ತೀಚಿನ ವರ್ಷಗಳಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು, ದೇವಸ್ಥಾನ ಸಮಿತಿಯವರ ಪರಿಶ್ರಮ ಹಾಗೂ ದಾನಿಗಳ ಸಹಕಾರದಿಂದ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳ್ಳುತ್ತಿದೆ.

ದೇವಸ್ಥಾನಕ್ಕೆ ಪುರಸಭೆ ಮಾಜಿ ಅಧ್ಯಕ್ಷ ಬಿ.ಎಸ್.ರಂಗ ಅಯ್ಯಂಗಾರ್ ಕುಟುಂಬದವರು 15 ವರ್ಷಗಳ ಹಿಂದೆ 18 ಲಕ್ಷ ರೂ.ಗಳಷ್ಟು ಖರ್ಚು ಮಾಡಿ ಸಾಗುವಾನಿ ಮರದಿಂದ ರಥವನ್ನು ನಿರ್ಮಿಸಿಕೊಟ್ಟಿದ್ದು, 13 ವರ್ಷಗಳಿಂದ ಶ್ರೀದೇವಿ, ಭೂದೇವಿ ವರದರಾಜಸ್ವಾಮಿ ಉತ್ಸವಮೂರ್ತಿಗಳ ಮುಖಾಂತರ ಬ್ರಹ್ಮ ರಥೋತ್ಸವ ಪಟ್ಟಣದಲ್ಲಿ ಅದ್ದೂರಿಯಾಗಿ ನಡೆಯುತ್ತಿದೆ.


ಅಧಿಕಾರಿಗಳ ನಿರ್ಲಕ್ಷ್ಯದಿಂದ ದುಸ್ಥಿತಿಗೆ ತಲುಪಿದ ವರದರಾಜಸ್ವಾಮಿ ದೇಗುಲದ ರಥ.

ರಸ್ತೆಯಲ್ಲಿ ದೇವಸ್ಥಾನದ ರಥವನ್ನು ನಿಲ್ಲಿಸಿರುವುದರಿಂದ ಓಡಾಡಲು ತೊಂದರೆಯಾಗುತ್ತಿದೆ ಎಂದು ದೇವಸ್ಥಾನ ಸಮೀಪದ ನಿವಾಸಿಯೊಬ್ಬರು ಲೋಕಾಯುಕ್ತರಿಗೆ ಒಂದು ವರ್ಷದ ಹಿಂದೆ ದೂರು ನೀಡಿದ್ದರು. ಲೋಕಾಯುಕ್ತ ಅಧಿಕಾರಿಗಳು ಬಂದು ಸ್ಥಳ ಪರಿಶೀಲಿಸಿದಾಗ ಅಧಿಕಾರಿಗಳಿಗೆ ಸಮಿತಿಯವರು ದೇವಸ್ಥಾನ ಪಕ್ಕದ ಮನೆ ಪಾಳು ಬಿದ್ದಿದ್ದು, ಖಾಲಿ ಜಾಗದಲ್ಲಿ ರಥ ನಿಲ್ಲಿಸಲಾಗಿದೆ. ಯಾವುದೇ ತೊಂದರೆ ಇಲ್ಲ ಎಂದು ಮನವರಿಕೆ ಮಾಡಿಕೊಟ್ಟಿದ್ದರು.

ಪಕ್ಕದ ನಿವಾಸಿ ಲೋಕಾಯುಕ್ತ ಅಧಿಕಾರಿಗಳಿಗೆ ಮತ್ತೊಮ್ಮೆ ಮನವಿ ಸಲ್ಲಿಸಿದಾಗ, ತಹಸಿಲ್ದಾರ್ ಶ್ರೀನಿವಾಸ್ ಮತ್ತು ಪುರಸಭೆ ಮುಖ್ಯ ಅಧಿಕಾರಿ ಸುರೇಶ್ ಅವರಿಗೆ ರಥವನ್ನು ತೆರವುಗೊಳಿಸುವಂತೆ ಲೋಕಾಯುಕ್ತ ಅಧಿಕಾರಿಗಳು ಸೂಚಿಸಿದ್ದರು.

ಒಂದು ತಿಂಗಳ ಹಿಂದೆ ಮುಖ್ಯ ಅಧಿಕಾರಿ ಮತ್ತು ತಹಸಿಲ್ದಾರ್ ಅವರು ರಥಕ್ಕೆ ನಿರ್ಮಾಣ ಮಾಡಿದ್ದ ತಗಡಿನ ಕೊಠಡಿಯನ್ನು ತೆರವುಗೊಳಿಸಿದ್ದಾರೆ. ಹೀಗಾಗಿ ರಥ ಒಂದು ತಿಂಗಳಿಂದ ಬಿಸಿಲು–ಮಳೆಯ ಹೊಡೆತಕ್ಕೆ ಸಿಲುಕಿ ಹಾಳಾಗುತ್ತಿದ್ದು, ಜಿಲ್ಲಾ ಅಧಿಕಾರಿಗಳಾಗಲಿ, ಪುರಾತತ್ವ ಇಲಾಖೆಯ ಅಧಿಕಾರಿಗಳಾಗಲಿ ಇತ್ತ ಗಮನ ಹರಿಸದೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಭಕ್ತರು ದೂರಿದ್ದಾರೆ. ಜೊತೆಗೆ ರಥಕ್ಕೆ ಸೂಕ್ತ ಸ್ಥಳಾವಕಾಶ ಕಲ್ಪಿಸುವಂತೆ ಆಗ್ರಹಿಸಿದ್ದಾರೆ.

ಶ್ರೀ ಲಕ್ಷ್ಮಿ ವರದರಾಜ ಸ್ವಾಮಿ ದೇವಸ್ಥಾನದ ಲಕ್ಷ್ಮೀದೇವಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮಕ್ಕೆ ಶಾಸಕ ಅನಿಲ್ ಚಿಕ್ಕಮಾದು ಆಗಮಿಸಿ, ದೇವಸ್ಥಾನದ ಸಮಿತಿಯವರು ಹಾಗೂ ಭಕ್ತಾದಿಗಳೊಂದಿಗೆ, ಚರ್ಚಿಸಿ ರಥ ನಿಲ್ಲಿಸುವುದಕ್ಕೆ, ಸೂಕ್ತ ಸ್ಥಳವನ್ನು ನಿಗದಿ ಮಾಡಲು ಅಧಿಕಾರಿಗಳೊಂದಿಗೆ, ಏ.16ರಂದು ಸಭೆ ನಡೆಸುವುದಾಗಿ ತಿಳಿಸಿದ್ದರು, ಆದರೆ ಈಗ ಯಾವ ಸಭೆಯು ನಡೆದಿಲ್ಲ, ಏಪ್ರಿಲ್ 29ರಿಂದ ಮೇ 12 ರವರೆಗೆ ನಡೆಯಲಿರುವ ಬ್ರಹ್ಮ ರಥೋತ್ಸವ ಕಾರ್ಯಕ್ರಮವನ್ನು ದೇವಸ್ಥಾನದ ಕಮಿಟಿಯವರು ಮಾಡುತ್ತಾರೊ ಅಥವಾ ತಾಲೂಕು ಮುಜರಾಯಿ ಅಧಿಕಾರಿಗಳು ನಡೆಸುತ್ತಾರೋ ಎಂಬುದು ತಿಳಿಯದಾಗಿದೆ.

ಬನ್ನೂರಿನಲ್ಲಿ ಟಿ10 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಬನ್ನೂರು: ನವಚೇತನ ಕ್ರಿಕೆಟರ್ಸ್ ವತಿಯಿಂದ ತಾಲೂಕಿನಲ್ಲಿ ಮೊದಲ ಬಾರಿಗೆ ಬನ್ನೂರಿನ ಬಸ್‌ನಿಲ್ದಾಣದ ಸಮೀಪದಲ್ಲಿರುವ ಫುಟ್ಬಾಲ್ ಮೈದಾನದ ಆವರಣದಲ್ಲಿ ಟಿ10 ಕ್ರಿಕೆಟ್ ಪಂದ್ಯಾವಳಿಯನ್ನು ಆರಂಭಿಸಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದ ಪರಿಸರ ಜಾಗೃತಿ ವೇದಿಕೆಯ ಅಧ್ಯಕ್ಷ ಕೆ.ಮಹೇಂದ್ರ ಸಿಂಗ್, ಇತ್ತೀಚಿನ ದಿನಗಳಲ್ಲಿ ಯುವ ಜನರು ಸಾಮಾಜಿಕ ಜಾಲತಾಣಗಳ ದಾಸರಾಗುತ್ತಿರುವುದರಿಂದ ಕ್ರೀಡೆಗಳ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಯುವಜನತೆ ಉತ್ತಮವಾದ ಆರೋಗ್ಯಕ್ಕಾಗಿ ಕ್ರೀಡೆಗಳ ಅಭ್ಯಾಸ ಮಾಡುವುದರ ಜೊತೆಗೆ ಸಾಧನೆಯನ್ನು ಮಾಡುವಂತೆ ತಿಳಿಸಿದರು.

ಶತಾಯುಷಿ ಪಟೇಲ್ ಚಿಕ್ಕತಮ್ಮೇಗೌಡ ನಿಧನ



ಹೆಚ್.ಡಿ.ಕೋಟೆ: ಮಾಗುಡಿಲು ಗ್ರಾಮದ ಶತಾಯುಷಿ ಪಟೇಲ್ ಚಿಕ್ಕತಮ್ಮೇಗೌಡ (101) ಶನಿವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, 6 ಮಂದಿ ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ಮಾಗುಡಿಲಿನ ರುದ್ರಭೂಮಿಯಲ್ಲಿ ಭಾನುವಾರ (ಏ.20) ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಹೇಮಾವತಿ ಬಾಯಿ



ಹೆಚ್.ಡಿ.ಕೋಟೆ: ತಾಲೂಕು ಪತ್ರಕರ್ತರ ಸಂಘದ ನಿರ್ದೇಶಕರು ಹಾಗೂ ಹಿರಿಯ ಪತ್ರಕರ್ತರಾದ ರೇಣುಕಾ ಅವರ ಪತ್ನಿ ಹೇಮಾವತಿ ಬಾಯಿ(57) ಶನಿವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ (ಏ.20) ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಎನ್‌ಆರ್ ಕ್ಷೇತ್ರದಲ್ಲಿ ಗಾಂಜಾ ಘಮಲು ತಪ್ಪಿಸಿ... ಪ್ಲೀಸ್

• ಪೊಲೀಸರ ಜನ ಸಂಪರ್ಕ ಸಭೆಯಲ್ಲಿ ವ್ಯಾಪಕವಾಗಿ ಕೇಳಿಬಂದ ದೂರು • ಇದರಿಂದ ಯುವ ಜನತೆ ಹಾಳಾಗುತಾರೆ; ಜೊತೆಗೆ ಅಪರಾಧ ಕೃತ್ಯಗಳು ಹೆಚ್ಚಾಗುತ್ತವೆ; ಜನತೆ ಆತಂಕ

ಮೈಸೂರು, ಏ.19(ಎಸ್‌ಬಿಡಿ)– ನರಸಿಂಹರಾಜ(ಎನ್‌ಆರ್) ಕ್ಷೇತ್ರದಲ್ಲಿ ಗಾಂಜಾ ಇನ್ನಿತರ ಮಾದಕ ವಸ್ತುಗಳ ಘಾಟು ವ್ಯಾಪಿಸಿದ್ದು, ಇದಕ್ಕೆ ಕಡಿವಾಣ ಹಾಕದಿದ್ದರೆ ಯುವ ಜನತೆ ಹಾಳಾಗುವುದರ ಜೊತೆಗೆ ಅಪರಾಧ ಕೃತ್ಯಗಳು ಹೆಚ್ಚಾಗುತ್ತವೆ ಎಂದು ನಗರ ಪೊಲೀಸ್ ಆಯುಕ್ತರೆದುರು ಸಾರ್ವಜನಿಕರು ಆತಂಕದಿಂದ ಅಲವತ್ತುಕೊಂಡಿದ್ದಾರೆ.

ಮೈಸೂರು ನಗರ ಪೊಲೀಸ್, ನರಸಿಂಹರಾಜ ಉಪವಿಭಾಗದ ವತಿಯಿಂದ ಎನ್.ಆರ್.ಮೊಹಲ್ಲಾದ ಶಿವಾಜಿ ಉದ್ಯಾನದಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ 'ಜನಸಂಪರ್ಕ ಸಭೆ'ಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಕಾನೂನು–ಸುವ್ಯವಸ್ಥೆ, ಸಂಚಾರ ನಿರ್ವಹಣೆ, ಪೊಲೀಸ್ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಹಾಗೂ ಅಹವಾಲು ಆಲಿಸಿದರು. ಸಭೆಯಲ್ಲಿ ಮಾತನಾಡಿದವರಲ್ಲಿ ಬಹುತೇಕರು ಗಾಂಜಾ ಇನ್ನಿತರ ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ತಡೆಯುವುದರ ಜೊತೆಗೆ ಸಂಚಾರ ನಿರ್ವಹಣೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮೈಸೂರು ನಗರ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ್ ಕುಮಾರ್ ಮಾತನಾಡಿ, ಈ ಭಾಗದಲ್ಲಿ ಸಂಚಾರ ನಿರ್ವಹಣೆ ಸಮರ್ಪಕವಾಗಿರದ ಕಾರಣ ಸಾಕಷ್ಟು ಸಮಸ್ಯೆ ಗಳಿವೆ. ಎಂ.ಎ.ಸಲೀಂ ಅವರು ಆಯುಕ್ತರಾಗಿದ್ದಾಗ ನಿರ್ವಹಣೆ ಉತ್ತಮವಾಗಿತ್ತು. ಮೈಸೂರು–ಬೆಂಗಳೂರು ಹೆದ್ದಾರಿ ಸಂಪರ್ಕಿಸುವ ಶಿವಾಜಿ ರಸ್ತೆಯಲ್ಲಿರುವ ಕಲ್ಯಾಣ ಮಂಟಪಗಳು, ವಾಣಿಜ್ಯ ಕಟ್ಟಡಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆ ಬದಿಯಲ್ಲೇ ವಾಹನ ನಿಲ್ಲಿಸುತ್ತಾರೆ. ಕತ್ತಲಾಗುತ್ತಿದ್ದಂತೆ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ, ಮದ್ಯ ಸೇವಿಸುವವರು ಹೆಚ್ಚಾಗಿದ್ದಾರೆ. ಹಿಂದಿನಂತೆ ಕಮಾಂಡೋ ಪಡೆಯನ್ನು ಗಸ್ತಿಗೆ ನಿಯೋಜಿಸುವಂತೆ ಮನವಿ ಮಾಡಿದರು.

ಫುಟ್‌ಪಾತ್ ಅತಿಕ್ರಮಣ: ಮೈಸೂರು–ಬೆಂಗಳೂರು ಹೆದ್ದಾರಿ, ಬನ್ನಿಮಂಟಪದಲ್ಲಿ ಪಾದಚಾರಿ ಮಾರ್ಗವನ್ನು ವ್ಯಾಪಾರಿಗಳು ಸಂಪೂರ್ಣವಾಗಿ ಅತಿಕ್ರಮಿಸಿಕೊಂಡಿದ್ದಾರೆ. ಒಮ್ಮೆ ತೆರವು ಮಾಡಲಾಗಿತ್ತಾದರೂ ಮತ್ತೆ ಯಥಾಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗಿದೆ. ಈ ಬಗ್ಗೆ ಕೂಡಲೇ ಕ್ರಮ ವಹಿಸಬೇಕಿದೆ. ಹಾಗೆಯೇ ಗಾಂಜಾ ಇನ್ನಿತರ ಮಾದಕ ವಸ್ತುಗಳಿಗೆ ಬಲಿಯಾಗುತ್ತಿರುವ ಯುವ ಜನತೆಯನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಯಾದರೂ ಪೊಲೀಸರು ಮನಸ್ಸು ಮಾಡಿದರೆ ಅದು ಸಾಧ್ಯವಿದೆ ಎಂದು ಬನ್ನಿಮಂಟಪ ನಿವಾಸಿ ಕೈಸರ್ ಅಹಮದ್ ಹೇಳಿದರು.

ಮೆಡಿಕಲ್ಸ್‌ನವರಿಗೆ ಸೂಚಿಸಿ: ಯುವಕರು ಗಾಂಜಾ ಜೊತೆಗೆ ಎಂ ಅಕ್ಷರದಿಂದ ಆರಂಭವಾಗುವ ಯಾವುದೋ ಇಂಜೆಕ್ಷನ್ ಅನ್ನು ಸಿರೆಂಜ್ ಮೂಲಕ ತೆಗೆದು ಕೊಳ್ಳುತ್ತಿದ್ದಾರೆ. ಈ 20 ರೂ. ಬೆಲೆಯ ಇಂಜೆಕ್ಷನ್ ಅನ್ನು ಕೆಲವು ಮೆಡಿಕಲ್ಸ್ ಗಳಲ್ಲಿ ವೈದ್ಯರ ಚೀಟಿಯಿಲ್ಲದೆ 120 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಮೆಡಿಕಲ್ಸ್ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಎಚ್ಚರಿಕೆ ನೀಡಬೇಕು ಎಂದು 9ನೇ ವಾರ್ಡ್ ನಿವಾಸಿ ಇರ್ಫಾನ್ ಪಾಷಾ ಒತ್ತಾಯಿಸಿದರು. ಇದೇ ವೇಳೆ ಗಾಂಧಿ ನಗರದ ನಿವಾಸಿಯೊಬ್ಬರು, ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಹೋಗದೆ ಸ್ಮಶಾನದಲ್ಲಿ ಮಾದಕ ವಸ್ತುಗಳ ಸೇವನೆ ಮಾಡುತ್ತಿದ್ದಾರೆ ಎಂದು ದೂರಿದರು.

ಡ್ರಗ್ಸ್ ಸೇವನೆ ಜಾಸ್ತಿಯಾಗಿದೆ: ಎನ್.ಆರ್.ಕ್ಷೇತ್ರದೆಲ್ಲೆಡೆ ಮಾದಕ ವಸ್ತುಗಳ ಬಳಕೆ ಹೆಚ್ಚಾಗುತ್ತಿರುವುದು ಗಂಭೀರ ವಿಚಾರವಾಗಿದೆ. ಬನ್ನಿಮಂಟಪ ಸಿ ಲೇಔಟ್‌ನ ಪಾರ್ಕ್ ಬಳಿ ಇರುವ ಒಂದು ಅಂಗಡಿಯಲ್ಲಿ ಯಾವಾಗಲೂ ಸಿಗರೇಟ್ ಸೇವನೆಗೆ ಯುವಕರು ಜಮಾಯಿಸಿರುತ್ತಾರೆ. ಆಗಾಗ ಗಲಾಟೆಯೂ ನಡೆಯುತ್ತಿರುತ್ತದೆ. ಆ ಅಂಗಡಿಯ ಪರವಾನಗಿ ರದ್ದು ಮಾಡುವಂತೆ ಪಾಲಿಕೆಗೂ ಮನವಿ ನೀಡಲಾಗಿದೆ. ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ನಿರ್ಧರಿಸಿರುವುದರಿಂದ ಹೋಟೆಲ್, ಕೆಫೆಗಳು ವಾರಕ್ಕೆರಡು ಆರಂಭವಾಗುತ್ತಿದ್ದು, ಟ್ರಾಫಿಕ್ ಸಮಸ್ಯೆಯೂ ಹೆಚ್ಚಾಗಿದೆ. ಹೆದ್ದಾರಿಯಲ್ಲಿ ಬೃಹತ್ ಹೋರ್ಡಿಂಗ್ಸ್ ಅಳವಡಿಸಿರುವುದು ಅಪಾಯಕ್ಕೆ ಕಾರಣವಾಗಿದೆ ಎಂದು ಬನ್ನಿಮಂಟಪ ವೆಲ್‌ಫೇರ್ ಅಸೋಸಿಯೇಷನ್‌ನ ಮೊಹಮ್ಮದ್ ಮುಮ್ತಾಜ್ ಅಹಮದ್ ತಿಳಿಸಿದರು.

ಐದಾರು ಕೊಲೆಗಳಾಗಿವೆ: ಗಾಂಜಾ, ಡ್ರಗ್ಸ್ ಸೇವನೆಯಿಂದ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ. ಎನ್‌ಆರ್ ಭಾಗದಲ್ಲಿ ಐದಾರು ತಿಂಗಳಲ್ಲಿ ನಾಲ್ಕೈದು ಕೊಲೆಗಳಾಗಿವೆ. ಮನೆಯವರು, ಸ್ನೇಹಿತರನ್ನೇ ಕ್ಷುಲ್ಲಕ ಕಾರಣಕ್ಕೆ ಹತ್ಯೆ ಮಾಡಿದ್ದಾರೆ. ಇದಕ್ಕೆ ಡ್ರಗ್ಸ್ ಸೇವನೆಯೇ ಕಾರಣ. ಇದನ್ನು ತಡೆಯದಿದ್ದರೆ ಅಪರಾಧಗಳು ಇನ್ನೂ ಹೆಚ್ಚಾಗುತ್ತವೆ ಎಂದು ಆತಂಕ ವ್ಯಕ್ತಪಡಿಸಿದ ವಕೀಲ ಮುದಾಸಿರ್ ಖಾನ್, 2024ರ ಡಿಸೆಂಬರ್ 28ರಂದು ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರೂ ಚೀಟಿ, ಪಿಗ್ಮಿ ವ್ಯವಹಾರ ನಡೆಸಿ ನೂರಾರು ಜನರಿಗೆ ವಂಚಿರುವ ಆರೋಪಿಗಳ ವಿರುದ್ಧ ಕ್ರಮವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿ, ಆಯುಕ್ತರಲ್ಲಿ ಮನವಿ ಸಲ್ಲಿಸಿದರು.

ಪ್ರಶ್ನಿಸಿದರೆ ಆವಾಜ್: ಎನ್.ಆರ್. ಮೊಹಲ್ಲಾ 5ನೇ ಕ್ರಾಸ್‌ನಲ್ಲಿ ಯಾವಾಗಲೂ ಗಾಂಜಾ, ಸಲ್ಯೂಷನ್ ಸೇವಿಸುತ್ತಿರುತ್ತಾರೆ. ಪ್ರಶ್ನಿಸಿದರೆ ನಮನ್ನೇ ಹೆದರಿಸುತ್ತಾರೆ. ವ್ಹೀಲಿಂಗ್ ಮಾಡುತ್ತಾರೆ, ಯಾರಿಗೂ ಹೆದರುವುದಿಲ್ಲ ಎಂದು ನಿರ್ಮಲಾ ಆತಂಕ ವ್ಯಕ್ತಪಡಿಸಿದರು. ತಾತನೊಂದಿಗೆ ವಾಸಿಸುತ್ತಿರುವ ಬಿಸಿಎ ವಿದ್ಯಾರ್ಥಿನಿ ಸಿಂಚನ, ಪೊಲೀಸರ ಕಾರ್ಯ ನಿರ್ವಹಣೆಯನ್ನು ಬಣ್ಣಿಸಿದರು.

ಹತ್ತಾರು ಅಹವಾಲು: ಪ್ರವೀಣ್ ಎಂಬುವವರು ಪಿಜಿಗಳು, ಹಾಸ್ಟೆಲ್‌ಗಳ ನಿರ್ವಹಣೆ ಸಂಬಂಧ ಪೊಲೀಸರ ಸಲಹೆ–ಸೂಚನೆಯನ್ನು ಸರಿಯಾಗಿ ಅನುಸರಿಸಲಾಗುತ್ತಿದೆಯೇ ಎಂದು ಪರಿಶೀಲಿಸಬೇಕು. ಬನ್ನಿಮಂಟಪದಲ್ಲಿ ಕೇರಳ ನೋಂದಣಿ ವಾಹನಗಳು ಹೆಚ್ಚಾಗಿ ಸಂಚರಿಸುತ್ತಿದ್ದು, ಅವುಗಳನ್ನು ಅಪರಾಧ ಕೃತ್ಯಗಳಿಗೆ ಬಳಸುತ್ತಿರುವ ಸಾಧ್ಯತೆ ಇದೆ ಎಂದರು. ಬಿಜೆಪಿ ಮುಖಂಡ ಮಂಜುನಾಥ್, ಹೊರರಾಜ್ಯದಿಂದ ಬಂದಿರುವ ವಿದ್ಯಾರ್ಥಿನಿಯರು ತಡರಾತ್ರಿಯಲ್ಲೂ ಅಡ್ಡಾಡಿದರೂ ಸಂಬಂಧಪಟ್ಟ ಹಾಸ್ಟೆಲ್ ಹಾಗೂ ಪಿಜಿಯವರು ನಿಗಾ ವಹಿಸುತ್ತಿಲ್ಲ ಎಂದರು. ಗಾಂಧಿನಗರದ ಹೇಮಚಂದ್ರ, ಶಿವಾಜಿ ರಸ್ತೆಯಲ್ಲಿ ಗ್ಯಾಸ್ ಬಂಕ್‌ಗೆ ಅವಕಾಶ ನೀಡಬಾರದು ಎಂದರು. ರಾತ್ರಿ 11 ಗಂಟೆವರೆಗೂ ಟೀ ಅಂಗಡಿಗಳು ತೆರೆದಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ವೈನ್ ಶಾಪ್‌ಗಳನ್ನು ಸ್ಥಳಾಂತರಿಸಬೇಕು. ಹಳೆ ಕೆಸರೆ ಭಾಗಕ್ಕೆ ಹೊರಗಿನಿಂದ ತಂದು ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಜೊತೆಗೆ ಕಾಪರ್ ತೆಗೆಯಲು ನಿರಂತರವಾಗಿ ಟೈರ್‌ಗಳಿಗೆ ಬೆಂಕಿ ಹಚ್ಚಲಾಗುತ್ತಿದೆ ಎಂದು ಜನ ಸ್ಪಂದನ ಹಿತ ರಕ್ಷಣಾ ಸಮಿತಿ ಪದಾಧಿಕಾರಿ ತಿಳಿಸಿದರು.

ಕುರಿ ವ್ಯಾಪಾರಕ್ಕೆ ಅವಕಾಶ ನೀಡಿ: ಮುಂದಿನ ತಿಂಗಳು ಬಕ್ರೀದ್ ಹಬ್ಬ ಇದೆ. ಹೀಗಾಗಿ ಎಲ್‌ಐಸಿ ವೃತ್ತದಲ್ಲಿ ಕುರಿ ವ್ಯಾಪಾರದಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತದೆ. ಹಾಗಾಗಿ ಸುಗಮ ಸಂಚಾರದ ದೃಷ್ಟಿಯಿಂದ ಬನ್ನಿಮಂಟಪ ಮೈದಾನದ ಆವರಣದಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟವರಿಗೆ ಪೊಲೀಸ್ ವತಿಯಿಂದ ಶಿಫಾರಸು ಮಾಡಬೇಕು ಎಂದು ಸೈಯದ್ ಇಕ್ಬಾಲ್ ಮನವಿ ಮಾಡಿದರು.

ಕ್ರಮದ ಭರವಸೆ: ಒಂದು ಗಂಟೆಗೂ ಹೆಚ್ಚು ಕಾಲ ಅಹವಾಲು ಆಲಿಸಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಿಮ್ಮೆಲ್ಲಾ ದೂರು ಹಾಗೂ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಭೆಗೆ ಮುನ್ನ ಪೊಲೀಸ್ ಅಧಿಕಾರಿಗಳು, ಆಯಾ ವ್ಯಾಪ್ತಿಯ ಬೀಟ್ ಸಿಬ್ಬಂದಿ ಸಂಪರ್ಕ ಸಂಖ್ಯೆ, ತುರ್ತು ಸೇವೆಗಳ ಮಾಹಿತಿಯನ್ನೊಳಗೊಂಡ 'ಮನೆ ಮನೆಗೂ ಪೊಲೀಸ್' ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದರು. ಈ ವೇಳೆ ಡಿಸಿಪಿ ಎಂ.ಮುತ್ತುರಾಜ್, ಎಸಿಪಿಗಳಾದ ಶಿವಶಂಕರ್, ಅಶ್ವತ್ಥ್ ನಾರಾಯಣ, ಇನ್ನಿತರ ಅಧಿಕಾರಿಗಳಿದ್ದರು.



ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ಉದ್ಯಾನದಲ್ಲಿ ಶನಿವಾರ ಸಂಜೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ 'ಜನಸಂಪರ್ಕ ಸಭೆ' ನಡೆಯಿತು.

ಮೈಸೂರು ಅರಮನೆ ಆವರಣದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಸಿಮೆಂಟ್ ವಿದ್ಯುತ್ ಕಂಬ ತೆರವು

ಕೊಯಮತ್ತೂರಿಂದ ತಂದಿರುವ ಪಾರಂಪರಿಕ ಶೈಲಿಯ ಕಾಸ್ಟ್ ಐರನ್ ಕಂಬ ಅಳವಡಿಕೆ

ಮೈಸೂರು, ಏ.19(ಬಿಎಲ್‌ಯು)– ಪ್ರಸಿದ್ಧ ಮೈಸೂರು ಅರಮನೆ ಆವರಣದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ವಿದ್ಯುತ್ ಸಿಮೆಂಟ್ ಕಂಬಗಳನ್ನು ತೆರವು ಮಾಡಿ ಪಾರಂಪರಿಕ ಶೈಲಿಯ ಕಾಸ್ಟ್ ಐರನ್ ಕಂಬಗಳನ್ನು ಅಳವಡಿಸಲಾಗುತ್ತಿದೆ.

ಮೈಸೂರು ಅರಮನೆ ಮುಂದೆ ಸಾಲಾಗಿದ್ದ ಈ ಸಿಮೆಂಟ್ ವಿದ್ಯುತ್ ಕಂಬಗಳು ತೀವ್ರ ಶಿಥಿಲಾವಸ್ಥೆಯಲ್ಲಿದ್ದವು. ಸಿಮೆಂಟ್ ಕಂಬದ ಒಳಗಿನ ಕಬ್ಬಿಣದ ಸರಳುಗಳು ತುಕ್ಕು ಹಿಡಿದಿದ್ದು, ಗಾರೆಚಕ್ಕೆ ಉದುರಿದ್ದರಿಂದ ಅವು ಅಸಹ್ಯಕರವಾಗಿ ಗೋಚರಿಸುತ್ತಿದ್ದವು. ಅಲ್ಲದೆ ಕಂಬಗಳು ಉರುಳಿ ಬೀಳದಂತೆ ತಂತಿ ಬಿಗಿಯಲಾಗಿತ್ತು. ಈ ಹಿನ್ನೆಲೆಯಲ್ಲಿ ಹೊಸ ವಿದ್ಯುತ್ ಕಾಸ್ಟ್ ಐರನ್ ಕಂಬಗಳನ್ನು ಅಳವಡಿಸಲು ಮೈಸೂರು ಅರಮನೆ ಮಂಡಳಿ ನಿರ್ಧಾರ ಮಾಡಿತ್ತು.

ಇಂತಹ ಸಿಮೆಂಟ್ ಕಂಬಗಳನ್ನು ತೆರವು ಮಾಡಿ, ಕಾಸ್ಟ್ ಐರನ್ ವಿದ್ಯುತ್ ಕಂಬ ಅಳವಡಿಸಲು ಅರಮನೆ ಮಂಡಳಿ ಸಭೆಯಲ್ಲಿ ನಿರ್ಧರಿಸಿ, ಕಾಸ್ಟ್ ಐರನ್ ಕಂಬ ಅಳವಡಿಸಲು ಇ ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿತ್ತು.

ಪಾರಂಪರಿಕ ಶೈಲಿಯ ಕಾಸ್ಟ್ ಐರನ್ ಕಂಬಗಳನ್ನು ಕಲ್ಪಿಸಲು ತಮಿಳುನಾಡು ಕೊಯಮತ್ತೂರಿನ ಕಂಪನಿಗೆ ಅರಮನೆ ಮಂಡಳಿ, 15 ಲಕ್ಷ ರೂಪಾಯಿ ಟೆಂಡರ್ ನೀಡಿದ್ದು, ಅದರಂತೆ ಅರಮನೆ ಎದುರಿನ ಸಿಮೆಂಟ್ ಕಂಬಗಳನ್ನು ಈಗ ತೆರವು ಮಾಡಲಾಗಿದ್ದು, ಕೊಯಮತ್ತೂರಿನಿಂದ ತರಿಸಿರುವ ಕಾಸ್ಟ್ ಐರನ್ ಕಂಬಗಳನ್ನು ಅಳವಡಿಸಲಾಗುತ್ತಿದೆ. ಶಿಥಿಲಾವಸ್ಥೆಯಲ್ಲಿದ್ದ ಎಲ್ಲಾ 24 ಸಿಮೆಂಟ್ ಕಂಬ ತೆರವು ಮಾಡಿದ್ದು, ಅಷ್ಟೇ ಸಂಖ್ಯೆಯ ಕಾಸ್ಟ್ ಐರನ್ ಕಂಬ ಅಳವಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಮೂಲಕ ಅರಮನೆಯಲ್ಲಿರುವ ಎಲ್ಲಾ ವಿದ್ಯುತ್ ಕಂಬಗಳು ಕಾಸ್ಟ್ ಐರನ್ ಕಂಬಗಳಾಗುತ್ತವೆ.

ಕಬ್ಬಿಣದ ದ್ರವವನ್ನು ಎರಕ ಹೊಯ್ದು ಕಾಸ್ಟ್ ಐರನ್ ಕಂಬ ತಯಾರು ಮಾಡಲಾಗುತ್ತದೆ. ಬಹಳ ಗಟ್ಟಿಯಾಗಿರುವ ಈ ಕಂಬಗಳು ತುಕ್ಕು ಹಿಡಿಯುವುದಿಲ್ಲ, ಅಷ್ಟು ಬೇಗ ಶಿಥಿಲವಾಗುವುದಿಲ್ಲ. ಇದರಿಂದ ಈಗ ಅಳವಡಿಸಿರುವ ಕಾಸ್ಟ್ ಐರನ್ ವಿದ್ಯುತ್ ಕಂಬಗಳು ಬಹಳ ವರ್ಷ ಬಾಳಿಕೆ ಬರುತ್ತವೆ.

ಫೈಬರ್ ಡೂಮ್ ಉತ್ತಮ ಸ್ಥಿತಿಯಲ್ಲಿರುವ ಹಿನ್ನೆಲೆಯಲ್ಲಿ ಇದನ್ನು ಬದಲಾಯಿಸಿಲ್ಲ. ಹೊಸ ಕಾಸ್ಟ್ ಐರನ್ ವಿದ್ಯುತ್ ಕಂಬಗಳಿಗೆ ಹಳೆ ಫೈಬರ್ ಡೂಮ್‌ಗಳನ್ನೇ ಅಳವಡಿಸಲಾಗಿದೆ.



ಚಾ.ಬೆಟ್ಟದಲ್ಲಿ ಕಾರು ಪಲ್ಟಿ: ಮಗು ಸೇರಿ ನಾಲ್ವರು ಅಪಾಯದಿಂದ ಪಾರು

ಮೈಸೂರು, ಏ.19 (ಆರ್‌ಕೆ)–ಚಾಮುಂಡಿ ಬೆಟ್ಟದಲ್ಲಿ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ದುರಂತ ಇಂದು ಬೆಳಿಗ್ಗೆ ಸಂಭವಿಸಿದೆ.



ಇಂದು ಬೆಳಿಗ್ಗೆ ಬೆಂಗಳೂರಿಂದ ಮೈಸೂರಿನ ಚಾಮುಂಡಿಬೆಟ್ಟಕ್ಕೆ ತೆರಳುತ್ತಿದ್ದ ಟಾಟಾ ಹಾರಿಯರ್ಸ್ (ಕೆಎ 03 ಎನ್‌ಯು 8053) ಕಾರು, ವ್ಯೂ ಪಾಯಿಂಟ್ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಎಡ ಬದಿಯ ತಡೆಗೋಡೆಗೆ ಅಪ್ಪಳಿಸಿದ ರಭಸಕ್ಕೆ ಟಯರ್ ಬ್ಲಾಸ್ಟ್ ಆಗಿ ಪಲ್ಟಿ ಹೊಡೆದಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಮಗು ಸೇರಿ ನಾಲ್ವರು ಅಪಾಯದಿಂದ ಸುರಕ್ಷಿತವಾಗಿ ಪಾರಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಸಿದ್ಧಾರ್ಥ ಸಂಚಾರ ಠಾಣೆ ಪೊಲೀಸರು, ಕಾರನ್ನು ಕ್ರೇನ್ ಸಹಾಯದಿಂದ ತೆರವುಗೊಳಿಸಿ ಠಾಣೆಗೆ ತಂದರು. ಹಿಂದಿನ ಸೀಟ್‌ನಲ್ಲಿದ್ದ ಮಗು ಮಾತನಾಡಿಸಲು ಚಾಲಕ ತಿರುಗಿದಾಗ ನಿಯಂತ್ರಣ ತಪ್ಪಿ ಅಪಘಾತಕ್ಕೆ ಕಾರಣ ಎಂದು ತಿಳಿದು ಬಂದಿದೆ. ನಂತರ ಕಾರಿನಲ್ಲಿದ್ದವರು ಬೇರೆ ವಾಹನದಲ್ಲಿ ಪ್ರಯಾಣ ಮುಂದುವರೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.